ಸಂಪುಟ: 05 ಸಂಚಿಕೆ: 339 ಪುಟಗಳು: 08 ಶನಿವಾರ 21 ಫೆಬ್ರವರಿ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**

ಮನಸ್ಸನ್ನು ಶಕ್ತಿಯುತವೂ, ಶಿಸ್ತುಬದ್ಧವೂ ಆಗಿಸುವುದರಲ್ಲಿಯೇ ಜ್ಞಾನದ ಮೌಲ್ಯವಿರುವುದು.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


## ವಿನ್ಯಾಸಗಾರರು ಬೇಕಾಗಿದ್ದಾರೆ



ಪೇಜ್ ಮೇಕರ್, ಇನ್ ಡಿಸೈನರ್, ಕನ್ನಡ ಟೈಪ್ ಮಾಡಬಲ್ಲವರು. ಬೆಂಗಳೂರಿನಲ್ಲಿ ವಾಸವಿರುವ ಬೆಂಗಳೂರು ಕಚೇರಿಯಲ್ಲಿ ಕೆಲಸ ಮಾಡಲು ಇಚ್ಛಿಸುವ (4 ಮಂದಿ) ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ, ಕನ್ನಡ ಭಾಷೆಯ ಮೇಲೆ ಹಿಡಿತ, ಸಾಮಾನ್ಯ ಜ್ಞಾನ, ಓದುವ ಹವ್ಯಾಸ ಹಾಗೂ ಉತ್ಸಾಹ ಕಾತುರವಿರುವ ಆಸಕ್ತರಿಗೆ ನಿರ್ದಿಷ್ಟ ಪದವಿಯ ಅಗತ್ಯವಿಲ್ಲ. ವಯೋಮಿತಿ ಗರಿಷ್ಠ 25 ವರ್ಷ. ಆಸಕ್ತರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳುಳ್ಳ ಅರ್ಜಿ ಸಲ್ಲಿಸಿ ಅಥವಾ ಮುಖತಃ ಭೇಟಿ ನೀಡಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

**9448225696**

ಉದಯ ವಾಹಿನಿ

#: 1230 'JAYAMAHAL 13th cross, 2nd phase, Girinagar, Bangalore-560085. (Near to bangalore one park, opposite mandya medical)
udayavahininews@gmail.com


## ಕೇಡಿಗಳ ಕಿತಾಪತಿ ಬಾಗಲಕೋಟೆ ಬಹುತೇಕ ಶಾಂತಿ



**ಶಿವಾಜಿ ಜಯಂತಿ ಹಿನ್ನೆಲೆ ನಡೆಯುತ್ತಿದ್ದ ಮೆರವಣಿಗೆ ವೇಳೆ ಕಿಡಿಗೇಡಿಗಳು ಕಲ್ಲು ತೂರಾಟ ಮಾಡಿದ್ದರಿಂದ ಬಾಗಲಕೋಟೆ ನಗರದಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿದ್ದು , ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ನಗರದಲ್ಲಿ ಮರಾಠ ಸಮುದಾಯದ ವತಿಯಿಂದ ಶಿವಾಜಿ ಮಹಾರಾಜರ ಜಯಂತಿ ಪ್ರಯುಕ್ತ ಬೃಹತ್ ಮೆರವಣಿಗೆ ಹಮ್ಮಿಕೊಳ್ಳಲಾಗಿತ್ತು. ಕಿಲ್ಲಾದ ಅಂಬಾಭವಾನಿ ದೇವಾಲಯದಿಂದ ಪ್ರಾರಂಭವಾದ ಶಿವಾಜಿ ಮಹಾರಾಜರ ಮೆರವಣಿಗೆ ಪ್ರಮುಖ ರಸ್ತೆಯ ಮೂಲಕ ಬಸವೇಶ್ವರ ವೃತ್ತ, ವಲ್ಲಭಭಾಯಿ ಚೌಕ್ ಮೂಲಕ ಪಂಕಾ ಮಸೀದಿ ಮುಂದೆ ಸಾಗಿ ಕಿಲ್ಲಾದಲ್ಲಿ ಮುಕ್ತಾಯ ಆಗುತ್ತಿತ್ತು. ಈ ವೇಳೆ ಕಲ್ಲು ತೂರಾಟ ನಡೆದಿದೆ. ಘಟನೆ ಹಿನ್ನೆಲೆ, ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾದ ಹಿನ್ನೆಲೆ ಪೊಲೀಸ್ ಬಿಗಿ ಬಂದೋಬಸ್ತ್ ಕಲ್ಪಿಸಲಾಗಿದೆ. ತಪ್ಪಿತಸ್ಥರನ್ನು ಬಂಧಿಸುವಂತೆ ಹಿಂದೂ ಸಂಘಟನೆ ಮುಖಂಡರು ಒತ್ತಾಯಿಸಿ ಪ್ರತಿಭಟನೆ ನಡೆಸಿದರು. ಪರಿಸ್ಥಿತಿ ತಿಳಿಗೊಳಿಸಲು ಪೊಲೀಸರು ಹರಸಾಹಸಪಟ್ಟರು.**

### ಮಸೀದಿ ಬಳಿ ಗಲಾಟೆ

ಎಂಜಿ ರಸ್ತೆಯ ಹತ್ತಿರದ ಘಂಕಾ ಮಸೀದಿ ಮುಂದೆ ಹಾಯ್ದು ಮೆರವಣಿಗೆ ಸಾಗುತ್ತಿದ್ದ ವೇಳೆ 'ಬನಾಯೇಂಗೇ ಮಂದಿರ' ಹಾಡು ಕೇಳಿ ಬಂತು. ಈ ಹಾಡಿಗೆ ಹಿಂದೂಪರ ಸಂಘಟನೆಗಳ ಯುವಕರು ಕುಣಿದು ಕುಪ್ಪಳಿಸುತ್ತಿದ್ದರು. ರೊಚ್ಚಿಗೆದ್ದ ಒಂದು ಕೋಮಿನ ಯುವಕರು ಘಂಕಾ ಮಸೀದಿ ಒಳಗಡೆಯಿಂದ ಕೂಗಿ, ಗಲಾಟೆ ಮಾಡಲು ಆರಂಭಿಸಿದರು. ಇದರಿಂದ ಎರಡೂ ಕಡೆ ವಾಗ್ವಾದ ಶುರುವಾಯಿತು. ಒಂದು ಕೋಮಿನ ಯುವಕರು ಹಾಡು ನಿಲ್ಲಿಸುವಂತೆ ಕೂಗಿದರೆ, ಇನ್ನೊಂದು ಕೋಮಿನ ಯುವಕರು, ಕುಣಿದು ಇದು ನಮ್ಮ ಹಾಡು ಎಂಬಂತೆ ನೃತ್ಯ ಮಾಡುತ್ತಿದ್ದರು. ಈ ವೇಳೆ ಘಂಕಾ ಮಸೀದಿ ಒಳಗಡೆ ಇದ್ದ ಒಂದು ಕೋಮಿನ ಯುವಕರು, ಕಲ್ಲು ತೂರಿದರು. ಆ ಕಲ್ಲು ಎಸ್ಪಿ ಸಿದ್ದಾರ್ಥ ಗೋಯಲ್ ತಲೆಗೆ ಬಿದ್ದಿದ್ದು, ತಲೆಗೆ ತೀವ್ರ ಪೆಟ್ಟು ಬಿದ್ದು, ರಕ್ತ ಬರಲಾರಂಭಿಸಿತು. ಆಗ ಪೊಲೀಸರು ತೀವ್ರ ಅಲರ್ಟ್ ಆಗಿದ್ದು, ಮೆರವಣಿಗೆಯನ್ನು ಲಗುಬಗೆಯಿಂದ ಕಳುಹಿಸಿದರು. ತಲೆಗೆ ಪೆಟ್ಟು ಬಿದ್ದರೂ ಗಲಾಟೆಯನ್ನು ಮತ್ತಷ್ಟು ವಿಕೋಪಕ್ಕೆ ಹೋಗದಂತೆ ತಡೆಯಲು ಹರಸಾಹಸಪಟ್ಟರು.

### ಡಿಸಿ ನೇತೃತ್ವದ ಶಾಂತಿ ಸಭೆ ವಿಫಲ

ಬಾಗಲಕೋಟೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಕರೆಯಲಾಗಿದ್ದ ಶಾಂತಿ ಸಭೆ ವಿಫಲವಾಗಿದೆ. ಶಾಂತಿ ಸಭೆಗೆ ಹಿಂದೂ ಮುಖಂಡರು ಹಾಜರಾಗಿದ್ದರು. ಆದ್ರೆ, ಮುಸ್ಲಿಂ ಮುಖಂಡರು ಗೈರಾದ ಹಿನ್ನೆಲೆ ಶಾಂತಿ ಸಭೆ ವಿಫಲವಾಗಿದೆ. ಇದರಿಂದ ಆಕ್ರೋಶಗೊಂಡ ಹಿಂದೂ ಮುಖಂಡರೂ ಸಭೆ ತ್ಯಜಿಸಿ ಹೊರನಡೆದರು. ಬಳಿಕ ಎಲ್ಲರನ್ನ ಸಮಾಧಾನಪಡಿಸಿದ ಡಿಸಿ ಫೆ.22 ರಂದು ಮತ್ತೆ ಶಾಂತಿ ಸಭೆ ಕರೆದಿದ್ದಾರೆ.



**ತೆಲಂಗಾಣ, ಮಧ್ಯಪ್ರದೇಶದಲ್ಲಿ ಕೋಮು ಸಂಘರ್ಷ**

• ಉದಯವಾಹಿನಿ, ಬಾಗಲಕೋಟೆ

ಛತ್ರಪತಿ ಶಿವಾಜಿ ಮಹಾರಾಜರ 396ನೇ ಜಯಂತಿ ಅಂಗವಾಗಿ ಬಾಗಲಕೋಟೆ ನಗರದಲ್ಲಿ ಉಂಟಾದ ಉದ್ವಿಗ್ನ ಪರಿಸ್ಥಿತಿಯ ಹಿನ್ನೆಲೆ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಬಾಗಲಕೋಟೆ ಶಹರ, ನವನಗರ ಹಾಗೂ ವಿದ್ಯಾಗಿರಿಯಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023ರ ಕಲಂ 163ರಡಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಹಾಗೂ ನಾಗರಿಕರು ಮತ್ತು ಸಾರ್ವಜನಿಕ ಆಸ್ತಿ-ಪಾಸ್ತಿಗಳ



ಸುರಕ್ಷತೆ ಕಾಪಾಡುವ ಹಿತದೃಷ್ಟಿಯಿಂದ ಫೆಬ್ರವರಿ 19ರ ಮಧ್ಯರಾತ್ರಿಯಿಂದ ಫೆಬ್ರವರಿ 24ರ ಮಧ್ಯರಾತ್ರಿ ವರೆಗೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಸಹಾಯಕ ಆಯುಕ್ತರು ಹಾಗೂ ಉಪವಿಭಾಗೀಯ ದಂಡಾಧಿಕಾರಿ ಸಂತೋಷ ಬಿ. ಜಗಲಾಸರ ಅವರು ಆದೇಶ ಹೊರಡಿಸಿದ್ದು, ಈ ಅವಧಿಯಲ್ಲಿ ಬಾಗಲಕೋಟೆ ಶಹರ, ನವನಗರ ಮತ್ತು ವಿದ್ಯಾಗಿರಿಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ನಾಲ್ಕು ಅಥವಾ ಅದಕ್ಕಿಂತ ಹೆಚ್ಚು ಜನರು ಗುಂಪಾಗಿ ಸೇರುವುದನ್ನು, ಅಪಾಯಕಾರಿ ಶಸ್ತ್ರಾಸ್ತ್ರಗಳನ್ನು ಹಿಡಿದು ತಿರುಗಾಡುವುದನ್ನು ಹಾಗೂ ಅನುಮತಿ ಇಲ್ಲದೆ ಯಾವುದೇ ಸಭೆ, ಸಮಾರಂಭ, ಧರಣಿ ನಡೆಸುವುದನ್ನು ಸಂಪೂರ್ಣ ನಿಷೇಧಿಸಲಾಗಿದೆ. ನಿಷೇಧಾಜ್ಞೆಯನ್ನು ಕಟ್ಟುನಿಟ್ಟಾಗಿ ಪಾಲಿಸಲು, ಅಗತ್ಯ ಪೊಲೀಸ್ ಭದ್ರತೆ ಒದಗಿಸಲು ಬಾಗಲಕೋಟೆ ಉಪವಿಭಾಗದ ಪೊಲೀಸ್ ಉಪಾಧೀಕ್ಷಕರಿಗೆ ಸೂಚಿಸಲಾಗಿದೆ.

**8 ಜನರ ಬಂಧನ:** ಕಲ್ಲು ತೂರಾಟ ಪ್ರಕರಣ ಸಂಬಂಧ ಎ1 ಆರೋಪಿ ಸೇರಿ 8 ಜನರನ್ನು ಬಂಧಿಸಿದ್ದೇವೆ. ಪ್ರಮುಖ ಆರೋಪಿ ಮಾತ್ರ ಕಲ್ಲು ಎಸೆದಿದ್ದಾನೆ. ಇನ್ನುಳಿದವರನ್ನು ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ಬಂಧಿಸಲಾಗಿದೆ ಎಂದು ಎಸ್‌ಪಿ ಸಿದ್ದಾರ್ಥ ಗೋಯಲ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ್ದಾರೆ.

ಕಲ್ಲು ತೂರಾಟದಲ್ಲಿ ನಮಗೆ ಯಾವುದೇ ತೊಂದರೆ ಆಗಿಲ್ಲ. ಇಬ್ಬರು ಪೊಲೀಸ್ ಕಾನ್‌ಸ್ಟೇಬಲ್ ಸೇರಿ ಮೂವರು ಗಾಯಗೊಂಡಿದ್ದಾರೆ. ಘಟನೆ ಬಳಿಕ ಮೆರವಣಿಗೆ ಶಾಂತಿಯುತವಾಗಿ ಮುಗಿದಿದೆ. ನಾನೂ ಸೇರಿ ನಮ್ಮ ಎಲ್ಲಾ ಸಿಬ್ಬಂದಿ ಭದ್ರತೆ ಕೈಗೊಂಡಿದ್ದೆವು. ಸದ್ಯ ಪರಿಸ್ಥಿತಿ ನಿಯಂತ್ರಣದಲ್ಲಿದೆ. ಘಟನೆಗೆ ಕಾರಣರಾದ ಎಲ್ಲರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ ಎಂದು ಎಸ್‌ಪಿ ತಿಳಿಸಿದ್ದಾರೆ.

**ಗಾಯ, ತಳ್ಳೋ ಗಾಡಿಗೆ ಬೆಂಕಿ:** ಕಲ್ಲು ತೂರಾಟ ಹಾಗೂ ಸಂಘರ್ಷದ ವಾತಾವರಣದಿಂದಾಗಿ ಓರ್ವ ವ್ಯಕ್ತಿಗೆ ಗಾಯವಾಗಿದೆ. ಇದೇ ಸಂದರ್ಭದಲ್ಲಿ ಪಕ್ಕದಲ್ಲೇ ಇದ್ದ ತರಕಾರಿ ಮಾರುಕಟ್ಟೆಯ ಮೂರು ತಳ್ಳು ಗಾಡಿಗಳಿಗೆ ದುಷ್ಕರ್ಮಿಗಳು ಬೆಂಕಿ ಹಚ್ಚಿದ್ದಾರೆ.

ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ಕೊಡಿಸಲಾಗುತ್ತಿದೆ.

**ನಿಷ್ಪಕ್ಷಪಾತವಾಗಿ ತನಿಖೆ:** ಬಾಗಲಕೋಟೆಯಲ್ಲಿ ನಡೆದ ಕಲ್ಲುತೂರಾಟ ಘಟನೆಯು ಸಮಾಜದ ಶಾಂತಿ, ಸೌಹಾರ್ದತೆಗೆ ಮಾರಕ. ಇದನ್ನು ನಾನು ಮತ್ತು ನಮ್ಮ ಸರ್ಕಾರ ಬಲವಾಗಿ ಖಂಡಿಸುತ್ತದೆ. ಘಟನೆಯ ಬಗ್ಗೆ ಹಿರಿಯ ಪೊಲೀಸ್ ಅಧಿಕಾರಿಗಳ ಬಳಿ ಚರ್ಚಿಸಿದ್ದು, ನಿಷ್ಪಕ್ಷಪಾತ ತನಿಖೆ ನಡೆಸಿ, ದುಷ್ಕೃತ್ಯ ಎಸಗಿದ ಪುಂಡರಿಗೆ ಕಾನೂನಿನ ಮೂಲಕ ತಕ್ಕ ಉತ್ತರ ನೀಡುವಂತೆ ಸೂಚನೆ ನೀಡಿದ್ದೇನೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ.

ಈ ಕುರಿತಾಗಿ ಹೇಳಿಕೆ ನೀಡಿರುವ ಅವರು, 'ಈಗಾಗಲೇ ಪ್ರಕರಣದ ಸಂಬಂಧ ಕೆಲವು ಆರೋಪಿಗಳನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಲಾಗುತ್ತಿದ್ದು, ಘಟನೆಗೆ ಕಾರಣರಾದ ಪ್ರತಿಯೊಬ್ಬರಿಗೂ ಶಿಕ್ಷೆ ನಿಶ್ಚಿತ' ಎಂದಿದ್ದಾರೆ.

ನಾಡಿನ ಜನರಿಗೆ ಭಯಮುಕ್ತ ನೆಮ್ಮದಿಯ ಬದುಕು ನೀಡುವುದು ನಮ್ಮ ಮೊದಲ ಆದ್ಯತೆ. ಜನರ ಶಾಂತಿ – ನೆಮ್ಮದಿಗೆ ಭಂಗ ತರುವ ಯಾವುದೇ ವ್ಯಕ್ತಿ – ಶಕ್ತಿಗಳನ್ನು ನಾವು ಸಹಿಸುವುದಿಲ್ಲ. ಸಾರ್ವಜನಿಕರು ಯಾವುದೇ ಪ್ರಚೋದನೆಗಳಿಗೂ ಕಿವಿಗೊಡದೆ, ಸಂಯಮದಿಂದ ವರ್ತಿಸಿ. ಪೊಲೀಸ್ ಇಲಾಖೆ ತನ್ನ ಕರ್ತವ್ಯವನ್ನು ನಿಷ್ಪಕ್ಷಪಾತವಾಗಿ ಮಾಡಲಿದೆ ಎಂದು ತಿಳಿಸಿದ್ದಾರೆ.

**1** ಮಧ್ಯಪ್ರದೇಶ, ತೆಲಂಗಾಣದಲ್ಲೂ ಕಲ್ಲು ತೂರಾಟದ ಘಟನೆ

**2** ಕರ್ನಾಟಕದ ಬಾಗಲಕೋಟೆ ಜಿಲ್ಲೆಯಲ್ಲೂ ಕಲ್ಲು ತೂರಾಟ

**3** ಮೂರು ಸ್ಥಳಗಳಲ್ಲಿ ಈಗ ಪರಿಸ್ಥಿತಿ ನಿಯಂತ್ರಣಕ್ಕೆ

### ಯೂಟ್ಯೂಬರ್ ಮೇಲೆ ಹಲ್ಲೆ.. ಗಲಾಟೆ, ಅಶ್ರುವಾಯು!

ಇತ್ತ ತೆಲಂಗಾಣ ರಾಜಧಾನಿ ಹೈದ್ರಾಬಾದ್‌ನಲ್ಲೂ ಛತ್ರಪತಿ ಶಿವಾಜಿ ಮೆರವಣಿಗೆ ವೇಳೆ ಗಲಾಟೆ ನಡೆದಿದೆ.. ಹೈದರಾಬಾದ್‌ನ ಅಂಬರ್‌ಪೇಟೆ ಜಾಮಾ ಮಸೀದಿಯ ಸುತ್ತಮುತ್ತಲ ಪ್ರದೇಶದ ಬಳಿ ಯೂಟ್ಯೂಬರ್ ಒಬ್ಬ ವಿಡಿಯೋ ಮಾಡ್ತಿದ್ದನ್ನು ವಿರೋಧಿಸಿ ಕಿಡಿಗೇಡಿಗಳು ಹಲ್ಲೆ ನಡೆಸಿದ್ದರು. ಇದೇ ಸಮಯದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಮೆರವಣಿಗೆ ಆ ಪ್ರದೇಶದ ಮೂಲವೇ ಹಾದು ಹೋಗ್ತಾ ಇತ್ತು.. ಈ ವೇಳೆ ಎರಡೂ ಸಮುದಾಯಗಳ ನಡುವೆ ಗಲಾಟೆ ಜೋರಾಗಿ ಪರಸ್ಪರ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದ್ದಾರೆ.. ಪರಿಸ್ಥಿತಿ ವಿಕೋಪಕ್ಕೆ ತಿರುಗುತ್ತಿದ್ದಂತೆ, ಸ್ಥಳಕ್ಕೆ ಬಂದ ಪೊಲೀಸರು ಪರಿಸ್ಥಿತಿ ನಿಯಂತ್ರಿಸಲು ಹರಸಾಹಸ ಪಟ್ರು.. ಅಶ್ರುವಾಯು ಸಿಡಿಸುವ ಮೂಲಕ ಜನರನ್ನು ಚದುರಿಸಿದ್ರು.. ಸದ್ಯ ಪರಿಸ್ಥಿತಿ ಶಾಂತವಾಗಿದ್ದು ಯಾರಿಂದಲೂ ದೂರು-ಪ್ರತಿದೂರುಗಳು ಬಂದಿಲ್ಲ ಅಂತ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.



## ಕುರಿ ಕಾಯುತ್ತಿದ್ದವ ಸಿಎಂ ಆದದ್ದೇ ಪಟ್ಟಭದ್ರರ ಕಣ್ಣು ಕೆಂಪಾಗಲು ಕಾರಣ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ 'ಮುಖ್ಯಮಂತ್ರಿ' ಬದಲಾವಣೆ ಕುರಿತು ಚರ್ಚೆಗಳು ನಡೆಯುತ್ತಿರುವ ಬೆನ್ನಲ್ಲೇ ಸಿದ್ದರಾಮಯ್ಯ ಅವರು ಫೇಸ್‌ಬುಕ್‌ನಲ್ಲಿ ಮಾಡಿರುವ ಪೋಸ್ಟ್‌ಗಳು ಭಾರೀ ಚರ್ಚೆಗೆ ಗ್ರಾಸವಾಗಿವೆ.

'ಕುರಿ ಕಾಯುತ್ತಿದ್ದವನು ಸಿಎಂ ಆದದ್ದೇ ಪಟ್ಟಭದ್ರರ ಕಣ್ಣು ಕೆಂಪಾಗಲು ಕಾರಣ. ನನ್ನ ಮೇಲೆ ವಿರೋಧಿಗಳು ನಡೆಸುತ್ತಿರುವ ಬಹುತೇಕ ದಾಳಿಗಳು, ಮಾಡುತ್ತಿರುವ ಟೀಕೆ–ಆರೋಪಗಳಿಗೆ ನಾನು ಹುಟ್ಟಿದ ಜಾತಿಯೂ ಒಂದು ಕಾರಣ. ಕುರಿ ಕಾಯುತ್ತಾ ಇರಬೇಕಾದವನು ಮುಖ್ಯಮಂತ್ರಿ ಆಗಿ ಬಿಟ್ಟನಲ್ಲಾ, ಆರ್ಥಿಕ ತಜ್ಞರಿಗೆ ಸರಿಸಮನಾಗಿ ನಿಂತು ಸಾಲು ಸಾಲು ಬಜೆಟ್ ಮಂಡಿಸಿ ಶಹಬ್ಬಾಸ್ ಗಿರಿ ಗಳಿಸುತ್ತಿದ್ದಾನಲ್ಲಾ ಎನ್ನುವ ಅಸಹನೆ, ಅವರೊಳಗೆ ದ್ವೇಷ, ಅಸೂಯೆ ಕುದಿಯುತ್ತಿದೆ. ಇವನೊಬ್ಬನನ್ನು ರಾಜಕೀಯವಾಗಿ ಮುಗಿಸಿಬಿಟ್ಟರೆ ಅದರ ನಂತರ ನಮ್ಮೆಲ್ಲರ ಹಾದಿ ಸುಲಭವಾಗುತ್ತದೆ ಎನ್ನುವ ರಾಜಕೀಯ ದುರುದ್ದೇಶದ ಲೆಕ್ಕಾಚಾರ ಅವರ ಮನಸ್ಸಿನಲ್ಲಿದೆ' ಎಂದು ಯಾರ ಹೆಸರನ್ನು ಉಲ್ಲೇಖಿಸದೆ ಪರೋಕ್ಷವಾಗಿ ವಾಗ್ದಾಳಿ ನಡೆಸಿದ್ದಾರೆ. ಸಾಮಾಜಿಕ ಬದಲಾವಣೆಗೆ ಕೈ ಹಾಕಿದವರೆಲ್ಲರ ವಿರುದ್ಧ ಇಂತಹ ಷಡ್ಯಂತ್ರಗಳು ನಡೆದಿರುವುದನ್ನು ಇತಿಹಾಸದ ಪುಟದಲ್ಲಿ ಕಾಣಬಹುದು. ಬುದ್ಧ, ಬಸವಣ್ಣ, ಅಂಬೇಡ್ಕರ್, ಗಾಂಧೀಜಿ, ಪೆರಿಯಾರ್, ನಾರಾಯಣ ಗುರು, ಕನಕದಾಸರಾದಿ ಇತ್ಯಾದಿ ಸಾಮಾಜಿಕ ಪರಿವರ್ತನೆಗೆ ಹೋರಾಟ ನಡೆಸಿದವರೆಲ್ಲರನ್ನು ಹಣಿಯುವ, ದಮನಿಸುವ, ಮುಗಿಸುವ ಸಂಚು–ಒಳಸಂಚುಗಳು ನಡೆಯುತ್ತಲೇ ಬಂದಿದೆ.

## ಪೊಲೀಸ್–ಜೈಲು ಕಾರ್ಯವೈಖರಿಗೆ ಹೈಕೋರ್ಟ್ ಕೆಂಡಾಮಂಡಲ

• ಉದಯವಾಹಿನಿ, ಬೆಂಗಳೂರು

ನಾಲ್ಕು ವರ್ಷಗಳಿಂದ ಜೈಲಿನಲ್ಲಿರುವ ಆರೋಪಿಯೊಬ್ಬರನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ವಿಚಾರಣಾ ನ್ಯಾಯಾಲಯಕ್ಕೆ ಹಾಜರುಪಡಿಸದ ಜೈಲು ಅಧಿಕಾರಿಗಳು ಮತ್ತು ಇದೇ ಆರೋಪಿ ಜೈಲಿನಲ್ಲಿದ್ದರೂ ಜಾಮೀನು ರಹಿತ ವಾರಂಟ್ ಅನ್ನು ಜಾರಿಗೆ ತರಲು ಊರೆಲ್ಲಾ ತಲಾಶ್ ಮಾಡಿದ ಎಚ್‌ಎಎಲ್ ಪೊಲೀಸರ ಕಾರ್ಯವೈಖರಿಗೆ ಕೆಂಡಾಮಂಡಲವಾದ ಹೈಕೋರ್ಟ್, ಕಾರಾಗೃಹಗಳ ಡಿಐಜಿ ಮತ್ತು ವೈಟ್ ಫೀಲ್ಡ್ ವಿಭಾಗದ ಡಿಸಿಪಿಯ ಖುದ್ದು ಹಾಜರಿಗೆ ಆದೇಶಿಸಿದೆ. ಈ ಸಂಬಂಧ ನಗರದ ಮದರಸಾ ಇಸ್ಲಾಂಪುರ ನಿವಾಸಿ ಇಮ್ರಾನ್ ಅಲಿಯಾಸ್ ಕುಳ್ಳ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಸ್.ಆರ್.ಜಗದೀಶ, 'ಆರೋಪಿ ಇಮ್ರಾನ್ ಅವರನ್ನು 2022ರ ಡಿಸೆಂಬರ್ 20ರಿಂದ ನ್ಯಾಯಾಂಗ ಬಂಧನದಲ್ಲಿ ಇರಿಸಲಾಗಿದೆ. ಈತನಕ ವಿಚಾರಣಾ ನ್ಯಾಯಾಲಯಕ್ಕೆ ಕೇವಲ ಮೂರು ಬಾರಿ ಮಾತ್ರ ವಿಡಿಯೋ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಲಾಗಿದೆ. ಅಂತೆಯೇ, ಎಚ್‌ಎಲ್ ಪೊಲೀಸ್ ಠಾಣೆಯಲ್ಲೇ ದಾಖಲಾಗಿರುವ ಮತ್ತೊಂದು ಪ್ರಕರಣದಲ್ಲಿ ಬಾಡಿ ವಾರಂಟ್ ಹೊರಡಿಸಲಾಗಿತ್ತು. ಆದರೆ, ಅಸಾಮಿ ಮನೆಯಲ್ಲಿ ಇಲ್ಲದ ಕಾರಣ ವಾರಂಟ್ ಜಾರಿಗೊಳಿಸಿಲ್ಲ ಎಂದು ಎಚ್‌ಎಎಲ್ ಪೊಲೀಸರು ತಿಳಿಸಿದ್ದಾರೆ' ಎಂದರು.

## ಕರ್ನಾಟಕದ ದೇಗುಲಗಳಲ್ಲಿ ಶೂಟಿಂಗ್‌ಗೆ ಬ್ರೇಕ್!

• ಉದಯವಾಹಿನಿ, ಬೆಂಗಳೂರು

ಇನ್ನು ಮುಂದೆ ರಾಜ್ಯದ ಮುಜರಾಯಿ ದೇವಾಲಯಗಳಲ್ಲಿ ಚಿತ್ರೀಕರಣ ಮಾಡಬೇಕೆಂದರೆ ಶುಲ್ಕ ಪಾವತಿಸಬೇಕು!

ಹೌದು, ರಾಜ್ಯದ ಎಲ್ಲಾ 'ಎ' ಮತ್ತು 'ಬಿ' ಗ್ರೇಡ್ ದೇವಾಲಯಗಳಲ್ಲಿ ಯಾವುದೇ ಚಿತ್ರೀಕರಣ ಮಾಡಬೇಕೆಂದರೆ ಶುಲ್ಕ ಕಟ್ಟಬೇಕು.

ಸಿನಿಮಾ, ಧಾರಾವಾಹಿ, ಸಾಕ್ಷ್ಯಚಿತ್ರ, ಸುದ್ದಿ ವಾಹಿನಿಗಳು ಹೀಗೆ ಮುಂದುವರೆದಂತೆ ಯಾವುದೇ ತರಹದ ವಿಡಿಯೋ ರೆಕಾರ್ಡಿಂಗ್ ಮಾಡಬೇಕೆಂದರೆ ಮುಜರಾಯಿ ಇಲಾಖೆಗೆ ನಿಗದಿತ ಹಣ ಕಟ್ಟಬೇಕು.

ಈ ನೀತಿ ಹೊಸತಲ್ಲ. ಆದರೆ, ಕಳೆದ ವರ್ಷದಿಂದ ಇದನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲಾಗಿದೆ. 2003ರಲ್ಲಿ ಈ ಕುರಿತು ಇಲಾಖೆ ಒಂದು ಮಾರ್ಗಸೂಚಿ ಹೊರಡಿಸಿತ್ತು. ನಂತರ 2012ರಲ್ಲಿ ಮತ್ತೊಂದು ಮಾರ್ಗಸೂಚಿ ಹೊರಡಿಸಿತ್ತು. ಆದರೆ, ವಿಡಿಯೋ ಮಾಡುವಾಗ ಹಣ ಕಟ್ಟಬೇಕು ಎಂಬ ಮಾಹಿತಿ ಹಲವರಿಗೆ ಇರಲಿಲ್ಲ. ಅಲ್ಲದೆ ಸಿನಿಮಾ, ಧಾರಾವಾಹಿಗಳಿಗೆ ಸೆಟ್ ಹಾಕಿದ ನಂತರ ಅನುಮತಿ ಪಡೆಯುತ್ತಿದ್ದರು. ಆದರೆ, ಇತ್ತೀಚೆಗೆ ಹಲವರು ಮೊಬೈಲ್‌ಗಳಲ್ಲಿ ವಿಡಿಯೋ ಚಿತ್ರೀಕರಣ ಮಾಡಿಕೊಂಡು ರೀಲ್ಸ್ ಮಾಡುವುದು, ಯೂಟ್ಯೂಬ್ ಚಾನೆಲ್‌ಗಳು ಹಾಗೂ ಇತರೆ ಕೆಲವರು ವಾಣಿಜ್ಯ ಉದ್ದೇಶಗಳಿಗೆ ದೇವಾಲಯದ ಪಾವಿತ್ರ್ಯತೆ



**ಶುಲ್ಕ ಕಟ್ಟಿದ್ರೆ ಮಾತ್ರ ಅವಕಾಶ**

ಹಾಳು ಮಾಡುವ ಹಾಗೂ ಅವುಗಳ ಧಾರ್ಮಿಕತೆಗೆ ಧಕ್ಕೆ ತರುವ ರೀತಿ ಬಿಂಬಿಸಲಾಗುತ್ತಿದೆ. ಹೀಗಾಗಿ, ಕೆಲವು ಷರತ್ತುಗಳನ್ನು ವಿಧಿಸುವ ಮೂಲಕ ಚಿತ್ರೀಕರಣದ ವೇಳೆ ದೇವಾಲಯಗಳ ಪಾವಿತ್ರ್ಯತೆ ಕಾಪಾಡುವ ನಿಟ್ಟಿನಲ್ಲಿ 2012ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಮುಜರಾಯಿ ಇಲಾಖೆ ಮುಂದಾಗಿದೆ.

15 ಅಂಶಗಳ ಮಾರ್ಗಸೂಚಿ ಹೊರಡಿಸಲಾಗಿದೆ. ಇದನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ದೇವಾಲಯಗಳ ಆಡಳಿತ ಮಂಡಳಿಗಳಿಗೆ ಸೂಚಿಸಲಾಗಿದೆ. ಅನುಮತಿ ಪಡೆಯದೆ ಯಾರಾದರೂ ದೇವಾಲಯಗಳ ಚಿತ್ರೀಕರಣ ಮಾಡಿದ್ದು ಕಂಡು ಬಂದರೆ ತಕ್ಷಣ ಉಪಕರಣ ಪಡೆದು, ಆ ವಿಡಿಯೋವನ್ನು ಡಿಲಿಟ್ ಮಾಡಿ ವಾಪಸ್ ಕೊಡುತ್ತೇವೆ ಎಂದು ದೊಡ್ಡಗಣಪತಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ರುದ್ರೇಶ್ ತಿಳಿಸಿದರು. ಸಂಬಂಧಿಸಿದವರು ದೇವಾಲಯದ ಹೆಸರಿನಲ್ಲಿ ಬೇಡಿಕೆ ಹುಂಡಿ ಶುಲ್ಕ ಪಾವತಿಸಿ, ಅನುಮತಿ ಪತ್ರವನ್ನು ಮುಜರಾಯಿ ಇಲಾಖೆಯ ಪ್ರಧಾನ ಕಚೇರಿಯಲ್ಲಿ ನೀಡಬೇಕು. ಇಲಾಖೆಯಿಂದಲೇ ಸಂಬಂಧಿಸಿದ ದೇವಾಲಯಗಳಿಗೆ ಸೂಚನೆ ಹೋಗುತ್ತದೆ. ಆಗ ಆ ದೇವಾಲಯಗಳ ಆಡಳಿತ ಮಂಡಳಿಯವರು ಭಕ್ತರಿಗೆ ತೊಂದರೆಯಾಗದಂತೆ ಶೂಟಿಂಗ್‌ಗೆ ಅವಕಾಶ ನೀಡುತ್ತಾರೆ.

ಆದರೆ ಕ್ಷೇತ್ರದ ಮಹಿಮೆಯನ್ನು ಸಾರುವ ಸಾಕ್ಷ್ಯ ಚಿತ್ರವನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಸಬಾರದು. ಇದನ್ನು ಮಾರ್ಗಸೂಚಿಯಲ್ಲೇ ಉಲ್ಲೇಖಿಸಲಾಗಿದೆ. ದೇವಾಲಯದ ಗರ್ಭಗುಡಿ ಮತ್ತು ಮೂಲ ವಿಗ್ರಹಗಳ ಚಿತ್ರೀಕರಣವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಚಿತ್ರೀಕರಣಕ್ಕೆ ಅನುಮತಿ ಪಡೆದವರು ದೇವಾಲಯದ ಸಂಪ್ರದಾಯ, ಆಚರಣೆಗಳನ್ನು ಗೌರವಿಸಬೇಕು ಎಂದಿದ್ದಾರೆ ಬಿ. ಶರತ್, ಆಯುಕ್ತರು, ಮುಜರಾಯಿ ಇಲಾಖೆ.

### ಶುಲ್ಕ ಎಷ್ಟು ನಿಗದಿ

**ಬೆಂಗಳೂರು ನಗರದ ದೇವಸ್ಥಾನಗಳಲ್ಲಿ ಚಲನಚಿತ್ರಗಳ ಚಿತ್ರೀಕರಣಕ್ಕೆ 15 ಸಾವಿರ ರೂ. ಹಾಗೂ ಇತರೆ ಪ್ರದೇಶಗಳ ದೇವಸ್ಥಾನಗಳಲ್ಲಿ 10 ಸಾವಿರ ರೂ. ಮತ್ತು ಧಾರಾವಾಹಿ / ಸಾಕ್ಷ್ಯಚಿತ್ರ / ವಾಣಿಜ್ಯ ಉದ್ದೇಶಗಳ ಚಿತ್ರೀಕರಣಕ್ಕೆ ದಿನಕ್ಕೆ 5 ಸಾವಿರ ರೂ. ಹಾಗೂ ನ್ಯೂಸ್ ಚಾನೆಲ್‌ಗಳಲ್ಲಿ ಕ್ಷೇತ್ರದ ಮಹಿಮೆ ಸಾರುವ, ಐದು ನಿಮಿಷಗಳ ಅವಧಿ ಮೀರದ ಚಿತ್ರೀಕರಣಕ್ಕಾಗಿ 250 ರೂ. ಹಾಗೂ 5 ನಿಮಿಷಗಳ ನಂತರದ ಚಿತ್ರೀಕರಣಕ್ಕೆ ಗಂಟೆಗಳ ಆಧಾರದಲ್ಲಿ ಶುಲ್ಕ ನಿಗದಿಪಡಿಸಲಾಗಿದೆ.**

| ದೇಗುಲಗಳ ಆದಾಯದ ಲೆಕ್ಕಾಚಾರ | |
|---|---|
| ಒಟ್ಟು ಮುಜರಾಯಿ ದೇಗುಲಗಳು | 34,563 |
| ಅಧಿಕ ಆದಾಯದ ಎ ಗ್ರೇಡ್ ದೇಗುಲಗಳು | 205 |
| 5ರಿಂದ 25 ಲಕ್ಷ ರೂ. ಆದಾಯವಿರುವ ಬಿ ಗ್ರೇಡ್ | 193 |
| 5 ಲಕ್ಷಕ್ಕಿಂತ ಕಡಿಮೆ ಆದಾಯವಿರುವ ಸಿ ಗ್ರೇಡ್ | 34,105 |

## ಬಾಕಿ ಹಣ ಪಾವತಿಸದಿದ್ದರೆ ಕಾಮಗಾರಿ ಸ್ಥಗಿತ, ಮಾ. 6ರಂದು ಪ್ರತಿಭಟನೆ

### • ಮೂರು ವರ್ಷಗಳಿಂದ ರಾಜ್ಯ ಸರಕಾರ ಬಾಕಿ ಉಳಿಸಿಕೊಂಡಿರುವ 37 ಸಾವಿರ ಕೋಟಿ ರೂಪಾಯಿ ಬಿಲ್

• ಉದಯವಾಹಿನಿ, ಹುಬ್ಬಳ್ಳಿ

'' ಹಿಂದಿನ ಬಿಜೆಪಿ ಹಾಗೂ ಹಾಲಿ ಕಾಂಗ್ರೆಸ್ ಸರಕಾರದಿಂದ ಬಾಕಿ ಉಳಿದಿರುವ 37 ಸಾವಿರ ಕೋಟಿ ರೂ. ಬಿಲ್ ಬಾಕಿ ಬಿಡುಗಡೆಗೆ ಒತ್ತಾಯಿಸಿ ಮಾರ್ಚ್ 6 ರಂದು ಕಾಮಗಾರಿ ಸ್ಥಗಿತಗೊಳಿಸಿ ಸಾಂಕೇತಿಕ ಧರಣಿ ನಡೆಸುತ್ತೇವೆ. ಇದಕ್ಕೆ ಸ್ಪಂದಿಸದಿದ್ದಲ್ಲಿ ಏಪ್ರಿಲ್ ತಿಂಗಳಲ್ಲಿ ಅನಿರ್ದಿಷ್ಟಾವಧಿ ಕೆಲಸ ಬಂದ್ ಮಾಡಿ ಸತ್ಯಾಗ್ರಹ ಆರಂಭಿಸುತ್ತೇವೆ'' ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್.ಮಂಜುನಾಥ ಎಚ್ಚರಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ''ಬಿಲ್ ಬಿಡುಗಡೆ ಸಂಬಂಧಿಸಿ ಪತ್ರ ಮೂಲಕ ಸಿಎಂ ಗಮನಕ್ಕೆ ತಂದರೂ ಕ್ರಮ ಕೈಗೊಂಡಿಲ್ಲ. ಸಭೆ ನಡೆಸುವುದಾಗಿ ಹೇಳಿ 2–3 ಸಲ ಮುಂದೂಡಿದರು. ಈಗಲೂ ಕಾಲ ಮಿಂಚಿಲ್ಲ, ಸಭೆ ಕರೆದು ಚರ್ಚಿಸಿದರೆ ಸಮಸ್ಯೆಗೆ ಶೇ 75 ರಷ್ಟು ಪರಿಹಾರ ಸಿಗಲಿದೆ. ಪ್ರತಿ ಬಾರಿ ಬಾಕಿ ಬಿಲ್ ಕೇಳಿದರೂ ಅದು ಹಳೆಯ ಸರಕಾರದ್ದು ಎಂದು ಸಬೂಬು ಹೇಳುವ ಮೂಲಕ ಸಿಎಂ ಜಾಣ ನಡೆ ಪ್ರದರ್ಶಿಸುತ್ತಿದ್ದಾರೆ. ಇದರಿಂದ ಗುತ್ತಿಗೆದಾರು ವಿಷ ಕುಡಿಯುವ ಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಮಾ.6 ರಂದು ಪ್ರತಿಭಟನೆ ಮಾಡಲು ತೀರ್ಮಾನಿಸಿದ್ದೇವೆ. 25–30 ಸಾವಿರ ಗುತ್ತಿಗೆದಾರರು ಸೇರುವ ನಿರೀಕ್ಷೆ ಇದೆ'' ಎಂದರು.



**ಗುತ್ತಿಗೆದಾರರಿಂದ ಸರ್ಕಾರಕ್ಕೆ ಎಚ್ಚರಿಕೆ**

'' 100, 200 ಕೋಟಿ ರೂ.ಗಳ ಪ್ಯಾಕೇಜ್ ಮಾಡಿ ಹೊರರಾಜ್ಯದ ಗುತ್ತಿಗೆದಾರರಿಗೆ ಕೆಲಸ ಕೊಡಲಾಗುತ್ತಿದೆ. ಇದನ್ನು ಕೈ ಬಿಡುವಂತೆ ಕೋರಿದ್ದು, ನಗರಾಭಿವೃದ್ಧಿ ಇಲಾಖೆ ಹೊರತುಪಡಿಸಿ ಎಲ್ಲಾ ಇಲಾಖೆಗಳು ಸ್ಪಂದಿಸಿವೆ ''ಎಂದು ಹೇಳಿದರು. ಗುರುಸಿದ್ದಪ್ಪ ಬಿ.ಎಸ್., ಎಂ.ಕೆ.ಮುಲ್ಲಾ, ಸುರೇಶ ಭೂಮರಡ್ಡಿ, ಬಿ.ಸಿ.ದಿನೇಶ, ಧಾರವಾಡ ಜಿಲ್ಲಾ ಗುತ್ತಿಗೆದಾರರ ಸಂಘದ ಅಧ್ಯಕ್ಷ ಎಂ.ಎಸ್. ಸಂಕಾಗೌಡಶಾನಿ ಸುದ್ದಿಗೋಷ್ಠಿಯಲ್ಲಿದ್ದರು.

**ಕಾಮಗಾರಿ ಸ್ಥಗಿತ:** '' ಬೆಳಗಾವಿ ಜಿಲ್ಲೆಯೊಂದರಲ್ಲೇ ನಾನಾ ಇಲಾಖೆಗಳ 3,458 ಕೋಟಿ ರೂ. ಬಿಲ್ ಬಾಕಿ ಇದೆ. ಹಿಂದಿನ ಸರಕಾರದ ಹೆಸರು ಹೇಳುವುದನ್ನು ಬಿಟ್ಟು ಕೂಡಲೇ ಎಲ್ಲಬಾಕಿ ಪಾವತಿಸಬೇಕು.

ಮುಖ್ಯಮಂತ್ರಿ ಬಜೆಟ್ ಮಂಡಿಸುವ ಮುನ್ನವೇ, ಬಾಕಿ ಬಿಲ್ ಪಾವತಿಸುವ ಘೋಷಣೆ ಮಾಡಬೇಕು. ಇಲ್ಲವಾದರೆ ಸರಕಾರವೇ ಅಭಿವೃದ್ಧಿ ಕಾಮಗಾರಿ ಸ್ಥಗಿತದ ಹೊಣೆ ಹೊರಬೇಕು,'' ಎಂದರು.

''ಗುತ್ತಿಗೆದಾರರು ಆಸ್ತಿಪಾಸ್ತಿಗಳನ್ನು ಅಡವಿಟ್ಟು, ಸಾಲ ಮಾಡಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದಾರೆ. ಕಾಮಗಾರಿಯ ಬಾಕಿ ಹಣ ಪಾವತಿಸದ ಕಾರಣ ಗುತ್ತಿಗೆದಾರರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಬಿಲ್ ಪಾವತಿಸದೇ ಇದ್ದರೆ ರಾಜ್ಯಾದ್ಯಂತ 20 ರಿಂದ 35 ಸಾವಿರ ಗುತ್ತಿಗೆದಾರರು ಕಾಮಗಾರಿ ಸ್ಥಗಿತಗೊಳಿಸಲಿದ್ದಾರೆ. ಏಪ್ರಿಲ್ ನಂತರ ಕುಟುಂಬ ಸಮೇತ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟಾವಧಿ ಧರಣಿ ನಡೆಸಲಿದ್ದಾರೆ,'' ಎಂದು ಎಚ್ಚರಿಸಿದರು.


**ನಿಲ್ಲದ ಕಮಿಷನ್ ಹಾವಳಿ:** ''ಹಿಂದಿನ ಸರಕಾರದ ಅವಧಿಯಲ್ಲಿ ಕೇಳಿ ಬಂದಿದ್ದ ಕಮಿಷನ್ ಆರೋಪಗಳು ಈ ಸರಕಾರದಲ್ಲೂ ಮುಂದುವರಿದಿವೆ. ಬಾಕಿ ಹಣ ಬಿಡುಗಡೆ ಪ್ರಕ್ರಿಯೆಯಲ್ಲಿ ಉದ್ದೇಶಪೂರ್ವಕ ವಿಳಂಬವಾಗುತ್ತಿರುವುದಕ್ಕೆ ಇದೂ ಒಂದು ಕಾರಣ,'' ಎಂದು ಪ್ರಶ್ನೆಯೊಂದಕ್ಕೆ ಮಂಜುನಾಥ್ ಪ್ರತಿಕ್ರಿಯಿಸಿದರು.

### ನಾವು ಬ್ಲ್ಯಾಕ್ ಮೇಲ್ ಮಾಡುವವರಲ್ಲ

**''ಬಾಕಿ ಬಿಲ್ ಪಾವತಿ ಕುರಿತಾಗಿ ಗುತ್ತಿಗೆದಾರರ ಯಾವುದೇ ಬ್ಲ್ಯಾಕ್ ಮೇಲ್ ಅಥವಾ ಬೆದರಿಕೆಗೆ ನಾವು ಹೆದರಲ್ಲ'' ಎಂಬ ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಆರ್. ಮಂಜುನಾಥ,'' ನಾವು ಬೆದರಿಕೆ ಅಥವಾ ಬ್ಲ್ಯಾಕ್ ಮೇಲ್ ಮಾಡುವಷ್ಟು ದೊಡ್ಡವರಲ್ಲ. 1.5 ಲಕ್ಷ ಗುತ್ತಿಗೆದಾರರ ಹಿತ ಕಾಯುವುದೇ ನಮ್ಮ ಉದ್ದೇಶ. ಮಾಡಿದ ಕೆಲಸಕ್ಕೆ ಕೂಲಿ ಕೇಳುವುದು ತಪ್ಪಲ್ಲ. ಈ ಸಂಬಂಧ ಡಿ.ಕೆ. ಶಿವಕುಮಾರ ಅವರೊಂದಿಗೆ ದೂರವಾಣಿ ಮೂಲಕ ಚರ್ಚಿಸಿದ್ದೇವೆ. ಕೈಲಾದಷ್ಟು ಸಹಾಯ ಮಾಡುವ ಭರವಸೆ ನೀಡಿದ್ದಾರೆ''ಎಂದು ವಿವರಿಸಿದರು.**

**ಈ ದಿನದ ದರ** ಪೆಟ್ರೋಲ್: 103.06 ₹/L ಡೀಸೆಲ್ : 90.99 ₹/L ಬಂಗಾರ: ₹15,737/Gram24ct ₹14,425/Gram22ct ಬೆಳ್ಳಿ: ₹270.00/Gram

# ಶೇಷಾದ್ರಿಪುರದ ರಾಯರ ಮಠದಲ್ಲಿ ಶ್ರೀ ರಾಘವೇಂದ್ರ ಅಷ್ಟಾಕ್ಷರ ಹೋಮ





ಉದಯವಾಹಿನಿ ಚಿತ್ರ

• ಉದಯವಾಹಿನಿ,ಬೆಂಗಳೂರು

ಶೇಷಾದ್ರಿಪುರದ ಪ್ಲಾಟ್ ಫಾರ್ಮ್ ರಸ್ತೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರಿಂದ ಆದೇಶಾನುಸಾರ ಶ್ರೀ ರಾಘವೇಂದ್ರ ಗುರುಸಾರ್ವಭೌಮರ 405ನೇ ಪಟ್ಟಾಭಿಷೇಕ ಮಹೋತ್ಸವದ ಅಂಗವಾಗಿ ಬೆಳಗ್ಗೆ ಗುರುರಾಯರ ಬೃಂದಾವನಕ್ಕೆ ಅಷ್ಟೋತ್ತರ ಸಹಿತ ಫಲಪಂಚಾಮೃತ ಅಭಿಷೇಕ, ವಿಶೇಷ ಹೂವಿನ ಅಲಂಕಾರ, ತೊಟ್ಟಿಲು ಸೇವೆ, ಶ್ರೀರಾಘವೇಂದ್ರ ಅಷ್ಟಾಕ್ಷರ ಹೋಮ, ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ ಕಾರ್ಯಕ್ರಮಗಳು ಜರುಗಿದವು ಎಂದು ಶ್ರೀಮಠದ ವಿಚಾರಣಾಕರ್ತರಾದ ಶ್ರೀ ಸುಬ್ಬುನರಸಿಂಹ ಅವರು ತಿಳಿಸಿದರು.

# ಶ್ರೀಯುತ ಕೌಶಲ್ ಕೆಬಿ ಅವರು ಸಿವಿಲ್ ಜಡ್ಜ್ ಹುದ್ದೆಗೆ ಆಯ್ಕೆ

• ಉದಯವಾಹಿನಿ,ಬೆಂಗಳೂರು



ಉದಯವಾಹಿನಿ ಚಿತ್ರ

ಹಾಸನ ಮೂಲದ ಶ್ರೀ ಕೌಶಲ್ ಕೆಬಿ ಅವರು ಸಿವಿಲ್ ನ್ಯಾಯಾಧೀಶರಾಗಿ ನೇಮಕಗೊಂಡಿರುತ್ತಾರೆ ಹಾಸನ ಜಿಲ್ಲೆಯ ಎಂ ಕೃಷ್ಣ ಕಾನೂನು ವಿದ್ಯಾಲಯದಲ್ಲಿ ಪದವಿಯನ್ನು ಪೂರ್ಣಗೊಳಿಸಿದ್ದು ಅದರಲ್ಲಿ ತೃತೀಯ ರ್ಯಾಂಕ್ ಪಡೆದಿದ್ದರು. 26 ವರ್ಷ ವಯಸ್ಸಿನ ಶ್ರೀ ಕೌಶಲ್ ಕೆಬಿ ಅವರು ಆಯ್ಕೆ ಪಟ್ಟಿಯಲ್ಲಿ 37ನೇ ಕ್ರಮಾಂಕದಲ್ಲಿ ಆಯ್ಕೆಯಾಗಿರುತ್ತಾರೆ.

# ಡೆಡ್‌ಲಾಕ್ ಬೇಡ, ಡೀಟೇಲ್ಸ್ ನೋಡಿ: ಅರಣ್ಯ ಇಲಾಖೆ ಆಕ್ಷೇಪಕ್ಕೆ ಕಾವೇರಿ ನಿಗಮದ ಖಡಕ್ ಉತ್ತರ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಮೇಕೆದಾಟು ಸಮತೋಲನ ಜಲಾಶಯ ನಿರ್ಮಾಣಕ್ಕಾಗಿ ಅಗತ್ಯವಿರುವ ಪರಿಸರ ಮತ್ತು ವನ್ಯಜೀವಿ ಅನುಮೋದನೆ ಪಡೆಯಲು ಕರ್ನಾಟಕ ಸರ್ಕಾರವು ಕೇಂದ್ರದ ಮೇಲೆ ಒತ್ತಡವನ್ನು ಮುಂದುವರಿಸಿದೆ. ಈ ನಿಟ್ಟಿನಲ್ಲಿ ಕಾವೇರಿ ನೀರಾವರಿ ನಿಗಮವು ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯಕ್ಕೆ ಹೊಸದಾಗಿ ಪ್ರತ್ಯೇಕ ಪ್ರಸ್ತಾವನೆಯನ್ನು ಸಲ್ಲಿಸಿದೆ. ಸುಮಾರು 5,200 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಯೋಜನೆಯ ಉದ್ದೇಶಕ್ಕಾಗಿ ಬಳಸಿಕೊಳ್ಳಲು ಅನುಮತಿ ಕೋರಿ ಜನವರಿ 4ರಂದು ರಾಜ್ಯ ಸರ್ಕಾರ ಪ್ರಸ್ತಾವ ಸಲ್ಲಿಸಿತ್ತು.

ಆದರೆ, ಈ ಪ್ರಸ್ತಾವಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಕೇಂದ್ರ ಸಚಿವಾಲಯವು, ''ಕೇಂದ್ರ ಜಲಶಕ್ತಿ ಸಚಿವಾಲಯ ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದಿಂದ ಅನುಮೋದನೆ ಪಡೆದ ವಿಸ್ತ್ರತ ಯೋಜನಾ ವರದಿಯನ್ನು ಸಲ್ಲಿಸಿಲ್ಲ ಎಂದು ಹೇಳಿ, ದಾಖಲೆಗಳು ಅಪೂರ್ಣವಾಗಿವೆ ಎಂದು ಜನವರಿ 15 ರಂದು ಪ್ರತಿಕ್ರಿಯಿಸಿತ್ತು.

ಕೇಂದ್ರದ ಆಕ್ಷೇಪಕ್ಕೆ ಇದೇ 17 ರಂದು ಖಡಕ್ ಉತ್ತರ ನೀಡಿರುವ ಕಾವೇರಿ ನೀರಾವರಿ ನಿಗಮವು, ಸಮೀಕ್ಷೆ ಕಾರ್ಯಗಳನ್ನು ನಡೆಸಲು ಅಂತಹ ವಿಸ್ತೃತ ದಾಖಲೆಗಳ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದೆ. ನೀರಾವರಿ ನಿಗಮವು, ಸಮೀಕ್ಷೆ ಕಾರ್ಯಗಳನ್ನು ನಡೆಸಲು ಇದರ ಬೆನ್ನಲ್ಲೇ, ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯಿಂದ ಅಗತ್ಯವಿರುವ ವನ್ಯಜೀವಿ ಅನುಮೋದನೆ ಪಡೆಯಲು ಮತ್ತೊಂದು ಪ್ರತ್ಯೇಕ ಪ್ರಸ್ತಾವನೆಯನ್ನು ಸಲ್ಲಿಸುವ ಮೂಲಕ ಯೋಜನೆಗೆ ಇದ್ದ ಅಡೆತಡೆಗಳನ್ನು ನಿವಾರಿಸಲು ಮುಂದಾಗಿದೆ.

# ಮಾಧ್ಯಮಗಳೇನು ಭಯೋತ್ಪಾದಕರಾ? ಸರ್ಕಾರಕ್ಕೆ ವಿಪಕ್ಷನಾಯಕ 'ಪವರ್ ಫುಲ್' ಪಂಚ್!

• ಉದಯವಾಹಿನಿ,ಬೆಂಗಳೂರು

ವಿಧಾನಸೌಧದ ಆವರಣದಲ್ಲಿ ಮಾಧ್ಯಮಗಳ ಮುಕ್ತ ಸಂಚಾರಕ್ಕೆ ನಿರ್ಬಂಧ ವಿಧಿಸಿರುವ ರಾಜ್ಯ ಸರ್ಕಾರದ ಕ್ರಮ ಈಗ ರಾಜಕೀಯ ಸಮರಕ್ಕೆ ನಾಂದಿ ಹಾಡಿದೆ. ಈ ಕುರಿತು ವಿಧಾನಸೌಧದಲ್ಲಿ ಸುದೀರ್ಘ ಪತ್ರಿಕಾಗೋಷ್ಠಿ ನಡೆಸಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಅಂದು ತುರ್ತು ಪರಿಸ್ಥಿತಿ ಸಮಯದಲ್ಲಿ ಮಾಧ್ಯಮಗಳ ಮೇಲೆ ನಿರ್ಬಂಧ ಹೇರಿದ್ದ ಕಾಂಗ್ರೆಸ್ ನಡೆಯನ್ನು ಇದೇ ಸಿದ್ದರಾಮಯ್ಯ ವಿರೋಧಿಸಿದ್ದರು.

ಆದರೆ ಅವರೇ ಮಾಧ್ಯಮಗಳ ಸ್ವಾತಂತ್ರ್ಯ ಹರಣ ಮಾಡುತ್ತಿರುವುದು ಅವರ ದ್ವಂದ್ವ ನೀತಿಯನ್ನು ತೋರಿಸುತ್ತದೆ ಎಂದು ಅಶೋಕ್ ಟೀಕಿಸಿದರು.

# 13 ಆಸ್ಪತ್ರೆಗಳಲ್ಲಿ ಎಂಆರ್‌ಐ, ಸಿಟಿ ಸ್ಕ್ಯಾನ್ ಸಮಸ್ಯೆ : ತಕ್ಷಣವೇ ಹೆಚ್ಚಿನ ಆಸ್ಪತ್ರೆಗಳಲ್ಲಿ ಪರ್ಯಾಯ ವ್ಯವಸ್ಥೆ ಮಾಡಿದ್ದೇವೆ: ಸಚಿವ ದಿನೇಶ್ ಗುಂಡೂರಾವ್

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ರಾಜ್ಯದ 13 ಆಸ್ಪತ್ರೆಗಳಲ್ಲಿ ಮಾತ್ರ ಎಮ್ ಆರ್‌ಐ ಮತ್ತು ಸಿಟಿ ಸ್ಕ್ಯಾನ್ ಸಮಸ್ಯೆ ಆಗಿದೆ. ಹೆಚ್ಚಿನ ಆಸ್ಪತ್ರೆಗಳಿಗೆ ನಾವು ಪರ್ಯಾಯ ವ್ಯವಸ್ಥೆ ತಕ್ಷಣ ಮಾಡಿದ್ದೇವೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಮಾತನಾಡಿದ ಅವರು, ಕೃಷ್ಣಾ ಡೈಗ್ನೋಸ್ಟಿಕ್ಸ್ ಕಂಪನಿ ವತಿಯಿಂದ ನಡೆಯುತ್ತಿದ್ದ ಸರ್ಕಾರಿ ಆಸ್ಪತ್ರೆಗಳಲ್ಲಿ ಎಮ್ ಆರ್‌ಐ ಮತ್ತು ಸಿಟಿ ಸ್ಕ್ಯಾನ್ ಗಳು ಸ್ಥಗಿತ ವಿಚಾರದಲ್ಲಿ ವಿರೋಧ ಪಕ್ಷ ಸತ್ಯಕ್ಕೆ ದೂರವಾದ ವಿಚಾರ ಮಾತನಾಡಿದೆ.

ದುಡ್ಡು ಕೊಟ್ಟಿಲ್ಲ ಎಂದು ಕಂಪನಿ ಪತ್ರ ಬರೆದಿದ್ದಕ್ಕೆ, ವಿಪಕ್ಷಗಳು ಇದನ್ನು ಬೇರೆ ಬೇರೆ ರೀತಿ ಬಿಂಬಿಸುತ್ತಿದ್ದಾರೆ. ಸರ್ಕಾರಕ್ಕೆ ಹಣಕಾಸಿನ ಕೊರತೆ ಇದೆ, ಇಲಾಖೆಗೆ ಪ್ಯಾರಾಲಿಸಿಸ್ ಆಗಿದೆ, ಹೀಗೆ ಏನೇನೋ ಹೇಳುತ್ತಿದ್ದಾರೆ. ಅವರು ಟೀಕೆ ಮಾಡುತ್ತಿದ್ದಾರೆ ಎಂದು ನಾನು ಟೀಕೆ ಮಾಡುವುದಿಲ್ಲ. ಕೆಲಸ ಮಾಡುವುದು ನಮ್ಮ ಕರ್ತವ್ಯ. ಜನರಿಗೆ ಸಮಸ್ಯೆ ಆಗಬಾರದು ಎಂಬುದು ನಮ್ಮ ಉದ್ದೇಶ.

ಖಾಸಗಿ ಕಂಪನಿ ಬರೆದ ಪತ್ರಕ್ಕೆ ಇವರ ರಿಯಾಕ್ಷನ್ ನೋಡಿದರೆ ಏನನ್ನಬೇಕು ಅರ್ಥವಾಗುವುದಿಲ್ಲ ಎಂದು ವಾಗ್ದಾಳಿ ನಡೆಸಿದರು.

63 ಎಂಆರ್‌ಐ ಸ್ಕ್ಯಾನ್ ಮಾಡಲಾಗಿತ್ತು. ಹೆಚ್ಚು ಸ್ಕ್ಯಾನ್ ಮಾಡಿದ ಕಾರಣ ಅನುಮಾನಗೊಂಡು ತಪಾಸಣೆ ಮಾಡಿದ್ದೇವೆ. ಜುಲೈಯಲ್ಲಿ ಸರಾಸರಿ 63 ಇತ್ತು. ನವೆಂಬರ್ ತಿಂಗಳಲ್ಲಿ ಕಡಿಮೆ ಆಗಿದೆ.

# ಬೇರೂರು, ದಿ ಪರ್ಪಲ್ ಟರ್ಟಲ್ಸ್ ಓರ್ಜಾ ವತಿಯಿಂದ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ವಿನ್ಯಾಸ ಪ್ರಿಯರು ಮತ್ತು ಮನೆ ಅಲಂಕಾರ ಆಸಕ್ತರಿಗೆ ಸಂತಸದ ಸುದ್ದಿ! ಬೇರೂರು, ದಿ ಪರ್ಪಲ್ ಟರ್ಟಲ್ಸ್ ಮತ್ತು ಓರ್ಜಾ ಸಂಸ್ಥೆಗಳು ಒಟ್ಟಾಗಿ ವಿಶೇಷ ವೇರ್‌ಹೌಸ್ ಕ್ಲಿಯರೆನ್ಸ್ ಸೇಲ್ ಆಯೋಜಿಸಿದ್ದು, ಪ್ರೀಮಿಯಂ ಫರ್ನಿಚರ್, ಲೈಟಿಂಗ್, ಔಟ್‌ಡೋರ್ ವಸ್ತುಗಳು ಮತ್ತು ಮನೆ ಅಲಂಕಾರ ವಸ್ತುಗಳ ಮೇಲೆ ವಿಶೇಷ ರಿಯಾಯಿತಿಗಳನ್ನು ನೀಡಲಾಗುತ್ತಿದೆ.

ಈ ವಿಶೇಷ ಸೇಲ್ ಫೆಬ್ರವರಿ 26ರಿಂದ ಮಾರ್ಚ್ 1ರವರೆಗೆ, ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ, ವೈಟ್ ಫೀಲ್ಡ್ ನಲ್ಲಿರುವ ದಿ ಪರ್ಪಲ್ ಟರ್ಟಲ್ಸ್ ನ ಹೊಸ ವೇರ್ ಹೌಸ್‌ನಲ್ಲಿ ನಡೆಯಲಿದೆ.

ಈ ಸೀಮಿತ ಅವಧಿಯ ಕಾರ್ಯಕ್ರಮವು ಆಯ್ದ, ವಿನ್ಯಾಸ ಕೇಂದ್ರೀಕೃತ ಸಂಗ್ರಹಗಳನ್ನು ವಿಶೇಷ ವೇರ್‌ಹೌಸ್ ದರಗಳಲ್ಲಿ ಖರೀದಿಸುವ ಅಪರೂಪದ ಅವಕಾಶ ವನ್ನು ಒದಗಿಸುತ್ತದೆ. ಬೇರೂರು ವತಿಯಿಂದ ಶಿಲ್ಪಕಲೆಯಂತಿರುವ ಔಟ್‌ಡೋರ್ ಫರ್ನಿಚರ್ ಮತ್ತು ಪ್ಲಾಂಟರ್ ಗಳು, ದಿ ಪರ್ಪಲ್ ಟರ್ಟಲ್ಸ್ ವತಿಯಿಂದ ಶ್ರೇಷ್ಠ ಫರ್ನಿಚರ್ ಮತ್ತು ಡೆಕರ್ ವಸ್ತುಗಳು, ಹಾಗು ಓರ್ಜಾ ವತಿಯಿಂದ ಗಮನ ಸೆಳೆಯುವ ಲೈಟಿಂಗ್ ಉತ್ಪನ್ನಗಳು ಸೇರಿದಂತೆ ವಿವಿಧ ವಿಭಾಗಗಳಲ್ಲಿನ ಅನೇಕ ಉತ್ಪನ್ನಗಳು ಈ ಸೇಲ್‌ನಲ್ಲಿ ಲಭ್ಯವಿರುತ್ತವೆ.

ಪ್ರದರ್ಶನ ವಸ್ತುಗಳು, ಅಂತಿಮ ಸಂಗ್ರಹ (ಎಂಡ್ -ಆಫ್-ಲೈನ್) ಉತ್ಪನ್ನಗಳು ಮತ್ತು ಆಯ್ದ ರೆಡಿ ಸ್ಟಾಕ್ ಮೇಲಿನ ಮಹತ್ವದ ರಿಯಾಯಿತಿಗಳನ್ನು ಖರೀದಿದಾರರು ನಿರೀಕ್ಷಿಸಬಹುದು.



ಉದಯವಾಹಿನಿ ಚಿತ್ರ

# ಬೆಂಗಳೂರಿನ ಕಸಕ್ಕೆ ಕೊನೆಗೂ ಮುಕ್ತಿ

## ಡಂಪಿಂಗ್ ಯಾರ್ಡ್‌ಗಳಿಗೆ 350 ಕೋಟಿ ರೂ. ಕೊಟ್ಟು ಕಸ ವಿಲೇವಾರಿ

• ಉದಯವಾಹಿನಿ,ಬೆಂಗಳೂರು



ನಗರದ ಕಸವನ್ನು ಡಂಪ್ ಮಾಡುವ ಡಂಪಿಂಗ್ ಯಾರ್ಡ್ ಗಳ ವ್ಯಾಪ್ತಿಯ ವಿಧಾನಸಭಾ ಕ್ಷೇತ್ರಗಳಿಗೆ 350 ಕೋಟಿ ರೂ. ಅನುದಾನ ಬಿಡುಗಡೆ ಮಾಡಲು ಭರವಸೆ ಸಿಕ್ಕ ಹಿನ್ನೆಲೆಯಲ್ಲಿ ನಗರದ ಕಸದ ಸಮಸ್ಯೆ ಪರಿಹಾರವಾದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಯಲಹಂಕ, ಮಹಾದೇವಪುರ, ಬ್ಯಾಟರಾಯನಪುರ, ದೊಡ್ಡಬಳ್ಳಾಪುರ, ಆನೇಕಲ್, ಯಶವಂತಪುರ ಸೇರಿದಂತೆ ಡಂಪಿಂಗ್ ಯಾರ್ಡ್‌ಗಳಿರುವ ವಿಧಾನಸಭಾ ಕ್ಷೇತ್ರಗಳಿಗೆ ಒಟ್ಟು 350 ಕೋಟಿ ರೂ. ಅನುದಾನ ಬಿಡುಗಡೆ ಮಾಡುವುದಾಗಿ ಜಿಬಿಎ ಆಯುಕ್ತರು ಭರವಸೆ ನೀಡಿದ್ದರು.

ಬೆಳ್ಳಹಳ್ಳಿ, ಮಿಟ್ಟಗಾನಹಳ್ಳಿ, ಕಣ್ಣೂರು, ದೊಡ್ಡಬಳ್ಳಾಪುರ ಡಂಪಿಂಗ್ ಯಾರ್ಡ್‌ಗಳಲ್ಲಿ ಕಸ ಸುರಿಯಲು ಕಸದ ಲಾರಿಗಳಿಗೆ ಅನುವು ಮಾಡಿಕೊಡಲಾಗಿದೆ. ಬುಧವಾರ ರಾತ್ರಿಯಿಂದಲೇ ಕಸದ ಲಾರಿಗಳು ಕಸವನ್ನು ಡಂಪ್ ಮಾಡಿ ನಗರಕ್ಕೆ ಹಿಂದಿರುಗಿವೆ. ನಗರದ ವಿವಿಧೆಡೆ ಮಸ್ಟರಿಂಗ್ ಕೇಂದ್ರಗಳಿಂದ ಕಸವನ್ನು ಡಂಪಿಂಗ್ ಯಾರ್ಡ್‌ಗಳಿಗೆ ಸಾಗಿಸುವ ಪ್ರಕ್ರಿಯೆ ಆರಂಭವಾಗಿದೆ. ಉತ್ತರ ಪಾಲಿಕೆ ವ್ಯಾಪ್ತಿ ಕಸದ ಸಮಸ್ಯೆ ಶೇ.90ರಷ್ಟು ಪರಿಹಾರವಾಗಿದೆ. ಬಹುತೇಕ ಮಸ್ಟರಿಂಗ್ ಕೇಂದ್ರಗಳಿಂದ ಕಸವನ್ನು ಸಾಗಿಸಲಾದೆ. ಕೆಲವೆಡೆ ಬಾಕಿ ಉಳಿದಿದ್ದು, ಶುಕ್ರವಾರದ ವೇಳೆಗೆ ಎಲ್ಲಾ ಕಡೆಗಳಿಂದಲೂ ಕಸವನ್ನು ಸಾಗಿಸಲಾಗುತ್ತದೆ ಎಂದು ಅಧಿಕಾರಿಯೊಬ್ಬರು ಹೇಳಿದರು.

ಡಂಪಿಂಗ್ ಯಾರ್ಡ್ ಗಳ ಅಸಮರ್ಪಕ ನಿರ್ವಹಣೆ, ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡುತ್ತಿಲ್ಲ. ನಿಗದಿಗಿಂತ ಹೆಚ್ಚಿನ ಕಸದ ಲಾರಿಗಳ ಸಂಚಾರದಿಂದ ಸ್ಥಳೀಯರು ಸಮಸ್ಯೆ ಎದುರಿಸುತ್ತಿದ್ದಾರೆ ಎಂದು ಆರೋಪಿಸಿ ಬೆಳ್ಳಹಳ್ಳಿ ಮತ್ತು ಮಿಟ್ಟಗಾನಹಳ್ಳಿ ಹಾಗೂ ದೊಡ್ಡಬಳ್ಳಾಪುರ ಬಳಿಯ ಡಂಪಿಂಗ್ ಯಾರ್ಡ್ ವ್ಯಾಪ್ತಿಯ ನಾಗರಿಕರು ಹಾಗೂ ಸ್ಥಳೀಯ ಶಾಸಕರು ಕಸದ ಲಾರಿಗಳನ್ನು ತಡೆದು ಪ್ರತಿಭಟನೆ ನಡೆಸಿದ್ದರು. ಏಕಾಏಕಿ 150ಕ್ಕೂ ಹೆಚ್ಚು ಲಾರಿಗಳನ್ನು ಡಂಪಿಂಗ್ ಯಾರ್ಡ್‌ಗಳಲ್ಲಿ ತಡೆದು ನಿಲ್ಲಿಸಿದ್ದರಿಂದ ನಗರದ ಕಸ ವಿಲೇವಾರಿ ಸಮಸ್ಯೆ ಬಿಗಡಾಯಿಸಿತ್ತು. ಅನೇಕ ಮಸ್ಟರಿಂಗ್ ಕೇಂದ್ರಗಳು ಹಾಗೂ ಕಸ ಸಾಗಿಸುವ ಆಟೋಗಳಲ್ಲೇ ನಗರದ ಕಸ ಉಳಿದುಕೊಂಡಿತ್ತು.



### ಡಿಕೆ ಶಿವಕುಮಾರ್ ಎಚ್ಚರಿಕೆ

**ಬಿಜೆಪಿ ನಾಯಕರು ಕಸ ವಿಲೇವಾರಿಗೆ ಬಿಡುವುದು ಬೇಡ. ಅವರೇ ಕಸವನ್ನು ಇಟ್ಟುಕೊಳ್ಳಲಿ. ಯಾರು ಕಸ ವಿಲೇವಾರಿಗೆ ಬಿಡುವುದಿಲ್ಲವೋ ಅವರ ಕ್ಷೇತ್ರದಲ್ಲಿ ಕಸವನ್ನೇ ತೆಗೆಸುವುದಿಲ್ಲ. ಈ ಬಗ್ಗೆ ಮೈಕ್ ಹಾಕಿ ಕ್ಷೇತ್ರದಲ್ಲಿ ಪ್ರಚಾರ ಮಾಡಿಸುತ್ತೇನೆ. ಆಗ ಜನರೇ ಅವರಿಗೆ ಉಗಿಯುತ್ತಾರೆ.**

**ಯಾರ ಕಾಲನ್ನೂ ಹಿಡಿಯಲಾಗುವುದಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಚ್ಚರಿಕೆ ನೀಡಿದ್ದರು.**

# ನಂದಿನಿ ಉತ್ಪನ್ನಗಳ ನಕಲಿಗೆ ಬ್ರೇಕ್ ಹಾಕಲು ಕೆಎಂಎಫ್ ಪ್ಲ್ಯಾನ್

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ರಾಜ್ಯದ ಹೆಮ್ಮೆಯ ನಂದಿನಿ ಉತ್ಪನ್ನಗಳ ಹೆಸರಲ್ಲಿ ನಕಲಿ ಉತ್ಪನ್ನಗಳು ಮಾರುಕಟ್ಟೆಯಲ್ಲಿ ದೊರೆಯುತ್ತಿರುವುದು ಪತ್ತೆಯಾಗಿರುವ ಬೆನ್ನಲ್ಲೇ ಕೆಎಂಎಫ್ ಅಲರ್ಟ್ ಆಗಿದ್ದು, ನಕಲಿ ಉತ್ಪನ್ನಗಳ ಹಾವಳಿಗೆ ಬ್ರೇಕ್ ಹಾಕಲು ಮಾಸ್ಟರ್ ಪ್ಲ್ಯಾನ್ ಸಿದ್ಧಪಡಿಸಿದೆ. ವಿವರಗಳಿರುವ ಕ್ಯೂಆರ್ ಕೋಡ್ ಬಳಕೆ ಮೂಲಕ ನಂದಿನಿ ಉತ್ಪನ್ನಗಳ ಶ್ರೇಷ್ಠತೆ ಕಾಪಾಡಲು ಮುಂದಾಗಿದೆ.

ನಂದಿನಿ, ಕರ್ನಾಟಕದ ಹೆಮ್ಮೆಯ ಹಾಲು ಉತ್ಪನ್ನಗಳ ಬ್ರ್ಯಾಂಡ್‌ರಾಜ್ಯ ಮಾತ್ರವಲ್ಲದೇ ವಿದೇಶಗಳಲ್ಲೂ ತನ್ನ ಕ್ವಾಲಿಟಿಯಿಂದ ಜನರ ಅಚ್ಚುಮೆಚ್ಚು ಎನಿಸಿಕೊಂಡಿದೆ. ಆದರೆ ಕಳೆದ ಕೆಲ ದಿನಗಳ ಹಿಂದೆ ಹೆಮ್ಮೆಯ ನಂದಿನಿ ಬ್ರ್ಯಾಂಡ್ ಹೆಸರಲ್ಲಿ ನಕಲಿ ಉತ್ಪನ್ನಗಳು ಮಾರುಕಟ್ಟೆಯಲ್ಲಿ ಸದ್ದು ಮಾಡಿದ್ದವು. ಕೆಎಂಎಫ್ ಅಧಿಕಾರಿಗಳೇ ಪೊಲೀಸರೊಂದಿಗೆ ಇವುಗಳ ಪತ್ತೆ ಕೂಡ ಮಾಡಿದ್ದರು. ಇದರ ಬೆನ್ನಲ್ಲೇ ಮತ್ತಷ್ಟು ಅಲರ್ಟ್ ಆಗಿರೋ ಕೆಎಂಎಫ್ ಉತ್ಪನ್ನದ ಮತ್ತಷ್ಟು ಸುರಕ್ಷತೆಗೆ ಹೊಸ ಪ್ಲಾನ್ ಜಾರಿ ಮಾಡಿದೆ.

ಕೆಎಂಎಫ್ ಸದ್ಯ ನಂದಿನಿ ಉತ್ಪನ್ನಗಳ ಪ್ಯಾಕೆಟ್ ಮೇಲೆ ಕ್ಯೂಆರ್ ಕೋಡ್ ಅಳವಡಿಕೆ ಮೂಲಕ ಬ್ರ್ಯಾಂಡ್‌ಶ್ರೇಣಿ ಕಾಪಾಡುವ ಜೊತೆಗೆ ನಕಲಿ ಉತ್ಪನ್ನಗಳ ಹಾವಳಿಗೂ ಬ್ರೇಕ್ ಹಾಕಲು ಮುಂದಾದೆ. ಆರಂಭಿಕವಾಗಿ ತುಪ್ಪದ ಪ್ಯಾಕೆಟ್, ಬಾಟಲ್ ಮೇಲೆ ಈ ಕೋಡ್ ಅಳವಡಿಕೆ ಮಾಡಿದೆ. ತುಪ್ಪ ಕ್ವಾಲಿಟಿ ಅಥವಾ ಅಸಲಿತನವನ್ನು ಪರೀಕ್ಷೆ ಮಾಡಬೇಕಿದ್ದರೆ ನೇರವಾಗಿ ಕೋಡ್ ಅನ್ನು ಒಮ್ಮೆ ಸ್ಕ್ಯಾನ್ ಮಾಡಿ, ನಂಬರ್ ಹಾಕಿದರೆ ಒಟಿಪಿ ಬರಲಿದೆ. ಇದನ್ನು ಎಂಟರ್ ಮಾಡಿದ ಕೂಡಲೇ ಆ ತುಪ್ಪದ ಸಂಪೂರ್ಣ ಮಾಹಿತಿ ನಿಮ್ಮ ಫೋನ್‌ನಲ್ಲಿ ಸಿಗಲಿದೆ. ಎಲ್ಲಿ ತಯಾರಾಗಿದೆ, ಯಾವಾಗ ತಯಾರಿಕಾ ಜಾಗದಿಂದ ಮಾರುಕಟ್ಟೆಗೆ ಬಂದಿದೆ, ಅದರ ಮಾರ್ಕೆಟ್ ಕೋಡ್ ಏನು– ಈ ಎಲ್ಲಾ ಅಂಶಗಳು ಇದರಲ್ಲಿ ಒಳಗೊಂಡಿರಲಿದೆ.

ಸದ್ಯ ಈ ಹೊಸ ಐಡಿಯಾ ತುಪ್ಪದ ಪ್ಯಾಕೆಟ್ ಮೇಲೆ ಮಾತ್ರ ಜಾರಿಗೆ ಬಂದಿದೆ. ಹಂತ ಹಂತವಾಗಿ ಇತರ ಉತ್ಪನ್ನಗಳ ಮೇಲೆಯೂ ಹಾಕಲು ಕೆಎಂಎಫ್ ಚಿಂತನೆ ನಡೆಸಿದೆ.

ಈ ಬಗ್ಗೆ ಕೆಎಂಎಫ್ ಎಂಡಿ ಶಿವಸ್ವಾಮಿ ಮಾತನಾಡಿ, ನಕಲಿ ತುಪ್ಪ ತಡೆಗೆ ಈ ಯೋಜನೆ ಸಹಕಾರಿಯಾಗಲಿದೆ. ಇದನ್ನು ನಕಲು ಮಾಡಲು ಪ್ರಯತ್ನ ಮಾಡಿದರೆ ಪತ್ತೆ ಹಚ್ಚಲು ಸಹಕಾರಿಯಾಗಲಿದೆ ಎಂದಿದ್ದಾರೆ.

# ಪ್ರತಿಯೊಬ್ಬ ಅಪರಾಧಿಗೂ ಉತ್ತಮ ಭವಿಷ್ಯವಿದೆ: ಎಟಿಎಂ ಕಾರ್ಡ್ ಕದ್ದು ಹಣ ದೋಚಿದ್ದ ಆರೋಪಿಗಳ ಶಿಕ್ಷೆ ಮಾರ್ಪಡಿಸಿದ ಹೈಕೋರ್ಟ್

• ಉದಯವಾಹಿನಿ ,ಬೆಂಗಳೂರು

ಪ್ರತಿಯೊಬ್ಬ ಅಪರಾಧಿಗೂ ಉತ್ತಮ ಭವಿಷ್ಯವಿದೆ. ಕ್ರಿಮಿನಲ್ ನ್ಯಾಯ ವ್ಯವಸ್ಥೆ ಅಪರಾಧ ದ್ವೇಷಿಸಬೇಕೇ ವಿನಃ ಅಪರಾಧವನ್ನಲ್ಲ ಎಂದು ತಿಳಿಸಿರುವ ಹೈಕೋರ್ಟ್,ಎಟಿಎಂ ಕಾರ್ಡ್‌ಗಳನ್ನು ಕದ್ದು, ಬ್ಯಾಂಕ್ ಖಾತೆಗಳಿಂದ ಹಣ ಪಡೆದ ಪ್ರಕರಣದಲ್ಲಿ ಜೈಲು ಶಿಕ್ಷೆಗೆ ಗುರಿಯಾಗಿದ್ದ ಇಬ್ಬರು ಅಪರಾಧಿಗಳ ಶಿಕ್ಷೆಯನ್ನು ಮಾರ್ಪಡಿಸಿ, ದಂಡದ ಮೊತ್ತ ಹೆಚ್ಚಳ ಮಾಡಿ ಆದೇಶಿಸಿದೆ.

ಮಾಹಿತಿ ತಂತ್ರಜ್ಞಾನ ಕಾಯಿದೆ ಸೆಕ್ಷನ್ 66(ಸಿ) (ವಿದ್ಯುನ್ಮಾನ ಸಹಿ, ಪಾಸ್‌ವರ್ಡ್ ಕಳವು) ಮತ್ತು ಐಪಿಸಿ ಸೆಕ್ಷನ್ 380 (ಮನೆಯಲ್ಲಿನ ವಸ್ತುಗಳ ಕಳವು) ಮಾಡಿದ ಆರೋಪದಲ್ಲಿ 3 ವರ್ಷಗಳ ಕಾಲ ಶಿಕ್ಷೆ ಮತ್ತು 30 ಸಾವಿರ ರೂ.ಗಳ ದಂಡ ವಿಧಿಸಿದ್ದ ಕ್ರಮ ಪ್ರಶ್ನಿಸಿ ಬಿಹಾರ್ ಮೂಲದ ಸಹದೇವ ಪ್ರಸಾದ್, ಜಯಭದ್ರ ಕುಮಾರ್ ಎಂಬವರು ಹೈಕೋರ್ಟ್‌ಗೆ ಕ್ರಿಮಿನಲ್ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಿದ್ದರು. ಅದರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿ. ಶ್ರೀಶಾನಂದ ಅವರಿದ್ದ ಧಾರವಾಡ ಹೈಕೋರ್ಟ್ ನ್ಯಾಯಪೀಠ, ಆದೇಶವನ್ನು ಮಾರ್ಪಡಿಸಿದೆ.


ಅರ್ಜಿದಾರರು ಮೊದಲ ಬಾರಿಗೆ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದಾರೆ. ಮೊದಲ ಅರ್ಜಿದಾರರಿಗೆ ಚಿಕ್ಕ ವಯಸ್ಸಿನ ಪತ್ನಿ ಮತ್ತು ಎರಡು ವರ್ಷದ ಹೆಣ್ಣುಮಗು ಇದ್ದು, ಅವರನ್ನು ಪೋಷಣೆ ಮಾಡಬೇಕಾಗಿದೆ. ಪ್ರಕರಣ ಸಂಬಂಧ ಆರೋಪಿಗಳು ತನಿಖೆ ಮತ್ತು ವಿಚಾರಣಾ ಪ್ರಕ್ರಿಯೆಗೆ ಸಹಕಾರ ನೀಡಿದ್ದಾರೆ. ಆದ್ದರಿಂದ ದಂಡದ ಪ್ರಮಾಣವನ್ನು ತಲಾ 2 ಲಕ್ಷ ರೂ.ಗಳಿಗೆ ಹೆಚ್ಚಳ ಮಾಡಿ, ಶಿಕ್ಷೆಯನ್ನು ರದ್ದುಗೊಳಿಸಿ ಆದೇಶಿಸಿದೆ.

ಅಲ್ಲದೇ, ಅರ್ಜಿದಾರ ಆರೋಪಿಗಳು 2026ರ ಫೆಬ್ರವರಿ 20ರ ಒಳಗಾಗಿ ದಂಡದ ಮೊತ್ತವನ್ನು ವಿಚಾರಣಾ ನ್ಯಾಯಾಲಯದ ಮುಂದೆ ಠೇವಣಿ ಇಡಬೇಕು. ಇಲ್ಲವಾದಲ್ಲಿ ವಿಚಾರಣಾ ನ್ಯಾಯಾಲಯ ವಿಧಿಸಿರುವ ಶಿಕ್ಷೆಯನ್ನು ಪೂರ್ಣಗೊಳಿಸಬೇಕು ಎಂದು ಪೀಠ ಹೇಳಿದೆ.

ಜೊತೆಗೆ, ಆರೋಪಿಗಳಿಂದ ವಸೂಲಿ ಮಾಡಲಾದ ದಂಡದ ಮೊತ್ತದಲ್ಲಿ ಘಟನೆಯಿಂದ ಆರ್ಥಿಕ ನಷ್ಟ ಅನುಭವಿಸಿರುವ ದೂರುದಾರರಲ್ಲಿ ಇಬ್ಬರಿಗೆ 50 ಸಾವಿರ ರೂ. ಹಾಗೂ ಮತ್ತೊಬ್ಬರಿಗೆ 25 ಸಾವಿರ ರೂ.ಗಳನ್ನು ಪರಿಹಾರವಾಗಿ ಪಾವತಿಸಬೇಕು .

# ಇಂದಿನಿಂದ ಸಿಎಂ ಕಪ್ ಬ್ಯಾಡ್ಮಿಂಟನ್ ಟೂರ್ನಿ ಜನಪ್ರತಿನಿಧಿಗಳು, ಐಎಎಸ್, ಐಪಿಎಸ್ ಅಧಿಕಾರಿಗಳು ಭಾಗಿ

• ಉದಯವಾಹಿನಿ ,ಬೆಂಗಳೂರು



ಉದಯವಾಹಿನಿ ಚಿತ್ರ

9 ಡ್ರೀಮ್ಸ್ ಸಂಸ್ಥೆಯ ವಿನೂತನ ಪರಿಕಲ್ಪನೆಯ ಸಿಎಂ ಕಪ್ ಬ್ಯಾಡ್ಮಿಂಟನ್ ಟೂರ್ನಿಗೆ ನಾಳೆಯಿಂದ ಚಾಲನೆ ಸಿಗಲಿದೆ. ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯ ಅಂಗಣದಲ್ಲಿ ನಡೆಯಲಿರುವ ಎರಡು ದಿನಗಳ ಟೂರ್ನಿಯಲ್ಲಿ ಎಂಟು ತಂಡಗಳು ಭಾಗವಹಿಸಲಿವೆ. ಜನಪ್ರತಿನಿಧಿಗಳು, ಐಎಎಸ್-ಐಪಿಎಸ್ ಅಧಿಕಾರಿಗಳು, ಸಚಿವಾಲಯದ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ವೈದ್ಯರು, ಸ್ಯಾಂಡಲ್‌ವುಡ್ ತಾರೆಯರು ಹಾಗೂ ಪತ್ರಕರ್ತರು ಭಾಗಿಯಾಗಲಿದ್ದಾರೆ. ಲೀಡರ್ಸ್ ಪ್ಲೇ.. ಫ್ರೆಂಡ್‌ಶಿಪ್ ವಿನ್.. ಎಂಬ ಘೋಷ ವಾಕ್ಯದೊಂದಿಗೆ ಆರಂಭಗೊಂಡಿರುವ ಮೊದಲ ಆವೃತ್ತಿಯ ಟೂರ್ನಿಯ ಲಾಂಛನವನ್ನು ಈಗಾಗಲೇ ಸಿಎಂ ಸಿದ್ದರಾಮಯ್ಯ ಅನಾವರಣಗೊಳಿಸಿದ್ದಾರೆ.

ಟೂರ್ನಿಯಲ್ಲಿ ದಿ ಎಲೈಟ್ ಬ್ಯಾಡ್ಮಿಂಟನ್ ಕ್ಲಬ್, ಇನ್‌ಸ್ಪೈರ್ ಚಾಲೆಂಜರ್ಸ್, ದಿ ಕೆಫೆ ದಿವ್ಯಂ, ಎಟಿಎಸ್ ಅಟ್ಯಾಕರ್ಸ್, ಪ್ರೋ ವಿನ್ ಪ್ಯಾಂಥರ್ಸ್, ಎಸ್ಥೆಟಿಕ್ ಅಟ್ಯಾಕರ್ಸ್, ಟೆಲಿಕಾಂ ಸ್ಕೈ ಸ್ಟ್ರೈಕರ್ಸ್, ಕೆಜಿಎಫ್ ಸ್ಮಾಷರ್ಸ್ ತಂಡಗಳ ನಡುವೆ ಜಿದ್ದಾಜಿದ್ದಿನ ಸ್ಪರ್ಧೆ ನಡೆಯಲಿದೆ.

ಲೀಗ್ ಮಾದರಿಯಲ್ಲಿ ನಡೆಯಲಿರುವ ಟೂರ್ನಿಯಲ್ಲಿ ಎರಡು ಗುಂಪುಗಳಾಗಿ ತಂಡಗಳನ್ನು ವಿಂಗಡಿಸಲಾಗಿದೆ. ಎ ಬಣದಲ್ಲಿ ಇನ್ ಸ್ಪೈಯರ್ ಚಾಲೆಂಜರ್ಸ್, ದಿ ಎಲೈಟ್ ಬ್ಯಾಡ್ಮಿಂಟನ್ ಕ್ಲಬ್, ಎಸ್ಥೆಟಿಕ್ ಅಟ್ಯಾಕರ್ಸ್, ಟೀಮ್ ಕೆಫೆ ದಿವ್ಯಂ ತಂಡಗಳು ಸೆಣಸಾಟ ನಡೆಸಲಿವೆ. ಹಾಗೆಯೇ ಬಿ ಬಣದಲ್ಲಿ ಕೆಜಿಎಫ್ ಸ್ಮಾಷರ್ಸ್, ಟೆಲಿಕಾಂ ಸ್ಕೈ ಸ್ಟ್ರೈಕರ್ಸ್, ಎಟಿಎಸ್ ಅಟ್ಯಾಕರ್ಸ್, ಪ್ರೋ ವಿನ್ ಪ್ಯಾಂಥರ್ಸ್ ತಂಡಗಳು ಹೋರಾಟ ನಡೆಸಲಿವೆ. ಎರಡು ಗುಂಪುಗಳಲ್ಲಿ ಅಗ್ರ ಸ್ಥಾನ ಪಡೆಯುವ ಎರಡು ತಂಡಗಳು ಸೆಮಿಫೈನಲ್‌ನಲ್ಲಿ ಕಾದಾಟ ನಡೆಸಲಿವೆ. ಟೂರ್ನಿಯಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ಶಾಸಕ ಪೊನ್ನಣ್ಣ, ಶಾಸಕರಾದ ಶರತ್ ಬಚ್ಚೇಗೌಡ, ಡಾ. ಮಂಥರ್ ಗೌಡ, ಮಾಜಿ ಶಾಸಕ ನಾರಾಯಣಸ್ವಾಮಿ, ಐಎಎಸ್ ಅಧಿಕಾರಿಗಳಾದ ಸೆಲ್ವಕುಮಾರ್, ಜಗದೀಶ್, ಐಪಿಎಸ್ ಅಧಿಕಾರಿಗಳಾದ ಅಲೋಕ್ ಕುಮಾರ್, ರಮೇಶ್ ಬಾನೋಥ್, ಕೆಪಿಎಸ್ ಅಧಿಕಾರಿ ಸತೀಶ್ ಕುಮಾರ್ ಸೇರಿದಂತೆ ಇತರರು ಪವರ್ ಪ್ಲೇ ವಿಭಾಗದಲ್ಲಿ ಆಡಲಿದ್ದಾರೆ. ಟೂರ್ನಿಯಲ್ಲಿ ಒಟ್ಟು 128 ಆಟಗಾರರು ಕಣಕ್ಕಿಳಿಯಲಿದ್ದಾರೆ.

# ಬೆಂಗಳೂರು ಸಂಚಾರ ನಿರ್ವಹಣೆ ಬಗ್ಗೆ ಮಾಹಿತಿ ಪಡೆದ ನೆದರ್‌ಲ್ಯಾಂಡ್ಸ್ ಪ್ರಧಾನಿ ಡಿಕ್ ಸ್ಕೂಫ್

• ಉದಯವಾಹಿನಿ, ಬೆಂಗಳೂರು




ಉದಯವಾಹಿನಿ ಚಿತ್ರ

ಸಂಚಾರ ನಿರ್ವಹಣೆಗಾಗಿ ತಂತ್ರಜ್ಞಾನವನ್ನು ಯಶಸ್ವಿಯಾಗಿ ಸಂಯೋಜಿಸಿರುವ ಬೆಂಗಳೂರು ಸಂಚಾರ ನಿರ್ವಹಣಾ ಕೇಂದ್ರಕ್ಕೆ ನೆದರ್‌ಲ್ಯಾಂಡ್ಸ್ ಪ್ರಧಾನಿ ಡಿಕ್ ಸ್ಕೂಫ್ ಅವರು ಶುಕ್ರವಾರ ಭೇಟಿ ನೀಡಿದರು. ಬೆಂಗಳೂರು ನಗರದ ಸಂಚಾರ ವ್ಯವಸ್ಥೆಯನ್ನು ವಿಶ್ಲೇಷಿಸಲು ಮತ್ತು ನಿರ್ವಹಿಸಲು ತಂತ್ರಜ್ಞಾನ ಆಧಾರಿತ ವಿಧಾನವಾದ ಅಸ್ತ್ರಂನ ಬಳಕೆ ಹಾಗೂ ಅದರ ಪ್ರಗತಿಯ ಕುರಿತು ಸ್ಕೂಫ್ ಅವರು ಮಾಹಿತಿ ಪಡೆದರು. ಸುರಕ್ಷಿತ ಸಂಚಾರಕ್ಕಾಗಿ ಪೊಲೀಸರು ಬಳಸುತ್ತಿರುವ ಎಐ ಕ್ಯಾಮೆರಾಗಳು, ರಿಯಲ್-ಟೈಮ್ ಟ್ರಾಫಿಕ್ ಮಾನಿಟರಿಂಗ್ ಮತ್ತು ಅಡ್ವಾನ್ಸ್ಡ್ ಸಿಗ್ನಲ್ ಸಿಸ್ಟಮ್‌ಗಳ ಬಗ್ಗೆ ಅವರಿಗೆ ಮಾಹಿತಿ ನೀಡಲಾಯಿತು. ತಂತ್ರಜ್ಞಾನದ ಮೂಲಕ ಸಂಚಾರ ವ್ಯವಸ್ಥೆಯನ್ನು ಹೇಗೆ ಸುಧಾರಿಸಲಾಗುತ್ತಿದೆ ಎಂಬುದನ್ನು ಅವರು ವೀಕ್ಷಿಸಿದರು.

ಸಂಚಾರ ದಟ್ಟಣೆ ಸಮಸ್ಯೆ ನಿರ್ವಹಿಸಲು ರಿಯಲ್ ಟೈಮ್ ಡೇಟಾ ಮತ್ತು ಕ್ಯುರೇಟೆಡ್ ತಂತ್ರಗಳನ್ನು ಬಳಸುತ್ತಿರುವ ಅಸ್ತ್ರಂ ವ್ಯವಸ್ಥೆಯನ್ನು ನೆದರ್‌ಲ್ಯಾಂಡ್ಸ್ ಮೂಲದ ಅರ್ಕಾಡಿಸ್ ಕಂಪನಿಯ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಲಾಗಿದೆ.

ಸಂಚಾರ ದಟ್ಟಣೆ ವಿಚಾರದಲ್ಲಿ ಜಾಗತಿಕವಾಗಿ ಕುಖ್ಯಾತಿ ಪಡೆದಿದ್ದ ಬೆಂಗಳೂರಿನಲ್ಲಿ ಡಚ್ ಕಂಪನಿಯು ಅಭಿವೃದ್ಧಿಪಡಿಸಿರುವ ತಂತ್ರಜ್ಞಾನದ ಕುರಿತು ಸ್ಕೂಫ್ ಮಾಹಿತಿ ಪಡೆದುಕೊಂಡರು. ನಗರದಲ್ಲಿನ ನಿರ್ದಿಷ್ಟ ಸ್ಥಳಗಳ ಸಂಚಾರ ದಟ್ಟಣೆ ಗುರುತಿಸಲು ಮೂರು ವಿಭಿನ್ನವಾದ ನಕ್ಷೆಗಳನ್ನು ಅಸ್ತ್ರಂ ಬಳಸುತ್ತದೆ. ಪ್ರಮುಖವಾಗಿ ಗೂಗಲ್ ನಕ್ಷೆಯ ಡೇಟಾವು, ನೈಜಸಮಯದಲ್ಲಿ ಸಂಚಾರ ದಟ್ಟಣೆಯ ಎಚ್ಚರಿಕೆಗಳನ್ನು ನೀಡುತ್ತದೆ. ನಂತರ ಪ್ರತಿ 15 ನಿಮಿಷಗಳಿಗೊಮ್ಮೆ ನಿರ್ದಿಷ್ಟ ಸಂಚಾರ ದಟ್ಟಣೆಯ ಬಿಂದುಗಳ ಬಗ್ಗೆ ನವೀಕರಿಸಲಾಗುತ್ತದೆ.

**ಮೆರವಣಿಗೆಗೆ ವಿಶೇಷ ಮೆರುಗು**

ನಿರ್ದಿಷ್ಟ ಸ್ಥಳದಲ್ಲಿ ಸಂಚಾರ ದಟ್ಟಣೆಯ ಹೆಚ್ಚು ಸಮಸ್ಯಾತ್ಮಕವಾದಾಗ, ಕಾರಣಗಳನ್ನು ವಿಶ್ಲೇಷಿಸಲು ಮತ್ತು ಪರಿಹಾರ ಕಂಡುಕೊಳ್ಳಲು ಇದು ಅನುಕೂಲವಾಗುತ್ತದೆ. ಸಾರ್ವಜನಿಕರು ತಮ್ಮ ಸುತ್ತಮುತ್ತಲಿನ ಸಂಚಾರ ಉಲ್ಲಂಘನೆಗಳನ್ನು ವರದಿ ಮಾಡಲು ಇದು ಅನುವು ಮಾಡಿಕೊಡುತ್ತದೆ. ಅಸ್ತ್ರಂ ವ್ಯವಸ್ಥೆಯು ಪರಿಣಾಮಕಾರಿಯಾಗಿ ಬಳಕೆಯಾಗುತ್ತಿದ್ದು, ಇತರ ನಗರಗಳ ಪೊಲೀಸ್ ಇಲಾಖೆಗಳೂ ಸಹ ಇದನ್ನ ಅಳವಡಿಸಿಕೊಳ್ಳಲು ಬಯಸುತ್ತಿವೆ.

ಹೈದರಾಬಾದ್ ಸಹ ಈ ತಂತ್ರಜ್ಞಾನವನ್ನು ಬಯಸಿದ್ದು, ಅಸ್ತ್ರಂನ ಒಂದು ಸಣ್ಣ ಭಾಗವನ್ನು ತನ್ನ ಪೊಲೀಸ್ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡಿದೆ. ತಾಂತ್ರಿಕ ಏಕೀಕರಣದ ಬಗ್ಗೆ ತಿಳಿದುಕೊಳ್ಳಲು ದೆಹಲಿ ಪೊಲೀಸರು ಸಹ UJAಗೆ ಭೇಟಿ ನೀಡಿದ್ದರು ಎಂದು ಸಂಚಾರ ವಿಭಾಗದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

# ನಕಲಿ ದಾಖಲೆ ಸೃಷ್ಟಿಸಿ ಅಪಪ್ರಚಾರ ಆರೋಪ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಬಂಧನ

• ಉದಯವಾಹಿನಿ,ಬೆಂಗಳೂರು

ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಮಾಹಿತಿ ಹಂಚಿಕೊಂಡ ಆರೋಪದ ಮೇಲೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಮಾಜಿ ಆಯುಕ್ತ, ಕೆಎಎಸ್ ಅಧಿಕಾರಿ ಡಿ.ಬಿ.ನಟೇಶ್ ಅವರು ನೀಡಿದ್ದ ದೂರಿನ ಹಿನ್ನೆಲೆಯಲ್ಲಿ, ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರನ್ನು ನಗರದ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಮುಂಬಡ್ತಿ ಪಡೆಯಲು ಡಿ.ಬಿ.ನಟೇಶ್ ಅವರು ರಾಜ್ಯ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ 1.5 ಕೋಟಿ ರೂ. ಲಂಚ ನೀಡಿದ್ದಾರೆಂದು ಆರೋಪಿಸಿ ಸ್ನೇಹಮಯಿ ಕೃಷ್ಣ ತಮ್ಮ ಸಾಮಾಜಿಕ ಜಾಲತಾಣ ಖಾತೆಗಳಲ್ಲಿ ಮಾಹಿತಿ ಹಂಚಿಕೊಂಡಿದ್ದರು. ನಟೇಶ್ ಅವರು ನೀಡಿದ್ದ ದೂರಿನ ಅನ್ವಯ ಸ್ನೇಹಮಯಿ ಕೃಷ್ಣ ಅವರ ಬಂಧನವಾಗಿದೆ. ಅಲ್ಲದೇ, ಸ್ನೇಹಮಯಿ ಅವರ ಆರೋಪವನ್ನು ತಳ್ಳಿಹಾಕಿರುವ ಶಾಲಿನಿ ರಜನೀಶ್, ಅದೆಲ್ಲಾ ಸುಳ್ಳು ಮತ್ತು ಆಧಾರರಹಿತ ಎಂದು ಹೇಳಿದ್ದರು.



ಉದಯವಾಹಿನಿ ಚಿತ್ರ

**ಕೆಎಎಸ್ ಅಧಿಕಾರಿಯಿಂದ ದೂರು:** ನನ್ನ ಫೋಟೋ, ನಕಲಿ ಆಡಿಯೋ ಹಾಗೂ ದಾಖಲೆ ಸೃಷ್ಟಿಸಿಕೊಂಡು ಸಾಮಾಜಿಕ ಜಾಲತಾಣದಲ್ಲಿ ತಮ್ಮ ವಿರುದ್ಧ ಅಪಪ್ರಚಾರ ಮಾಡಲಾಗುತ್ತಿದೆ ಈ ಮೂಲಕ ಮಾನಸಿಕ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಸ್ನೇಹಮಯಿ ಕೃಷ್ಣ ವಿರುದ್ಧ ಡಿ.ಬಿ.ನಟೇಶ್ ಅವರು ದೂರು ನೀಡಿದ್ದರು.

ಸಿಸಿಬಿ ಸೈಬರ್ ಕ್ರೈಂ ಪೊಲೀಸರು ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್ ಬಳಿ ಸ್ನೇಹಮಯಿ ಕೃಷ್ಣ ಅವರನ್ನು ಬಂಧಿಸಿ, ಹೆಚ್ಚಿನ ವಿಚಾರಣೆಗೊಳಪಡಿಸಿದ್ದಾರೆ. ಅಲ್ಲದೇ, ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ, ನ್ಯಾಯಾಲಯದಿಂದ ಶೋಧನಾ ವಾರಂಟ್ ಪಡೆದು, ಮೈಸೂರಿನ ಗೌರಿಶಂಕರನಗರದಲ್ಲಿರುವ ಸ್ನೇಹಮಯಿ ಕೃಷ್ಣ ಅವರ ನಿವಾಸ ,ಕಚೇರಿ ಮೇಲೆ ದಾಳಿ ಮಾಡಿ ಶೋಧ ನಡೆಸಲಾಗುತ್ತಿದೆ. ಫೇಸ್‌ಬುಕ್‌ನಲ್ಲಿ ಅಪ್‌ಲೋಡ್ ಮಾಡಿದ ಧ್ವನಿ ತುಣುಕುಗಳು ಸೇರಿದಂತೆ ಸಾಕ್ಷ್ಯಗಳನ್ನು ಸಂಗ್ರಹಿಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬೆಂಗಳೂರು ನಗರ ಸೈಬರ್ ಅಪರಾಧ ವಿಭಾಗದ ಪ್ರಕಟಣೆಯ ಪ್ರಕಾರ, ನಕಲಿ ದಾಖಲೆಗಳು ಮತ್ತು ನಕಲಿ ಧ್ವನಿ ತುಣುಕುಗಳನ್ನು ಬಳಸಿಕೊಂಡು ಸಾಮಾಜಿಕ ಮಾಧ್ಯಮದಲ್ಲಿ ಸುಳ್ಳು ಸುದ್ದಿಗಳನ್ನು ಪ್ರಸಾರ ಮಾಡಿದ ಆರೋಪದ ಮೇಲೆ ಸ್ನೇಹಮಯಿ ಕೃಷ್ಣ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಸಿಸಿಬಿ ಸೈಬರ್ ಹಿರಿಯ ಕೆಎಎಸ್ ಅಧಿಕಾರಿ ಡಿ.ಬಿ.ನಟೇಶ್ ನೀಡಿದ ದೂರಿನ ಆಧಾರದ ಮೇಲೆ ಫೆ.18ರಂದು ಪ್ರಕರಣ ದಾಖಲಿಸಿಕೊಂಡು, ತನಿಖೆ ಆರಂಭಿಸಲಾಗಿದೆ .

# ಸಫಾರಿ ಆರಂಭಕ್ಕೆ ಅಧಿಕಾರಿಗಳದೆ ದುಂಬಾಲು : ಧರಣಿ ಹತ್ತಿಕ್ಕಲು ಷಡ್ಯಂತ್ರ : ಹೊನ್ನೂರು ಪ್ರಕಾಶ್ ಆರೋಪ

• **ಉದಯವಾಹಿನಿ, ಗುಂಡ್ಲುಪೇಟೆ**




ಬಂಡೀಪುರದಲ್ಲಿ ಸಫಾರಿ ಪ್ರಾರಂಭಿಸುವಂತೆ ಕೆಲವು ಅಧಿಕಾರಿಗಳೇ ದುಂಬಾಲು ಬಿದ್ದಿದ್ದ ಬಗ್ಗೆ ಗಂಭೀರ ಆರೋಪ ಕೇಳಿಬಂದಿದೆ , ರೈತರ ಹಿತಕಾಯಲು ಪುರುಷೋತ್ತಿಲ್ಲದ ಕೆಲವರು ಸ್ಥಳೀಯರಿಗೆ ಹಣದ ಆಮಿಷವೊಡ್ಡಿ ಪ್ರತಿಭಟನೆ ಹತ್ತಿಕ್ಕುವ ಕುತಂತ್ರಕ್ಕೆ ಕೈ ಹಾಕಿದ್ದಾರೆ ಎಂದು ರೈತ ಮುಖಂಡ ಹೊನ್ನೂರು ಪ್ರಕಾಶ್ ಆರೋಪಿಸಿದ್ದಾರೆ.

ಸ್ಥಗಿತವಾಗಿದ್ದ ಸಫಾರಿ ಮರು ಆರಂಭಕ್ಕೆ ವಿರೋಧ ವ್ಯಕ್ತಪಡಿಸಿದ್ದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಮುಖಂಡರು ಮೇಲುಕಾಮನಹಳ್ಳಿ ಸಫಾರಿ ಕೇಂದ್ರದ ಬಳಿ ಧರಣಿಗೆ ಮುಂದಾದ ವೇಳೆ ಗಲಭೆ ಸೃಷ್ಟಿಸಲೆಂದೇ ಕೆಲವರಿಗೆ ಹಣದ ಆಮಿಷವೊಡ್ಡುವ ಮೂಲಕ ಕುಮ್ಮಕ್ಕು ನೀಡಿದ್ದಾರೆ, ಪ್ರತಿಭಟನಾ ನಿರತ ರೈತರ ಮೇಲೆ ಹಲ್ಲೆಗೆ ಮುಂದಾಗುವಂತೆ ಪ್ರೇರೇಪಿಸಿದ್ದಾರೆ ಇದು ಪ್ರಜಾಪ್ರಭುತ್ವದ ಮೇಲೆಸಗಿದ ದೌರ್ಜನ್ಯವಾಗಿದೆ, ಬಾಬಾ ಸಾಹೇಬರು ನೀಡಿದ ಸಂವಿಧಾನದ ಹಕ್ಕಿನಡಿಯಲ್ಲಿ ಪ್ರತಿಭಟನೆಗೆ ಮುಂದಾಗಿದ್ದ ನಮ್ಮ ಮೇಲೆ ದೈಹಿಕ ಹಲ್ಲೆಗೆ ಪ್ರಚೋದನೆ ನೀಡಿರುವ ಅರಣ್ಯಾಧಿಕಾರಿಯನ್ನ ವಿಚಾರಣೆಗೊಳಪಡಿಸಿ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

**ಪಂಚಾಯತಿವಾರು ಮನವಿ :** ಬಂಡೀಪುರದಲ್ಲಿ ಸಫಾರಿ ಮರು ಆರಂಭಕ್ಕೆ ಅಸ್ತು ಎಂದಿರುವ ಸರ್ಕಾರದ ಆದೇಶವನ್ನ ತಿರಸ್ಕರಿಸಿ ತಾಲ್ಲೂಕಿನ ಆಯಾ ಗ್ರಾಮಪಂಚಾಯತಿಗಳಲ್ಲಿ ಹಕ್ಕೊತ್ತಾಯ ಮನವಿ ಸಲ್ಲಿಸಲು ಸಂಘಟನೆ ಮುಂದಾಗಿದೆ ಹಾಗೂ ಸಫಾರಿ ವಿರುದ್ಧ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಸಫಾರಿಯಿಂದ ಸ್ಥಳೀಯ ರೈತಾಪಿ ವರ್ಗಕ್ಕೆ ಎಳ್ಳಷ್ಟೂ ಉಪಯೋಗವಿಲ್ಲ ಒಮ್ಮೆಲೇ ನೂರಾರು ಮಂದಿ ಕಾಡಿನೊಳಗೆ ಪ್ರವೇಶಿಸುವುದರಿಂದ ಅಲ್ಲಿರುವ ಪ್ರಾಣಿಗಳ ಸ್ವಚ್ಛಂದ ವಿಹಾರಕ್ಕೆ ಅಡ್ಡಿಯಾಗುವುದಲ್ಲದೆ ಜೀವಿತಕ್ಕೆ ಉಪದ್ರವಾಗುತ್ತದೆ, ವೈಜ್ಞಾನಿಕತೆ ಅರಿಯದೆ ರೈತರಿಗೆ ಪಾಠ ಹೇಳಲು ಬರುವ ರಾಜಕಾರಣಿಗಳ ನಡೆ ಖಂಡನೀಯ ಎಂದು ಕಿಡಿಕಾರಿದ್ದಾರೆ.

# ಇಂದಿನಿಂದ ಸಫಾರಿ ಪುನಾರಂಭ

• **ಉದಯವಾಹಿನಿ, ಮೈಸೂರು**

ಮೂರು ತಿಂಗಳಿನಿಂದ ಅರಣ್ಯ ಪ್ರದೇಶದಲ್ಲಿ ವಿಹರಿಸದೇ ಬೇಸರಗೊಂಡಿದ್ದ ಸಫಾರಿ ಪ್ರಿಯರಿಗೆ ಅರಣ್ಯ ಇಲಾಖೆ ಗುಡ್ ನ್ಯೂಸ್ ನೀಡಿದ್ದು, ಇಂದಿನಿಂದ ಸಫಾರಿಗೆ ರೆಡಿಯಾಗಲು ಗ್ರೀನ್ ಸಿಗ್ನಲ್ ನೀಡಿದೆ. ಮೈಸೂರಿನ ಅರಣ್ಯ ಭವನದಲ್ಲಿ ಮೈಸೂರು, ಕೊಡಗು ಮತ್ತು ಚಾಮರಾಜನಗರ ವಿಭಾಗದ ಅಧಿಕಾರಿಗಳೊಂದಿಗೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಅವರು ಸಭೆ ನಡೆಸಿ, ಬಹುತೇಕಯಿಂದ ಸಫಾರಿ ಆರಂಭಿಸಲು ಅಧಿಕೃತ ಆದೇಶ ಹೊರಡಿಸಲಾಗುವುದು. ಈ ಆದೇಶದಲ್ಲಿರುವ ಷರತ್ತುಗಳ ಉಲ್ಲಂಘನೆ ಆದರೆ, ಸಂಬಂಧಿತ ಅಧಿಕಾರಿಗಳನ್ನೇ ಹೊಣೆ ಮಾಡಲಾಗುವುದು ಎಂದು ತಿಳಿಸಿದರು. ಮಾನವ-ಹುಲಿ ಸಂಘರ್ಷದ ಹಿನ್ನೆಲೆಯಲ್ಲಿ ಕಳೆದ ನ. 7ರಂದು ಸ್ಥಗಿತಗೊಳಿಸಲಾಗಿದ್ದ ಸಫಾರಿಯನ್ನು ಫೆ.21ರಿಂದ ಷರತ್ತುಬದ್ಧವಾಗಿ ಪುನಾರಂಭಿಸಲು ನಿರ್ಧರಿಸಿದ್ದು, ಈ ಷರತ್ತುಗಳನ್ನು ಕಟ್ಟುನಿಟ್ಟಾಗಿ ಜಾರಿ ಮಾಡುವಂತೆ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದ್ದಾರೆ. ನ.7ಕ್ಕೆ ಮೊದಲು ಬಳಕೆಯಾಗುತ್ತಿದ್ದ ಸಫಾರಿ ವಾಹನಗಳ ಶೇ.50ರಷ್ಟು ವಾಹನ ಮತ್ತು ಸಿಬ್ಬಂದಿಯನ್ನು ಮಾತ್ರವೇ ಬಳಕೆ ಮಾಡಬೇಕು. ಹೆಚ್ಚಾಗಿ ಬಸ್‌ಗಳ ಮೂಲಕ ಸಫಾರಿ ನಡೆಸಬೇಕು. ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ಕ್ಯಾಂಪರ್ ಜೀಪ್ ಬಳಕೆ ಮಾಡಬೇಕು. ಈ ಬಗ್ಗೆ ಸ್ಪಷ್ಟ ಆದೇಶ ಹೊರಡಿಸಲಾಗುವುದು ಎಂದರು. ಬಂಡಿಪುರ ಮತ್ತು ನಾಗರಹೊಳೆ ಅರಣ್ಯ ಪ್ರದೇಶದಲ್ಲಿ ಮಾನವ-ವನ್ಯಜೀವಿ ಸಂಘರ್ಷ ಇರುವ ಪ್ರದೇಶವನ್ನು ಗುರುತಿಸಬೇಕು. ಆ ಪ್ರದೇಶದಲ್ಲಿ ಗಸ್ತು ಹೆಚ್ಚಿಸಬೇಕು. ವನ್ಯಜೀವಿಗಳು ವಸತಿ ಪ್ರದೇಶಕ್ಕೆ ಬಾರದಂತೆ, ಜೀವಹಾನಿ, ಬೆಳೆ ಹಾನಿ ಮಾಡದಂತೆ ಎಚ್ಚರಿಕೆ ವಹಿಸಬೇಕು ಎಂದು ನಿರ್ದೇಶನ ನೀಡಿದರು. ಬಂಡೀಪುರ ಅರಣ್ಯದ ಗಡಿಯಲ್ಲಿ 100 ಕಿ.ಲೋ. ಮೀಟರ್‌ಅತ್ಯಂತ ಸೂಕ್ಷ್ಮ ಪ್ರದೇಶವಾಗಿದ್ದು, 5 ಕಿ.ಮೀ.ಗೆ ಒಂದರಂತೆ 25 ಶಿಬಿರ ನಿರ್ಮಿಸಿ ಪ್ರತಿ ಶಿಬಿರದಲ್ಲಿ ಸ್ಥಳೀಯರನ್ನು ಕಾಡಿನ ಮಿತ್ರ ಎಂದು ನೇಮಕ ಮಾಡಿಕೊಂಡು ವನ್ಯಜೀವಿಗಳ ಚಲನವಲನದ ಬಗ್ಗೆ ನಿಗಾ ಇಡಬೇಕು. ಥರ್ಮಲ್ ಡ್ರೋನ್, ವಾಹನ ಇತ್ಯಾದಿ ಯಾವುದೇ ಸೌಲಭ್ಯ ಬೇಕಿದ್ದರೂ ಲಿಖಿತ ಮೂಲಕ ಪ್ರಸ್ತಾವನೆ ಸಲ್ಲಿಸಿ ಎಂದರು.

### ಕಾಡ್ಗಿಚ್ಚು ನಿಯಂತ್ರಿಸಲು ಸೂಚನೆ

**ನಾಗರಹೊಳೆ, ಬಂಡೀಪುರ, ಬಿಆರ್‌ಟಿಯಲ್ಲಿ ಈ ಬೇಸಿಗೆಯಲ್ಲಿ ಕಾಡ್ಗಿಚ್ಚು ನಿಯಂತ್ರಿಸಲು ಕ್ರಮ ವಹಿಸುವಂತೆ ಸೂಚಿಸಿದ ಸಚಿವರು, ಬೇಸಿಗೆಯಲ್ಲಿ ಹುಲಿ, ಚಿರತೆ, ಆನೆ ಸೇರಿದಂತೆ ಯಾವುದೇ ವನ್ಯಜೀವಿ ಆಹಾರ ಮತ್ತು ನೀರಿನ ಕೊರತೆಯಿಂದ ಕಾಡಿನಿಂದ ಹೊರಬಾರದಂತೆ ಕ್ರಮ ಕೈಗೊಳ್ಳಲು ತಿಳಿಸಿದರು.**




### ವಿಶ್ವಾಸಕ್ಕೆ ತೆಗೆದುಕೊಳ್ಳಲು ಸೂಚನೆ

**ಅರಣ್ಯ ಸಂರಕ್ಷಣೆ, ವನ್ಯಜೀವಿ ಸಂರಕ್ಷಣೆ ಆಗಬೇಕಾದರೆ ಸ್ಥಳೀಯರ ನೆರವು, ಸಹಕಾರ, ಸಹಯೋಗ ಅತ್ಯಂತ ಮುಖ್ಯ. ಈ ನಿಟ್ಟನಲ್ಲಿ ಅರಣ್ಯ ಸಿಬ್ಬಂದಿ ಸ್ಥಳೀಯರೊಂದಿಗೆ ಸೌಹಾರ್ದಯುತವಾಗಿ ವರ್ತಿಸಬೇಕು. ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅರಣ್ಯ ಸಂರಕ್ಷಣೆ ಮಾಡಬೇಕು ಎಂದರು.**

### ಮಾನವ ಜೀವ ರಕ್ಷಣೆ ಆದ್ಯತೆ

ವನ್ಯಜೀವಿಗಳ ರಕ್ಷಣೆಯ ಜೊತೆಗೆ ಕಾಡಿನಂಚಿನಲ್ಲಿ ವಾಸಿಸುತ್ತಿರುವ ನಿವಾಸಿಗಳ ಜೀವ ರಕ್ಷಣೆಯೂ ಅರಣ್ಯ ಇಲಾಖೆಯ ಪ್ರಥಮ ಆದ್ಯತೆ ಆಗಿದೆ. ಇದರ ಜೊತೆಗೆ ಬೆಳೆ ರಕ್ಷಣೆಗೂ ಒತ್ತು ನೀಡಬೇಕು. ಸಫಾರಿಯಿಂದ ಬರುವ ಆದಾಯದಲ್ಲಿ ಶೇ.35ರಷ್ಟು ಹಣವನ್ನು ಅರಣ್ಯದಂಚಿನ ವಸತಿ ಪ್ರದೇಶಗಳಲ್ಲಿನ ಯುವ ಜನರಿಗೆ ಕೌಶಲ್ಯ ತರಬೇತಿ ನೀಡಲು, ಜಾನುವಾರುಗಳಿಗೆ ಮೇವು ಒದಗಿಸಲು, ಮಕ್ಕಳಿಗೆ ಶಿಕ್ಷಣ ಕೊಡಿಸಲು ವಿನಿಯೋಗಿಸಬೇಕು ಎಂದು ತಿಳಿಸಿದರು.

### ಇ-ಗಸ್ತು ಅಳವಡಿಕೆಗೆ ನಿರ್ದೇಶನ

**ಇಲಾಖೆಯ ಕಾಯಂ ಸಿಬ್ಬಂದಿ ಕಡ್ಡಾಯವಾಗಿ ಅರಣ್ಯ ಇಲಾಖೆ ಆಂತರಿಕವಾಗಿ ಅಭಿವೃದ್ಧಿಪಡಿಸಿರುವ ಇ-ಗಸ್ತು ತಂತ್ರಾಂಶವನ್ನು ಬಳಕೆ ಮಾಡಬೇಕು. ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹೊರಗುತ್ತಿಗೆಯ ಸಿಬ್ಬಂದಿ ಇ-ಸ್ಟ್ರೈಪ್ ಬಳಕೆ ಮಾಡಲಿ ಎಂದು ತಿಳಿಸಿದರು. ಸಮಗ್ರ ಕಮಾಂಡ್ ಕೇಂದ್ರದಲ್ಲಿ ವನ್ಯಜೀವಿಗಳ ಚಲನವಲನದ ಬಗ್ಗೆ ನಿಗಾ ಇಡಬೇಕು. ಕೂಡಲೇ ಸಂಬಂಧಿತ ವಲಯದ ಅಧಿಕಾರಿ, ಸಿಬ್ಬಂದಿಗೆ ಸೂಚನೆ ನೀಡಬೇಕು. 1926 ದೂರವಾಣಿ ಸಂಖ್ಯೆಗೆ ಬರುವ ದೂರು ಮತ್ತು ಮಾಹಿತಿಗೆ ತಕ್ಷಣ ಸ್ಪಂದಿಸಬೇಕು ಎಂದು ಸೂಚಿಸಿದರು.**

# ಅಂಗನವಾಡಿ ನೌಕರಿ; ಹೆಚ್ಚಿದ ಬೇಡಿಕೆ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ಯಾವುದೇ ಶಿಫಾರಸು, ರಾಜಕೀಯ ಒತ್ತಡ ಇಲ್ಲದೆ ಅವರು ಪಡೆದ ಅಂಕಗಳು ಹಾಗೂ ಅರ್ಹತೆಗಳ ಅನ್ವಯ ಜಿಲ್ಲೆಯಲ್ಲಿ 31 ಅಂಗನವಾಡಿ ಕಾರ್ಯಕರ್ತೆಯರು, 163 ಸಹಾಯಕಿಯರಿಗೆ ನೇಮಕಾತಿ ಆದೇಶ ಪತ್ರಗಳನ್ನು ವಿತರಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಸಿ.ಸುಧಾಕರ್ ತಿಳಿಸಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆಶ್ರಯದಲ್ಲಿ ನಗರದ ಕನ್ನಡ ಭವನದಲ್ಲಿ ಆಯೋಜಿಸಿದ್ದ ಹೊಸದಾಗಿ ನೇಮಕಗೊಂಡ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ನೇಮಕಾತಿ ಆದೇಶ ಪತ್ರ ವಿತರಣೆ ಹಾಗೂ ವಿವಿಧ ಇಲಾಖಾ ಸೌಲಭ್ಯ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

'ಅಂಗನವಾಡಿ ಸಿಬ್ಬಂದಿ ನೇಮಕದ ಬಗ್ಗೆ ಈ ಹಿಂದೆ ಬಹಳ ತಾತ್ಸರ ಇತ್ತು. ಆ ಕೆಲಸವನ್ನು ನಾವೇಕೆ ಮಾಡಬೇಕು ಎಂಬ ಭಾವನೆ ಇತ್ತು. ಪ್ರಸ್ತುತ ಆ ಭಾವನೆ ಬದಲಾಗಿದೆ. ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ಹುದ್ದೆಗಳಿಗೆ ಬೇಡಿಕೆ ಇದೆ. ಅದೇ ರೀತಿ ಸ್ಪರ್ಧೆಯು ಇದೆ. ಆಯ್ಕೆ ಬಯಸುವ ಅಭ್ಯರ್ಥಿಗಳು ಗಳಿಸಿದ ವಿದ್ಯಾರ್ಹತೆಯ ಅಂಕಗಳು ಹಾಗೂ ಸ್ಥಳೀಯ ವಾಸದ ಅರ್ಹತೆಯ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ' ಎಂದು ಹೇಳಿದರು.



ನೇಮಕಾತಿ ಆಗಿರುವ ತಾವೆಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಸರ್ಕಾರದ ಆಶಯಕ್ಕೆ ತಕ್ಕಂತೆ ನಡೆದುಕೊಳ್ಳಬೇಕು. ಅಂಗನವಾಡಿಗಳಿಗೆ ಬರುವ ಕಾರ್ಮಿಕರ ಮಕ್ಕಳು, ಬಡವರ ಮಕ್ಕಳ ಬೆಳವಣಿಗೆಗೆ ಶಕ್ತಿ ತುಂಬಬೇಕು. ಮಕ್ಕಳಿಗೆ ತಾಯಿ ನಂತರದ ಪಾಠಶಾಲೆಯ ಅನುಭವವನ್ನು ಕೊಡುವವರೇ ಅಂಗನವಾಡಿ ಕಾರ್ಯಕರ್ತೆಯರು, ತಮಗೆ ನಿಯೋಜಿತವಾಗಿರುವ ಜವಾಬ್ದಾರಿಗಳನ್ನು ಸರಿಯಾಗಿ ನಿರ್ವಹಿಸಿ ಸಮಾಜದ ಅಭಿವೃದ್ಧಿಗೆ ಪಾತ್ರರಾಗಬೇಕು ಎಂದು ಕಿವಿಮಾತು ಹೇಳಿದರು.

ರಾಷ್ಟ್ರೀಯ ಶಿಕ್ಷಣ ನೀತಿ ಅನ್ವಯ 3ನೇ ವರ್ಷದಿಂದ ನರ್ಸರಿ ಮಾದರಿಯಲ್ಲಿ ಮಕ್ಕಳಿಗೆ ಶಿಕ್ಷಣ ನೀಡಬೇಕು ಎಂಬ ವಿಚಾರದಲ್ಲಿ ಶಿಕ್ಷಣ ಇಲಾಖೆ ,ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಟ್ಟದಲ್ಲಿ ಚರ್ಚೆಗಳು ನಡೆಯುತ್ತಿವೆ.

ಇದರ ಭಾಗವಾಗಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಪ್ರಯೋಗಿಕವಾಗಿ ಅಂಗನವಾಡಿಗಳನ್ನು ಉನ್ನತೀಕರಿಸಿ ಮಾಂಟೆಸರಿ ಹಾಗೂ ನರ್ಸರಿ ಮಾದರಿಯಲ್ಲಿ ಶಿಕ್ಷಣ ನೀಡುವ ಪ್ರಯತ್ನ ನಡೆಯುತ್ತಿದೆ.

## ಮಿನಿ ನ್ಯೂಸ್

### ಕುಡಿಯುವ ನೀರಿನ ಸಮರ್ಪಕ ಪೂರೈಕೆಗೆ ಕ್ರಮ




• **ಉದಯವಾಹಿನಿ,ಗುಂಡ್ಲುಪೇಟೆ**

ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಕೇಂದ್ರ ಸ್ಥಳ ನಂಜನಗೂಡು ತಾಲ್ಲೂಕಿನ ದೇಬೂರಿನ ಜಾಕ್ವೆಲ್ ಹೋಳೆಗೆ ಪುರಸಭಾ ಮುಖ್ಯಾಧಿಕಾರಿ ಎಸ್.ಸರವಣ ಅಧಿಕಾರಿಗಳೊಟ್ಟಿಗೆ ಭೇಟಿ ನೀಡಿ ಪ್ರಸ್ತುತ ಸ್ಥಿತಿಗತಿಗಳ ಪರಿಶೀಲನೆ ನಡೆಸಿದರು.

ಬೇಸಿಗೆಯಲ್ಲಿ ಪಟ್ಟಣ ಜನತೆಗೆ ಕುಡಿಯುವ ನೀರಿನ ಅಭಾವ ಉಂಟಾಗದಂತೆ ಎಚ್ಚರವಹಿಸಲು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಅವರ ಸೂಚನೆಯಂತೆ ಸರಬರಾಜು ಮೂಲ ಸ್ಥಾನಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಜಾಕ್ವೆಲ್ ಹೊಳೆಗೆ ಬಂದು ಶೇಖರಣೆಯಾಗುವ ನೀರು ಕಡಿಮೆಯಾಗಿರುವುದನ್ನ ಮನಗಂಡ ಮುಖ್ಯಾಧಿಕಾರಿ ಸರವಣ ಶಾಸಕರ ಮುಖಾಂತರ ಸಂಬಂದಪಟ್ಟ ಇಲಾಖೆ ಅಧಿಕಾರಿಗಳ ಜೊತೆ ಫೋನ್ ಸಂಭಾಷಣೆ ನಡೆಸುವ ಮುಖಾಂತರ ಕಬಿನಿ ಜಲಾಶಯದಿಂದ ಸಮರ್ಪಕವಾಗಿ ನೀರು ಹರಿಸುವಂತೆ ಸೂಚಿಸಲಾಗಿದೆ ಇದರಿಂದ ಪಟ್ಟಣ ಜನತೆಗೆ ಕುಡಿಯುವ ನೀರಿನ ಸಮಸ್ಯೆ ತಲೆದೋರುವುದಿಲ್ಲ ಎಂದು ತಿಳಿಸಿದ್ದಾರೆ.

**ಮುಂಜಾಗೃತ ಕ್ರಮಕ್ಕೆ ಒತ್ತು :** ಕಬಿನಿ ಡ್ಯಾಂ ನಿಂದ ಜಾಕ್ವೆಲ್ ಜಲಾಶಯಕ್ಕೆ ನಿಯಮಿತವಾಗಿ ನೀರು ಹರಿಸುವುದರಿಂದ ನೀರೆತ್ತುವ ಯಂತ್ರದ ಚಾಲನೆಗೆ ಸಹಕಾರಿಯಾಗುತ್ತದೆ, ಇಂಜಿನಿಯರ್ ಅವರಿಗೆ ನೀರು ಸರಾಗವಾಗಿ ಹರಿದು ಹೋಗುವಂತೆ ಕ್ರಮವಹಿಸುವಂತೆ ಸೂಚಿಸಲಾಗಿದೆ ಎಂದು ತಿಳಿಸಿದರು.

### ಸಾಮಾಜಿಕ ನ್ಯಾಯದಿಂದ ದೇಶದ ಅಭಿವೃದ್ಧಿ ಸಾಧ್ಯ : ನ್ಯಾಯಾಧೀಶ ದೀಪು ಎಂ. ಟಿ.




• **ಉದಯವಾಹಿನಿ, ಗುಂಡ್ಲುಪೇಟೆ**

ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ ಪ್ರತಿಯೊಬ್ಬರು ಜವಬ್ದಾರಿ ಅರಿತರೆ ಸಮಾಜದ ಅಭಿವೃದ್ಧಿಯ ಜೊತೆಗೆ ದೇಶದ ಉತ್ತುಂಗ ಪ್ರಗತಿಗೆ ಸಹಕಾರಿಯಾಗಲಿದೆ ಎಂದು ತಾಲ್ಲೂಕು ಕಾನೂನು ಸೇವೆಗಳ ಸಮಿತಿ ಸದಸ್ಯ ಕಾರ್ಯದರ್ಶಿಗಳು ಹಾಗೂ ಪ್ರದಾನ ಸಿವಿಲ್ ಮತ್ತು ಜೆಎಂಎಫ್ಸಿ ನ್ಯಾಯಾಧೀಶರಾದ ದೀಪು.ಎಂ.ಟಿ. ಅಭಿಪ್ರಾಯಪಟ್ಟರು, ತಾಲ್ಲೂಕು ಕಾನೂನು ಸೇವೆ ಸಮಿತಿ ವಕೀಲರ ಸಂಘ , ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗುಂಡ್ಲುಪೇಟೆ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಕಾನೂನು ಅರಿವು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ದೇಶವು ಅಭಿವೃದ್ಧಿಯತ್ತ ಸಾಗಲು ಪ್ರತಿಯೊಬ್ಬರ ಜವಾಬ್ದಾರಿಯುತ ನಡೆ ಬಹುಮುಖ್ಯ ಪಾತ್ರವಹಿಸುತ್ತದೆ , ಪ್ರತಿಯೊಬ್ಬರಿಗೂ ಸಾಮಾಜಿಕ ನ್ಯಾಯ ದೊರೆತಿದ್ದೆ ಆದಲ್ಲಿ ಸಮಾನತೆ ದಕ್ಕುವ ಜೊತೆಗೆ ದೇಶದ ಹಾಗೂ ವಿಶ್ವದ ಪ್ರಗತಿಗೆ ಮುನ್ನುಡಿ ಬರೆಯಬಹುದು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಕಾರ್ಯಕ್ರಮ ಕುರಿತು ವಕೀಲರ ಸಂಘದ ತಾಲ್ಲೂಕು ಅಧ್ಯಕ್ಷ ವೆಂಕಟೇಶ್, ಕಾರ್ಯದರ್ಶಿ ಬಸವರಾಜು, ಪ್ರಾಂಶುಪಾಲ ಡಾ.ಮದನ್ ಕುಮಾರ್ ಮಾತನಾಡಿದರು. ಈ ಸಂಧರ್ಭದಲ್ಲಿ ರಾಷ್ಟ್ರೀಯ ಸೇವಾ ಯೋಜನಾಧಿಕಾರಿ ಕವಿತಾ, ಅಧ್ಯಾಪಕರಾದ ಪವಿತ್ರ, ಮಹದೇವಪ್ರಸಾದ್, ಅನ್ನಪೂರ್ಣ, ಪುಟ್ಟರಾಜು, ಶ್ರೀನಿವಾಸ್ ನಾಯಕ್, ಮಂಜುನಾಥ್ ಹಾಜರಿದ್ದರು.

### ಡೇರಿ ಕಾರ್ಯದರ್ಶಿ ಕಾರ್ಯವೈಖರಿಗೆ ಖಂಡನೆ

• **ಪಾಂಡವಪುರ, ಉದಯವಾಹಿನಿ1**

ತಾಲ್ಲೂಕಿನ ಮಾಡರಹಳ್ಳಿ ಗ್ರಾಮದ ಡೇರಿ ಕಾರ್ಯದರ್ಶಿ ಹಾಗೂ ಸೂಪರ್ ವೈಸರ್ ವರ್ತನೆ ಖಂಡಿಸಿ ರೈತರು ಮತ್ತು ಮಹಿಳೆಯರು ಬುಧವಾರ ರಸ್ತೆಗೆ ಹಾಲು ಸುರಿದು ಪ್ರತಿಭಟನೆ ನಡೆಸಿದರು. ಗ್ರಾಮದ ರಸ್ತೆಯಲ್ಲಿ ಜಮಾಯಿಸಿದ ರೈತರು ಡೇರಿ ಕಾರ್ಯದರ್ಶಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಹಾಲು ಸರಬರಾಜು ಮಾಡಲು ಬಂದ ರೈತರಿಂದ ಸರಿಯಾಗಿ ಹಾಲು ಪರೀಕ್ಷೆ ನಡೆಸದೆ, ಗುಣಮಟ್ಟವಿಲ್ಲ ಎಂದು ಹಾಲನ್ನು ವಾಪಸ್ ಕಳುಹಿಸಿದ್ದಾರೆ.

ಮಹಿಳೆಯರ ವಿರುದ್ಧ ದುರ್ನಡೆಯಿಂದ ನಡೆದುಕೊಳ್ಳುತ್ತಾರೆ. ಪುರುಷರು ಪ್ರಶ್ನೆ ಮಾಡಿದರೆ ಅವರ ವಿರುದ್ಧ ಪ್ರಕರಣ ದಾಖಲಿಸುತ್ತಾರೆ ಎಂದು ಆರೋಪಿಸಿದರು. ಕಳೆದೆರಡು ದಿನಗಳಿಂದ ಹಾಲು ಸರಬರಾಜು ಮಾಡದ ಕಾರಣ ಸುಮಾರು 960 ಲೀಟರ್ ಹಾಲು ನಷ್ಟವಾಗಿದೆ.

# ಹಿಂದೂ ಧರ್ಮಕ್ಕೆ ಪ್ರಾಣಕೊಟ್ಟ ಶಿವಾಜಿ: ಅರುಂಧತಿ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ಛತ್ರಪತಿ ಶಿವಾಜಿ ಮಹಾರಾಜರ ಹೆಸರೇ ಒಂದು ಮಹಾನ್ ಶಕ್ತಿ. ನಮ್ಮ ದೇಶದ ಅತ್ಯಂತ ಧೈರ್ಯಶಾಲಿ ರಾಜ ಮಾತ್ರವಲ್ಲ, ಹಿಂದೂ ಧರ್ಮವನ್ನು ರಕ್ಷಿಸಲು ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದ ರಾಜರಲ್ಲಿ ಶಿವಾಜಿ ಪ್ರಮುಖರು' ಎಂದು ಜಿಲ್ಲಾಡಳಿತ ಭವನದ ಕಚೇರಿಯ ಸಹಾಯಕ ಅಧಿಕಾರಿ ಅರುಂಧತಿ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಛತ್ರಪತಿ ಶಿವಾಜಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.




ಶಿವಾಜಿಯ ಶೌರ್ಯ, ಸಾಹಸ ರಾಷ್ಟ್ರಭಕ್ತಿ ಎಂದೆಂದಿಗೂ ಪ್ರೇರಣಾದಾಯಕ. ಅವರ ತತ್ವಸಿದ್ಧಾಂತಗಳನ್ನು ನಮ್ಮೆಲ್ಲರ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು. ಸಮುದಾಯದ ಮುಖಂಡ ಅನಿಲ್ ಕುಮಾರ್ ಮಾತನಾಡಿ, ಶಿವಾಜಿ ಮಹಾರಾಜರು 14ನೇ ವಯಸ್ಸಿನಲ್ಲಿ ಕರ್ನಾಟಕದ ಹಂಪಿಗೆ ಭೇಟಿ ನೀಡಿದಾಗ ಅಲ್ಲಿನ ಸಾಮ್ರಾಜ್ಯ ಕಂಡು ಪ್ರೇರಣೆಗೊಂಡರು. ತಮ್ಮ ಜೀವಿತದ ಅವಧಿಯಲ್ಲಿ ತನ್ನ ಸಾಮ್ರಾಜ್ಯವನ್ನು ಮೊಘಲರಿಂದ ಕಾಪಾಡಿಕೊಳ್ಳಲು ಅನೇಕ ಹೋರಾಟಗಳನ್ನು ಮಾಡಿದರು. ಸ್ವಾಭಿಮಾನಿ ರಾಷ್ಟ್ರ ನಿರ್ಮಾಣಕ್ಕೆ ಹೋರಾಡಿ ಹಿಂದೂಸ್ಥಾನವನ್ನು ಒಗ್ಗೂಡಿಸಲು ಶ್ರಮಿಸಿದರು. ಕೊಂಕಣ ಭಾಗದಲ್ಲಿದ್ದ ಅನೇಕ ಕೋಟೆಗಳನ್ನು ಗೆದ್ದು ಕ್ರಮೇಣ ಭಾರತದ ಬಹು ಭಾಗವನ್ನು ತಮ್ಮ ಆಳ್ವಿಕೆಗೆ ಒಳಪಡಿಸಿದರು ಎಂದು ಸ್ಮರಿಸಿದರು. ಬಾಲ್ಯದಲ್ಲೇ ನಾಯಕತ್ವದ ಗುಣಗಳನ್ನು ಹೊಂದಿದ್ದರು. ತನ್ನ ತಾಯಿಯ ಆರೈಕೆಯಲ್ಲಿ ಮುದ್ದು ಮಗನಾಗಿ ಬೆಳೆದರು. ಶಿವಾಜಿ ಮಹಾರಾಜರಿಗೆ ಕೇವಲ 14 ವರ್ಷ ವಯಸ್ಸಿನಲ್ಲೇ ಅತ್ಯಂತ ಧೈರ್ಯಶಾಲಿ, ನಿರ್ಭೀತ, ನ್ಯಾಯಸಮ್ಮತವಾಗಿದ್ದ ನಿರ್ಧಾರ ತೆಗೆದುಕೊಳ್ಳುವ ವಿಶೇಷ ಶಕ್ತಿ ಹೊಂದಿದ್ದರು. ಮಹಿಳೆಯರ ಬಗ್ಗೆ ವಿಶೇಷ ಗೌರವ ತೋರುತ್ತಿದ್ದರು. ಭಾರತದಲ್ಲಿ ಮೊದಲ ಬಾರಿಗೆ ಗೆರಿಲ್ಲಾ ಯುದ್ಧವನ್ನು ಪ್ರಾರಂಭಿಸಿದರು. 16ನೇ ವಯಸ್ಸಿನಲ್ಲೇ ಶಿವನೇರಿ ದುರ್ಗದ ಮೇಲೆ ಯುದ್ಧ ಮಾಡಿ ಕೋಟೆಯನ್ನು ವಶಪಡಿಸಿಕೊಂಡ ನಂತರ ಕೊಂಕಣ ಭಾಗದಲ್ಲಿದ್ದ ಅನೇಕ ಕೋಟೆಗಳನ್ನು ಗೆದ್ದು ಕ್ರಮೇಣ ಇಡೀ ಪಶ್ಚಿಮ ಭಾರತವನ್ನು ತಮ್ಮ ಆಳ್ವಿಕೆಗೆ ತಂದರು. ತನ್ನ ಸಾಮ್ರಾಜ್ಯವನ್ನು ತಮಿಳುನಾಡಿನವರೆಗೆ ವಿಸ್ತರಿಸಿದರು ಎಂದರು.

ದಕ್ಷಿಣ ಭಾರತದಲ್ಲಿ ಇಂದಿಗೂ ಪ್ರಾಚೀನ ಹಿಂದೂ ದೇವಾಲಯಗಳು ಅಳಿಯದೇ ಉಳಿದಿದ್ದರೆ ಅದಕ್ಕೆ ಮುಖ್ಯ ಕಾರಣ ಛತ್ರಪತಿ ಶಿವಾಜಿ ಅವರ ಆಡಳಿತ ಎಂದರು.

# ವಿಜ್ಞಾನ, ತಂತ್ರಜ್ಞಾನ ಮನುಕುಲಕ್ಕೆ ಅತ್ಯವಶ್ಯ

• **ಉದಯವಾಹಿನಿ, ನಾಗಮಂಗಲ**

ಮುಂಬರುವ ಪೀಳಿಗೆಗೆ ವಿಜ್ಞಾನ ಸಹಜವಾಗುತ್ತದೆ. ತಂತ್ರಜ್ಞಾನ ಆಧುನಿಕ ಬೆಳಕಾಗುತ್ತದೆ. ಜ್ಞಾನ ಅಂತರಂಗದ ಬಾಹ್ಯದ ಬೆಳಕಾಗುತ್ತದೆ. ಎರಡು ಬೆಳಕು ಏಕಕಾಲಕ್ಕೆ ಮೇಲೈಸಿದಾಗ ಬದುಕು ಸುಂದರವಾಗುತ್ತದೆ' ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ಸ್ವಾಮೀಜಿಯವರ 13ನೇ ವರ್ಷದ ಪಟ್ಟಾಭಿಷೇಕದ ಅಂಗವಾಗಿ ತಾಲ್ಲೂಕಿನಲ್ಲಿರುವ ಕ್ಷೇತ್ರದ ಬಿಜಿಎಸ್ ಸಭಾಭವನದಲ್ಲಿ ಆಯೋಜಿಸಿದ್ದ ವಿಜ್ಞಾತಂ – 2026ರ ವಸ್ತುಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು.

ಆಧುನಿಕ ತಂತ್ರಜ್ಞಾನ ಮತ್ತು ವಿಜ್ಞಾನ ಒಂದೇ ಶಕ್ತಿಯ ವಿವಿಧ ಮುಖಗಳ ಆವಿರ್ಭಾವಗಳು. ಕೋತಿ ಜನ್ಮದಿಂದ ವಿಕಾಸವಾಗಿ ಮನುಷ್ಯ ಜನ್ಮಕ್ಕೆ ಬಂದಿದ್ದೇವೆ. ಇನ್ನೂ ಮುಂದುವರೆದು ವಿಕಾಸವಾಗುತ್ತಾ ಸಾಗುವುದೇ ಜ್ಞಾನ ವಿಜ್ಞಾನ ತಂತ್ರಜ್ಞಾನದ ಉದ್ದೇಶ.

ಬೇರು ಮರೆತ ಕಾಂಡಕ್ಕೆ ಅಸ್ತಿತ್ವ ಇಲ್ಲ. ಕಾಂಡ ಇರದ ರೆಂಬೆ ಕೊಂಬೆಗಳಿಗೆ ಉಳಿವಿಲ್ಲ. ಬೇರು ಕಾಂಡ ರೆಂಬೆ ಕೊಂಬೆಗಳಿರದ ಮರದಲ್ಲಿ ಹೂವಿಲ್ಲ, ಎಲೆಗಳಿಲ್ಲ, ಹಣ್ಣುಗಳಿರುವುದಿಲ್ಲ. ಯಾರಾದರೂ ವಿಜ್ಞಾನ ಧರ್ಮ ಏಕೆ ಬೇಕು ಎಂದು ಕೇಳಿದರೆ ಹಣ್ಣು ಹೂವು ಬೇಕು ಆದರೆ ಬೇರು ಏಕೆ ಬೇಕು ಎಂದು ಕೇಳಿದಂತಾಗುತ್ತದೆ. ಹಾಗಾಗಿ ವಿಜ್ಞಾನ, ಜ್ಞಾನ, ತಂತ್ರಜ್ಞಾನ ಮನುಕುಲಕ್ಕೆ ಅತ್ಯವಶ್ಯ ಎಂದರು.

ಮನುಷ್ಯನ ತಪ್ಪುಗಳನ್ನು ರೋಬೋಟ್‌ಗಳು ಪ್ರಶ್ನಿಸುವ ಕಾಲ ಸನ್ನಿಹಿತವಾದೆ. ನಿಮ್ಮ ಕೆಲಸಗಳನ್ನು ಮಾಡಿಕೊಡಲು ನಮ್ಮನ್ನು ಸೃಷ್ಟಿಸಿದ್ದೀರಾ. ನಿಮ್ಮನ್ನು ಕೂಡ ಮತ್ತ್ಯಾರೋ ಸೃಷ್ಟಿಸಿದ್ದಾರೆ. ನೀವು ಕೂಡ ನಿಮ್ಮ ಧರ್ಮಕರ್ಮದ ಅನುಸಾರ ಜೀವಿಸಬೇಕು.

ಮನುಷ್ಯನಾಗಿ ಹುಟ್ಟಿ ಮನುಷ್ಯರಾಗಿಯೇ ಬಾಳಬೇಕು. ಸಾರ್ಥಕತೆಯತ್ತ ಸಾಗುವುದೇ ಪರಮ ಗುರಿಯಾಗಬೇಕು ಎಂದರು.ಬಿಜಿಎಸ್ ಕಾಲಾವಧಿಯಲ್ಲಿ ಯಾವುದೇ ಎಐ ತಂತ್ರಜ್ಞಾನ ಇರಲಿಲ್ಲ. ಗುರೂಜೀ ಆಸೆಯಂತೆ ವಿಜ್ಞಾನ ಜ್ಞಾನ ತಂತ್ರಜ್ಞಾನ ಉತ್ಸವ ಆಯೋಜನೆಗೊಂಡಿದೆ. ನಮ್ಮೆಲ್ಲರೊಳಗೂ ಒಬ್ಬ ಬುದ್ಧನಿದ್ದಾನೆ. ಅವನನ್ನು ಎಚ್ಚರಿಸುವ ಕೆಲಸ ಆಗಬೇಕು. ಅದೇ ವಿಜ್ಞಾತಂನ ಆಶಯ ಎಂದರು.

# ಗ್ರಾಮೀಣ ಕಲೆ ಉಳಿಸಲು 'ಹಳ್ಳಿ ಹಬ್ಬ': ಕೆಬಿಎಸ್ ಸಿದ್ದರಾಜು

• **ಉದಯವಾಹಿನಿ ,ಕನಪಪುರ**

ಪ್ರಾಚೀನ ಗ್ರಾಮೀಣ ಕಲೆ ಉಳಿಸಿ ಬೆಳೆಸುವ ಹಾಗೂ ಈಗಿನ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ರೋಟರಿ ಸಂಸ್ಥೆ ವತಿಯಿಂದ ಹಳ್ಳಿ ಹಬ್ಬ ಎಂಬ ವಿನೂತನ ಕಾರ್ಯಕ್ರಮವನ್ನು ಬನವಾಸಿ ಶಾಲೆಯಲ್ಲಿ ಫೆ.20 ಮತ್ತು 21ರಂದು ಆಯೋಜಿಸಲಾಗಿದೆ ಎಂದು ರೋಟರಿ ಸಂಸ್ಥೆ ಅಧ್ಯಕ್ಷ ಕೆಬಿಎಸ್ ಸಿದ್ದರಾಜು ತಿಳಿಸಿದರು.

ರೋಟರಿ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೋಟರಿ ಬೆಂಗಳೂರು ಮೆಟ್ರೊ, ರೋಟರಿ ಸೌತ್ ಎಂಡ್, ರೋಟರಿ ಸೌತ್ ಸಮರ್ಪಣೆ, ಹಾರೋಹಳ್ಳಿ ಮತ್ತು ಕನಕಪುರ ರೋಟರಿ ಆಶ್ರಯದಲ್ಲಿ ಬನವಾಸಿ ಸರ್ಕಾರಿ ಶಾಲೆಯಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಗ್ರಾಮೀಣ ಸೊಗಡಿನ ಹಳ್ಳಿ




ಕಾರ್ಯಕ್ರಮಗಳ ಮರುಸೃಷ್ಟಿಯೊಂದಿಗೆ ನಡೆಯಲಿದೆ ಎಂದರು.ಖಜಾಂಚಿ ಭಾನುಪ್ರಕಾಶ್ ಮಾತನಾಡಿ, ಗ್ರಾಮೀಣ ಸಂಸ್ಕೃತಿ ಕ್ರೀಡೆಗಳಿಗಾಗಿ ಹಳ್ಳಿ ಹಬ್ಬ ಆಯೋಜಿಸಲಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಜಾಗೃತಿ ಮತ್ತು ಮಾರ್ಗದರ್ಶನ ಕಾರ್ಯಕ್ರಮ ನಡೆಯಲಿದೆ. ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ಕುರಿತು ಮಾರ್ಗದರ್ಶನ ನೀಡಲಾಗುವುದು. ಹೆಣ್ಣು ಮಕ್ಕಳಲ್ಲಿ ಕಾಣಿಸಿಕೊಳ್ಳುವ ಸರ್ವೈಕಲ್ ಕ್ಯಾನ್ಸರ್ ತಡೆಗಟ್ಟುವ ಕುರಿತು ಜಾಗೃತಿ ಮೂಡಿಸಲಾಗುವುದು ಎಂದರು.

ಮಕ್ಕಳಿಗೆ ಪ್ಲಾನಿಟೋರಿಯಂ ಮತ್ತು ಟೆಲಿಸ್ಕೋಪ್ ಮೂಲಕ ಚಂದ್ರಲೋಕ ಮತ್ತು ನಕ್ಷತ್ರಗಳ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ಶಾಲೆಗಳಿಗೆ ಕ್ರೀಡಾ ಸಾಮಗ್ರಿ ಹಾಗೂ ಶುದ್ಧ ನೀರಿನ ಘಟಕ ವಿತರಿಸಲಾಗುವುದು. ಕಗ್ಗಲಹಳ್ಳಿ ಸರ್ಕಾರಿ ಶಾಲೆಯಲ್ಲಿ 7.5ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ಶೌಚಾಲಯ ಉದ್ಘಾಟನೆಗೊಳ್ಳಲಿದೆ ಎಂದು ಮಾಹಿತಿ ನೀಡಿದರು. ಹಳ್ಳಿ ಹಬ್ಬದಲ್ಲಿ ರಂಗೋಲಿ ಸ್ಪರ್ಧೆ, ಕಬಡ್ಡಿ, ಚಿನ್ನಿದಾಂಡು, ಹಗ್ಗಜಗ್ಗಾಟ ಸೇರಿದಂತೆ ಗ್ರಾಮೀಣ ಕ್ರೀಡೆಗಳನ್ನು ಆಯೋಜಿಸಲಾಗಿದೆ. ರಾಗಿ ಮತ್ತು ಭತ್ತದ ರಾಶಿ ಹಾಕಿ ಸುಗ್ಗಿ ವಾತಾವರಣ ನಿರ್ಮಿಸಿ ರಾಶಿ ಪೂಜೆ ನೆರವೇರಿಸಲಾಗುವುದು. ಸಂಜೆ ನೃತ್ಯ ಕಾರ್ಯಕ್ರಮ ನಡೆಯಲಿದೆ. ಹಳ್ಳಿ ಸಂಸ್ಕೃತಿ ವಿದೇಶಗಳಿಗೆ ಪರಿಚಯಿಸಲು ಯುಎಸ್‌ಎ ಸೇರಿದಂತೆ ವಿವಿಧ ದೇಶಗಳ ಗಣ್ಯರನ್ನು ಆಹ್ವಾನಿಸಲಾಗಿದೆ.

ಜಾನಪದ ಕಲಾತಂಡಗಳೊಂದಿಗೆ ಎತ್ತಿನ ಬಂಡಿಯಲ್ಲಿ ವಿದೇಶಿ ಗಣ್ಯರನ್ನು ಕರೆತರಲಾಗುವುದು. ಕ್ರೀಡಾ ವಿಜೇತರಿಗೆ ವಿದೇಶಿ ಗಣ್ಯರಿಂದಲೇ ಬಹುಮಾನ ವಿತರಿಸಲಾಗುವುದು. ತಾಲ್ಲೂಕಿನ ಜನರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಸಿದ್ದರಾಜು ಮನವಿ ಮಾಡಿದರು.

ಹಾರೋಹಳ್ಳಿ ರೋಟರಿ ಅಧ್ಯಕ್ಷ ನಾಗರಾಜು, ಕನಕಪುರ ರೋಟರಿ ಕಾರ್ಯದರ್ಶಿ ಮುನಿರಾಜು, ಪದಾಧಿಕಾರಿಗಳಾದ ವೆಂಕಟೇಶ್, ದೇಸಾಯಿ, ರಾಮಚಂದ್ರ, ಚಂದ್ರಪ್ರಭ, ಚಿಕ್ಕಸ್ವಾಮಿ ಉಪಸ್ಥಿತರಿದ್ದರು.

# ಮೈಸೂರಿನಲ್ಲಿ ಅಖಿಲ ಭಾರತ ಅಂಚೆ ಸಾಂಸ್ಕೃತಿಕ ಸಮ್ಮೇಳನ

## 17 ಪ್ರಥಮ, 4 ದ್ವಿತೀಯ ಹಾಗೂ 1 ತೃತೀಯ ಬಹುಮಾನ ಕೇರಳ ಚಾಂಪಿಯನ್, ಕರ್ನಾಟಕ ರನ್ನರ್ ಅಪ್

• **ಉದಯವಾಹಿನಿ ,ಮೈಸೂರು**

38ನೇ ಅಖಿಲ ಭಾರತ ಅಂಚೆ ಸಾಂಸ್ಕೃತಿಕ ಸಮಾರಂಭದಲ್ಲಿ ಕೇರಳ ಅಂಚೆ ವಲಯ 108 ಅಂಕಗಳೊಂದಿಗೆ ಒಟ್ಟು 22 ಬಹುಮಾನ ಗಳಿಸಿದ್ದು, 17 ಪ್ರಥಮ, 4 ದ್ವಿತೀಯ, 1 ತೃತೀಯ ಬಹುಮಾನಗಳೊಂದಿಗೆ ಚಾಂಪಿಯನ್ ಆಗಿ ಹೊರಹೊಮ್ಮಿತು.

ಅಂಚೆ ಇಲಾಖೆಯ ವತಿಯಿಂದ ನಗರದ ನಜರ್‌ಬಾದ್ ನಲ್ಲಿರುವ ಅಂಚೆ ತರಬೇತಿ ಕೇಂದ್ರದ ಸಭಾಂಗಣದಲ್ಲಿ ಏರ್ಪಡಿಸಲಾದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಪದ್ಮ ಪುರಸ್ಕೃತ, ಹಿಂದೂಸ್ತಾನಿ ಶಾಸ್ತ್ರೀಯ ಗಾಯಕ ಪಂಡಿತ್ ವೆಂಕಟೇಶ್ ಕುಮಾರ್ ಅವರು ಬಹುಮಾನ ವಿತರಿಸಿದರು.

ಕರ್ನಾಟಕ ಅಂಚೆ ವಲಯ 105 ಅಂಕಗಳೊಂದಿಗೆ ಒಟ್ಟು 34 ಬಹುಮಾನಗಳನ್ನು (16 ಪ್ರಥಮ, 14



ದ್ವಿತೀಯ ಹಾಗೂ 4 ತೃತೀಯ ಬಹುಮಾನಗಳು) ಪಡೆದು ರನ್ನರ್ ಅಪ್ ಸ್ಥಾನ ಪಡೆಯಿತು. ಒಡಿಶಾ ಅಂಚೆ ವಲಯ 38 ಅಂಕಗಳೊಂದಿಗೆ ಒಟ್ಟು 11 ಬಹುಮಾನ ಗೆದ್ದು ತೃತೀಯ ಸ್ಥಾನ ಪಡೆಯಿತು. ಹಲವಾರು ಸ್ಪರ್ಧಿಗಳು ನಾನಾ ವಿಭಾಗಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದರು.

**ಪ್ರಮುಖ ವಿಜೇತರು:** ಕರ್ನಾಟಕದ ಎಸ್.ಚಾರ್ಮಿ (ನಾಲ್ಕು ಕಾರ್ಯಕ್ರಮದಲ್ಲಿ 4 ಪ್ರಶಸ್ತಿ), ಮೂರು ಕಾರ್ಯಕ್ರಮದಲ್ಲಿ ಮೂರು ಪ್ರಶಸ್ತಿಗಳನ್ನು ಅಭಿಮನ್ಯು, ಕೆ.ಆರ್.ಪ್ರಥಮ್, ಡಿ.ಎಂ.ಪುಣ್ಯ, ಶಂಭವಿ ದೇಗಾವಿಮಠ, ಜಿ.ಎಸ್.ಸೃಷ್ಟಿ, ಕೇರಳದ ಎಸ್.ದುರ್ಗಾ ರಾಮ್, ವಿ.ಆರ್.ಶ್ರೀಹರಿ, ತೀರ್ಥ ಪ್ರಕಾಶ್ ಪಡೆದಿದ್ದಾರೆ. ಅಲ್ಲದೇ, ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಲಾಯಿತು. ಪ್ರಶಸ್ತಿ ಪ್ರದಾನ ಮಾಡಿದ ವೆಂಕಟೇಶ್ ಕುಮಾರ್ ಅವರು ಮಾತನಾಡಿ, ಪ್ರತಿಯೊಬ್ಬರ ಜೀವನದಲ್ಲೂ ವೃತ್ತಿ ಮತ್ತು ಪ್ರವೃತ್ತಿ ಬಹಳ ಮುಖ್ಯ. ಇನ್ನೊಬ್ಬರು ಏನು ಮಾಡುತ್ತಾರೆ ಎನ್ನುವುದು ಮುಖ್ಯವಲ್ಲ, ನಾವು ಏನು ಸಾಧನೆ ಮಾಡುತ್ತೇವೆ ಎನ್ನುವುದು ಮುಖ್ಯ.

ಹಿಂದೆ ಅಂಚೆ ಕಚೇರಿಗಳು ತುಂಬಾ ಮುಖ್ಯವಾಗಿದ್ದವು. ಆದರೀಗ ಮೊಬೈಲ್ ಯುಗದಿಂದ ಅಂಚೆ ಕಚೇರಿಗೆ ಹೋಗುವವರ ಸಂಖ್ಯೆ ಕಡಿಮೆಯಾಗಿದೆ. ಅಂಚೆ ಕಚೇರಿಯಲ್ಲಿ ಪ್ರಾಮಾಣಿಕತೆ ಇಂದಿಗೂ ಉಳಿದುಕೊಂಡಿದೆ. ಇಲ್ಲಿ ಕೆಲಸ ಮಾಡುವವ ನೌಕರರು ಧನ್ಯರು. ಮೈಸೂರಿನ ಮಹಾರಾಜರು ಕಲೆ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು.

ಆ ಪರಂಪರೆಯನ್ನು ಇಂದಿಗೂ ಮೈಸೂರಿನಲ್ಲಿ ಉಳಿಸಿಕೊಂಡು ಬರುತ್ತಿರುವುದು ಸಂತಸದ ವಿಷಯ.

# ಮಧುಗಿರಿ ಜಾತ್ರೆಯಲ್ಲಿ ಹಳ್ಳಿಕಾರ್ ಖರೀದಿ ಜೋರು

• **ಉದಯವಾಹಿನಿ, ಮಧುಗಿರಿ**

ತಾಲ್ಲೂಕಿನ ಪ್ರಸಿದ್ಧ ಮಾರಮ್ಮ ಜಾತ್ರೆ ಈ ಬಾರಿ ಜಾನುವಾರು ಸಂಖ್ಯೆಯಲ್ಲಿ ಹೆಚ್ಚಳ ಕಂಡು ರೈತರು ಮತ್ತು ಪ್ರೇಕ್ಷಕರ ಗಮನ ಸೆಳೆದಿದೆ. ಸೀಮಾಂಧ್ರ (ಆಂಧ್ರಪ್ರದೇಶ) ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆ ಮತ್ತು ತಾಲ್ಲೂಕುಗಳಿಂದ ಸಾವಿರಾರು ಸಂಖ್ಯೆಯಲ್ಲಿ ರೈತರು ತಮ್ಮ ರಾಸುಗಳೊಂದಿಗೆ ಜಾತ್ರೆಗೆ ಆಗಮಿಸಿದ್ದು, ವ್ಯಾಪಾರ ಕಸುವು ಪಡೆದುಕೊಂಡಿದೆ.


ನ್ಯಾಯಾಲಯದ ಆವರಣದಿಂದ ರಾಘವೇಂದ್ರ ಕಾಲೇಜುವರೆಗಿನ ರಸ್ತೆ ಎರಡೂ ಬದಿ ರಾಸುಗಳನ್ನು ಕಟ್ಟಲಾಗಿತ್ತು. ವಿಶೇಷವಾಗಿ ಹಳ್ಳಿಕಾರ್ ತಳಿ ಜೋಡೆತ್ತುಗಳು, ನಾಟಿ ಮತ್ತು ಜರ್ಸಿ ತಳಿ ಜೋಡೆತ್ತು, ಹಾಲು ಹಲ್ಲಿನ ಕರುಗಳು ಮತ್ತು ಹಳ್ಳಿಕಾರ್ ಕರುಗಳು ಜಾತ್ರೆ ಪ್ರಮುಖ ಆಕರ್ಷಣೆಯಾಗಿದ್ದವು. ರೈತರು ತಮ್ಮ ರಾಸುಗಳನ್ನು ವಿವಿಧ ಅಲಂಕಾರಗಳೊಂದಿಗೆ ಸಿಂಗರಿಸಿಕೊಂಡು ಕರೆತಂದಿದ್ದು ಜಾತ್ರೆ ರಂಗು ಹೆಚ್ಚಿಸಿತ್ತು. ಬೇಸಾಯದ ಕೆಲಸಗಳಿಗೆ ಹೆಚ್ಚು ಸೂಕ್ತವಾದ ಹಳ್ಳಿಕಾರ್ ತಳಿ ಜೋಡೆತ್ತುಗಳತ್ತಲೇ ರೈತರ ಒಲವು ಹೆಚ್ಚಾಗಿ ಕಂಡು ಬಂದಿತು. ತುಮಕೂರು ಜಿಲ್ಲೆ ಸಿದ್ದಗಂಗಾ,




ಕ್ಯಾಮೇನಹಳ್ಳಿ ಮತ್ತು ಸುಗ್ಗನಹಳ್ಳಿ ಜಾತ್ರೆಗಳಲ್ಲಿ ಈ ಬಾರಿ ನಿರೀಕ್ಷಿತ ಮಟ್ಟದ ವ್ಯಾಪಾರ ನಡೆಯದ ಕಾರಣ ರೈತರು ಮತ್ತು ವ್ಯಾಪಾರಿಗಳು ಮಧುಗಿರಿ ಜಾತ್ರೆಗೆ ಮುಗಿಬಿದ್ದಿದ್ದು ರಾಸುಗಳ ಸಂಖ್ಯೆ ಹೆಚ್ಚಳಕ್ಕೆ ಪ್ರಮುಖ ಕಾರಣ ಎಂದು ತಿಳಿದು ಬಂದಿದೆ. ಹಿಂದೂಪುರ, ಮಡಕಶಿರಾ, ಅನಂತಪುರ, ಬಳ್ಳಾರಿ ಸೇರಿದಂತೆ ರಾಜ್ಯದ ಹಲವು ಭಾಗಗಳಿಂದ ರೈತರು ಖರೀದಿಗಾಗಿ ಆಗಮಿಸಿದ್ದರು.

ಅಂತರಾಳದಿಂದ...
EDITORIAL

# ಅಣೆಕಟ್ಟುಗಳ ಸುರಕ್ಷತೆಗೆ ಆದ್ಯತೆ: ಕೇಂದ್ರ-ರಾಜ್ಯಗಳ ಸಮನ್ವಯ ಅಗತ್ಯ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಣೆಕಟ್ಟುಗಳ ಸುರಕ್ಷತೆಯ ಬಗ್ಗೆ ಈಚೆಗೆ ದನಿ ಎತ್ತಿದ್ದಾರೆ. ಅವರು ವ್ಯಕ್ತಪಡಿಸಿರುವ ಕಳವಳಗಳು ಅಣೆಕಟ್ಟುಗಳಲ್ಲಿ ಬಳಕೆಯಾಗಿರುವ ಇಂಜಿನಿಯರಿಂಗ್ ತಂತ್ರಜ್ಞಾನಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಅದು ರಾಷ್ಟ್ರದ ಭದ್ರತೆ, ಒಕ್ಕೂಟ ವ್ಯವಸ್ಥೆಯಲ್ಲಿನ ಹೊಣೆಗಾರಿಕೆ. ಸಾರ್ವಜನಿಕ ವಿಶ್ವಾಸಕ್ಕೆ ಸಂಬಂಧಿಸಿದ್ದೂ ಹೌದು ಎಂಬುದಾಗಿ ಅವರು ಹೇಳಿದ್ದಾರೆ. ಬೆಂಗಳೂರಿನಲ್ಲಿ ನಡೆದ ಅಣೆಕಟ್ಟುಗಳ ಸುರಕ್ಷತೆಗೆ ಸಂಬಂಧಿಸಿದ ಅಂತರರಾಷ್ಟ್ರೀಯ ಸಮಾವೇಶದಲ್ಲಿ (ಐಸಿಡಿಎಸ್), ಹಳತಾಗುತ್ತಿರುವ ಅಣೆಕಟ್ಟುಗಳನ್ನು ಭಾರತದ ಮೂಲಸೌಕರ್ಯ ವಲಯದ ಅಪಾಯಗಳ ಕುರಿತ ಚರ್ಚೆಯ ಕೇಂದ್ರಭಾಗಕ್ಕೆ ಅವರು ತಂದಿರಿಸಿದ್ದಾರೆ. ಅಣೆಕಟ್ಟುಗಳ ಸಂಖ್ಯೆಯು ಈ ಕಳವಳಕ್ಕೆ ಕಾರಣವನ್ನು ಹೇಳುತ್ತಿದೆ. ವಿಶ್ವಸಂಸ್ಥೆಯ ವರದಿಯೊಂದರ ಪ್ರಕಾರ, ಭಾರತದಲ್ಲಿ 6, 600ಕ್ಕೂ ಹೆಚ್ಚು ಅಣೆಕಟ್ಟುಗಳಿವೆ. ಅಂದರೆ ವಿಶ್ವದಲ್ಲಿ ಅತಿಹೆಚ್ಚಿನ ಸಂಖ್ಯೆಯ ಅಣೆಕಟ್ಟುಗಳನ್ನು ಹೊಂದಿರುವ ದೇಶಗಳ ಪಟ್ಟಿಯಲ್ಲಿ ಭಾರತ ಮೂರನೆಯ ಸ್ಥಾನ ಪಡೆದಿದೆ. ಈ ಪೈಕಿ ಸರಿಸುಮಾರು 1,100 ಅಣೆಕಟ್ಟುಗಳು ಐವತ್ತು ವರ್ಷಗಳಿಗಿಂತ ಹೆಚ್ಚು ಹಳೆಯವು. 220ಕ್ಕಿಂತ ಹೆಚ್ಚು ಅಣೆಕಟ್ಟುಗಳು ಶತಮಾನ ಕಂಡಿವೆ. 2050ರ ಸುಮಾರಿಗೆ ಭಾರತದ ಅಣೆಕಟ್ಟುಗಳ ಪೈಕಿ ಶೇ 80ಕ್ಕಿಂತ ಹೆಚ್ಚಿನವು, ಅವುಗಳ ನಿರೀಕ್ಷಿತ ಆಯುಸ್ಸನ್ನು ಕಳೆದಿರುತ್ತವೆ. ಕರ್ನಾಟಕದಲ್ಲಿಯೇ 231 ಅಣೆಕಟ್ಟುಗಳಿವೆ. ಈ ಪೈಕಿ ಸುಮಾರು ಶೇ 70ರಷ್ಟು ಅಣೆಕಟ್ಟುಗಳು 25 ವರ್ಷಗಳಿಗಿಂತ ಹಳೆಯವು. 40ಕ್ಕಿಂತ ಹೆಚ್ಚು 50 ವರ್ಷಗಳನ್ನು ಕಳೆದಿವೆ. ವಾಣಿ ವಿಲಾಸ ಸಾಗರ (119 ವರ್ಷಗಳು), ಕೃಷ್ಣರಾಜ ಸಾಗರ (95 ವರ್ಷಗಳು) ಮತ್ತು ತುಂಗಭದ್ರಾ ಅಣೆಕಟ್ಟು (73 ವರ್ಷಗಳು) ರಾಜ್ಯದ ಇಂಜಿನಿಯರಿಂಗ್ ಸಾಮರ್ಥ್ಯವನ್ನು ಸಾರುತ್ತಿವೆ, ಈಗ ಎದುರಾಗಬಹುದಾದ ಸಮಸ್ಯೆಗಳನ್ನೂ ಹೇಳುತ್ತಿವೆ.

> **ಮನುಷ್ಯ ಖುದ್ದಾಗಿ ಭೇಟಿ ನೀಡಿ ಸುರಕ್ಷತೆಯ ಬಗ್ಗೆ ಆಗಾಗ ತಪಾಸಣೆ ನಡೆಸುವ ಬದಲು, ಡಿಜಿಟಲ್ ವ್ಯವಸ್ಥೆಯ ಮೂಲಕ ಸುರಕ್ಷತೆಯ ಮೇಲೆ ನಿರಂತರವಾಗಿ ನಿಗಾ ಇರಿಸುವ ಕೆಲಸ ಆಗಬೇಕು**

ಅಣೆಕಟ್ಟುಗಳು ಒಂದಕ್ಕೊಂದು ಸಂಬಂಧ ಇರುವ ನಾಲ್ಕು ಅಪಾಯಗಳನ್ನು ಎದುರಿಸುತ್ತಿವೆ. ಮೊದಲನೆಯದು, ರಾಚನಿಕ ಅಪಾಯ, ಗೇಟುಗಳು ಹಾಗೂ ಇತರ ರಚನೆಗಳು ಹಳೆಯದಾಗಿರುವ ಕಾರಣದಿಂದಾಗಿ ಎದುರಾಗುವ ಅಪಾಯ. ಇವುಗಳಲ್ಲಿ ಹಲವು ರಚನೆಗಳು 50 ವರ್ಷ ಬಾಳಿಕೆ ಬರುವಂತೆ ರೂಪುಗೊಂಡವು. 2024ರಲ್ಲಿ ತುಂಗಭದ್ರಾ ಅಣೆಕಟ್ಟಿನ ಸರಪಳಿಯ ಕೊಂಡಿ ತುಂಡಾಗಿ ಒಂದು ಕ್ರೆಸ್ಟ್ ಗೇಟ್ ಕೊಚ್ಚಿಹೋದಾಗ ಈ ಅಪಾಯವು ಬಹಳ ಸ್ಪಷ್ಟವಾಗಿ ಗೋಚರವಾಗಿದೆ. **ಎರಡನೆಯ ಅಪಾಯ:** ಹೂಳು ತುಂಬಿರುವ ಪರಿಣಾಮವಾಗಿ ಹಲವಾರು ಹಳೆಯ ಅಣೆಕಟ್ಟುಗಳಲ್ಲಿನ ನೀರಿನ ಸಂಗ್ರಹ ಸಾಮರ್ಥ್ಯವು ಗಣನೀಯವಾಗಿ ಕಡಿಮೆ ಆಗಿರುವುದು. ಇದರಿಂದಾಗಿ ಪ್ರವಾಹ ಹಾಗೂ ಅನಾವೃಷ್ಟಿಯನ್ನು ನಿರ್ವಹಿಸುವಲ್ಲಿ ಈ ಅಣೆಕಟ್ಟುಗಳ ಸಾಮರ್ಥ್ಯ ತಗ್ಗಿದೆ. **ಮೂರನೆಯ ಅಪಾಯ,** ಹವಾಮಾನದ ವೈಪರೀತ್ಯಕ್ಕೆ ಸಂಬಂಧಿಸಿದೆ. ಈ ಅಣೆಕಟ್ಟುಗಳನ್ನು ಯಾವ ಪ್ರಮಾಣದ ಮಳೆಯ ಲೆಕ್ಕಾಚಾರದೊಂದಿಗೆ ಹಿಂದೆ ನಿರ್ಮಿಸಲಾಗಿತ್ತೋ ಆ ಪ್ರಮಾಣವನ್ನು ಈಗಿನ ಅತಿವೃಷ್ಟಿಯು ಮತ್ತೆ ಮತ್ತೆ ಮೀರುತ್ತಿದೆ. **ನಾಲ್ಕನೆಯ ಅಪಾಯವು** ಈಗಿನ ಕಾಲದ ಸೈಬರ್ ಭದ್ರತೆಗೆ ಸಂಬಂಧಿಸಿದೆ. ಡಿಜಿಟಲ್ ವ್ಯವಸ್ಥೆಯ ಮೂಲಕ ನಿಯಂತ್ರಿಸುವ ಉಪಕರಣಗಳನ್ನು, ಸ್ವಯಂಚಾಲಿತ ಗೇಟುಗಳನ್ನು ಅಣೆಕಟ್ಟುಗಳಿಗೆ ಅಳವಡಿಸಿದಂತೆಲ್ಲ ಅವು ತಾಂತ್ರಿಕವಾಗಿ ನಡೆಸಬಹುದಾದ ವಿಧ್ವಂಸಕ ಕೃತ್ಯಗಳಿಗೂ ಗುರಿಯಾಗುವ ಸಾಧ್ಯತೆ ಇರುತ್ತದೆ. ಸಹಕಾರಿ ಒಕ್ಕೂಟ ವ್ಯವಸ್ಥೆಗೆ ಸಿದ್ದರಾಮಯ್ಯ ಅವರು ಒತ್ತು ನೀಡಿದ್ದುದು ಎದ್ದುಕಾಣುವಂತೆ ಇದೆ. ಅವರು ನದಿ ಪಾತ್ರಗಳ ರಕ್ಷಣೆಗೆ ಎಲ್ಲಾ ರಾಜ್ಯಗಳೂ ಒಟ್ಟಾಗಿ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳಲು ಕರೆ ನೀಡಿದ್ದಾರೆ. ಮನುಷ್ಯ ಖುದ್ದಾಗಿ ಭೇಟಿ ನೀಡಿ ಸುರಕ್ಷತೆಯ ಬಗ್ಗೆ ಆಗಾಗ ತಪಾಸಣೆ ನಡೆಸುವ ಬದಲು, ಡಿಜಿಟಲ್ ವ್ಯವಸ್ಥೆಯ ಮೂಲಕ ಸುರಕ್ಷತೆಯ ಮೇಲೆ ನಿರಂತರವಾಗಿ ನಿಗಾ ಇರಿಸುವ ಕೆಲಸ ಆಗಬೇಕು ಎಂದು ಹೇಳಿದ್ದಾರೆ.ವ್ಯವಸ್ಥಿತ ನಿಗಾ, ಕಾಲಕಾಲಕ್ಕೆ ಅಣೆಕಟ್ಟುಗಳ ಆಧುನೀಕರಣ, ಹವಾಮಾನದ ವೈಪರೀತ್ಯಗಳಿಗೆ ಒಗ್ಗಿಕೊಳ್ಳುವಂತಹ ಬಗೆಯಲ್ಲಿ ಮರುವಿನ್ಯಾಸ, ಅಣೆಕಟ್ಟೆಯ ಕೆಳಗಿನ ಪ್ರದೇಶಗಳಲ್ಲಿ ವಾಸ ಮಾಡುವ ಸಮುದಾಯಗಳ ಸುರಕ್ಷತೆಯ ದೃಷ್ಟಿಯಿಂದ ವಿಶ್ವಾಸಾರ್ಹವಾದ ತುರ್ತು ಸುರಕ್ಷತಾ ಕ್ರಮಗಳು ಯಾವುದೇ ರಾಜಿ ಇಲ್ಲದೆ ಆಗಬೇಕಾದ ಕೆಲಸಗಳು. ರಾಷ್ಟ್ರದಾದ್ಯಂತ ಅಣೆಕಟ್ಟುಗಳ ತಪಾಸಣೆ ಮೂಲಕ ಈ ಕೆಲಸವು ಶುರು ಆಗಬೇಕು. ದುರಂತ ಸಂಭವಿಸುವವರೆಗೆ ಕಾಯುತ್ತ ಕೂರಬಾರದು. ಈ ಕೆಲಸ ಆಗಬೇಕು ಎಂದಾದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪಾಲುದಾರ ಆಗಿ ಮುಂದಡಿ ಇರಿಸಬೇಕು. ಸಹಕಾರ ಒಕ್ಕೂಟ ವ್ಯವಸ್ಥೆಯ ಆಶಯದಿಂದ ಕೆಲಸ ಮಾಡಬೇಕು. ಅಣೆಕಟ್ಟುಗಳು ಆಧುನಿಕ ಭಾರತದ ಮಂದಿರಗಳು ಎಂದು ಒಂದು ಕಾಲದಲ್ಲಿ ಹೇಳಲಾಗಿತ್ತು. ಅವುಗಳಿಗೆ ವಯಸ್ಸಾದಂತೆಲ್ಲ, ಅವುಗಳ ನಿರ್ವಹಣೆಗೆ ಗಮನ ನೀಡುವುದು ಜನರ ಮತ್ತು ಜೀವನೋಪಾಯದ ಸುರಕ್ಷತೆಯ ದೃಷ್ಟಿಯಿಂದ ಮಹತ್ವದ್ದಾಗುತ್ತದೆ.

# ಅಧಃಪತನದ ಹಾದಿ ಹಿಡಿದ ಕಾಂಗ್ರೆಸ್!

## ಸನಾತನ ರಾಷ್ಟ್ರ ಶಂಖನಾದ ಮಹೋತ್ಸವದಲ್ಲಿ ವಂದೇ ಮಾತರಂ ಗೀತೆಯ ಪ್ರದರ್ಶನ

• ಉದಯವಾಹಿನಿ, ದೆಹಲಿ

ಸನಾತನ ಸಂಸ್ಥೆಯು ತನ್ನ ರಜತ ಮಹೋತ್ಸವದ ಅಂಗವಾಗಿ ಡಿಸೆಂಬರ್ 13 ರಿಂದ 15 ರವರೆಗೆ ದೆಹಲಿಯಲ್ಲಿ 'ಸನಾತನ ರಾಷ್ಟ್ರ ಶಂಖನಾದ ಮಹೋತ್ಸವ'ವನ್ನು ಆಯೋಜಿಸಿತ್ತು. ಈ ಸಂದರ್ಭದಲ್ಲಿ ದೇಶದಾದ್ಯಂತ ವಿವಿಧ ಸಂಸ್ಥೆ ಮತ್ತು ಸಂಘಟನೆಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

ದೇಶದ ವಿವಿಧ ಭಾಗಗಳಿಂದ ಸಾವಿರಾರು ಹಿಂದುತ್ವನಿಷ್ಠರು ಆಗಮಿಸಲಿರುವ ಕಾರಣ, ಅವರ ಮುಂದೆ ಗೌರವಾನ್ವಿತ ಪ್ರಧಾನಿ ಮೋದಿಯವರ ಪರಿಕಲ್ಪನೆಯಂತೆ 'ವಂದೇ ಮಾತರಂ' ಗೀತೆಯ ವೈಭವೀಕರಣವಾಗಬೇಕು ಎಂಬ ದೃಷ್ಟಿಯಿಂದ ಸನಾತನ ಸಂಸ್ಥೆಯು ಭಾರತ ಮಂಟಪದ ಪಕ್ಕದ ಹಾಲ್ ನಂ. 12 ರಲ್ಲಿ ಮೂರು ದಿನಗಳ ಕಾಲ ವಂದೇ ಮಾತರಂ ಗೀತೆಯ ಭವ್ಯ ಪ್ರದರ್ಶನವನ್ನು ಹಮ್ಮಿಕೊಂಡಿತ್ತು.

> **ವಂದೇ ಮಾತರಂಗೆ ನೀಡಿದ ಸರ್ವೋಚ್ಚ ಗೌರವಕ್ಕೆ ವಿರೋಧ**




ಅಲ್ಲದೆ, ಮುಖ್ಯ ಕಾರ್ಯಕ್ರಮದಲ್ಲಿ ವಂದೇ ಮಾತರಂ ಸಮೂಹ ಗಾಯನವನ್ನು ಆಯೋಜಿಸಲಾಗಿತ್ತು. ಇದರೊಂದಿಗೆ ಈ ಪ್ರದರ್ಶನದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಐತಿಹಾಸಿಕ ಶಸ್ತ್ರಾಸ್ತ್ರಗಳನ್ನೂ ಪ್ರದರ್ಶಿಸಲಾಗಿತ್ತು.

ಈ ಪ್ರದರ್ಶನದ ಉದ್ಘಾಟನೆಯನ್ನು ಕೇಂದ್ರ ಸಚಿವರಿಂದ ಮಾಡಿಸಲು ನಿರ್ಧರಿಸಲಾಗಿತ್ತು ಮತ್ತು ಅದಕ್ಕಾಗಿ ನಿಯಮಿತ ಸರ್ಕಾರಿ ಪದ್ಧತಿಯಂತೆ ನಾವು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದೆವು.

ಅದರಂತೆ ಎಲ್ಲಾ ಆಡಳಿತಾತ್ಮಕ ಅನುಮತಿಗಳನ್ನು ಪಡೆದು ಸರ್ಕಾರವು ಅದಕ್ಕೆ ಮನ್ನಣೆ ನೀಡಿತು. ಉಳಿದ ಕಾರ್ಯಕ್ರಮವು ಸನಾತನ ಸಂಸ್ಥೆಯ ರಜತ ಮಹೋತ್ಸವದ ಕಾರ್ಯಕ್ರಮವಾಗಿತ್ತು ಮತ್ತು ಅದರ ಹೆಸರು 'ಸನಾತನ ರಾಷ್ಟ್ರ ಶಂಖನಾದ ಮಹೋತ್ಸವ'ಎಂದಾಗಿತ್ತು. ಆದರೆ, ಕಾಂಗ್ರೆಸ್ ಇದನ್ನು 'ಹಿಂದೂ ರಾಷ್ಟ್ರದ ಮಹೋತ್ಸವ'ಎಂದು ಸುಳ್ಳು ಪ್ರಚಾರ ಮಾಡುತ್ತಿದೆ ಎಂದು ಸನಾತನ ಸಂಸ್ಥೆಯ ವಕ್ತಾರರಾದ ಶ್ರೀ. ಅಭಯ ವರ್ತಕ್ ಅವರು ಉತ್ತರಿಸಿದ್ದಾರೆ. ಕಾಂಗ್ರೆಸ್ ಮಾಡಿದ ಸಿಖ್ ನರಮೇಧವನ್ನು ಜನರು ಇಂದಿಗೂ ಮರೆತಿಲ್ಲ.

ಹಾಗೆಯೇ ಬಾಟ್ಲಾ ಹೌಸ್ ಭಯೋತ್ಪಾದಕರಿಗಾಗಿ ಕಣ್ಣೀರು ಸುರಿಸುವುದು, ಮುಂಬೈನ 26/11 ಭಯೋತ್ಪಾದಕ ದಾಳಿಯಲ್ಲಿ ಕಸಬ್ ಸೇರಿದಂತೆ ಪಾಕಿಸ್ತಾನಿ ಭಯೋತ್ಪಾದಕರು ಭಾಗಿಯಾಗಿರುವ ಪುರಾವೆಗಳಿದ್ದರೂ, ಕಾಂಗ್ರೆಸ್ ನಾಯಕರು '26/11 ದಾಳಿಯು ಆರ್.ಎಸ್.ಎಸ್. ಸಂಚು' ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ದೂಷಿಸುವ ಪುಸ್ತಕದ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸುತ್ತಾರೆ.

ಕಾಂಗ್ರೆಸ್‌ನ ಅಂದಿನ ಗೃಹ ಸಚಿವ ಸುಶೀಲಕುಮಾರ್ ಶಿಂಧೆ ಅವರು ಈಗ ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ ಏನೆಂದರೆ, 'ನಾನು ಹಿಂದೂ ಭಯೋತ್ಪಾದನೆ ಎಂಬ ಪದವನ್ನು ಬಳಸಬಾರದಿತ್ತು, ಆದರೆ ಪಕ್ಷವು ಹೇಳಿದ್ದರಿಂದ ಬಳಸಿದೆ'.ಈ ಹಿಂದೂಗಳನ್ನು ಭಯೋತ್ಪಾದಕರೆಂದು ಬಿಂಬಿಸುವ ಸಿದ್ಧಾಂತವನ್ನು ಅವರಿಗೆ ಯಾರು ಹೇಳಿಕೊಟ್ಟಿದ್ದರು ಎಂಬುದನ್ನು ಕಾಂಗ್ರೆಸ್ ಪಕ್ಷ ಏಕೆ ಬಹಿರಂಗಪಡಿಸಬಾರದು ಇದೇ ಸಿದ್ಧಾಂತದ ಆಧಾರದ ಮೇಲೆ ಸನಾತನ ಸಂಸ್ಥೆಯನ್ನೂ ಸುಳ್ಳು ಪ್ರಕರಣಗಳಲ್ಲಿ ಸಿಲುಕಿಸಲಾಗಿತ್ತು. ನಮಗೆ ನ್ಯಾಯಾಂಗದ ಮೇಲೆ ನಂಬಿಕೆಯಿದೆ; ಆದರೆ ಯಾವುದೇ ಪ್ರಕರಣದಲ್ಲಿ ನ್ಯಾಯಾಲಯವು ಸನಾತನ ಸಂಸ್ಥೆಯನ್ನು ದೋಷಿ ಎಂದು ಘೋಷಿಸದಿದ್ದರೂ, ನಮ್ಮನ್ನು ಭಯೋತ್ಪಾದಕರು ಎಂದು ಕರೆಯುವ ಕಾಂಗ್ರೆಸ್ ನಾಯಕರು ಮತ್ತು ಸಂಬಂಧಿತ ಪೋರ್ಟಲ್‌ಗಳ ವಿರುದ್ಧ ನಾವು ಮಾನಹಾನಿ ಮೊಕದ್ದಮೆ ಹೂಡಲಿದ್ದೇವೆ ಎಂದು ಶ್ರೀ. ವರ್ತಕ್ ಅವರು ಹೇಳಿದ್ದಾರೆ.

### ಮುಸ್ಲಿಂ ಅಂದರೆ ಕಾಂಗ್ರೆಸ್

**ಈ ಕಾರ್ಯಕ್ರಮದಲ್ಲಿ ಯಾವುದೇ ಭಾರತೀಯ ಸಂವಿಧಾನ ವಿರೋಧಿ ಭಾಷಣ ನಡೆದಿಲ್ಲ. ಎಲ್ಲಾ ಭಾಷಣಕಾರರು ಹಿಂದೂಗಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಬಗ್ಗೆ ಧ್ವನಿ ಎತ್ತಿದರು ಮತ್ತು ಅದಕ್ಕೆ ಪರಿಹಾರಗಳನ್ನು ಸೂಚಿಸಿದರು. ವಾಸ್ತವವಾಗಿ, ತೆಲಂಗಾಣದ ಕಾಂಗ್ರೆಸ್ ಮುಖ್ಯಮಂತ್ರಿಗಳು ಸಾಂವಿಧಾನಿಕ ಹುದ್ದೆಯಲ್ಲಿದ್ದೂ 'ಕಾಂಗ್ರೆಸ್ ಅಂದರೆ ಮುಸ್ಲಿಂ ಮತ್ತು ಮುಸ್ಲಿಂ ಅಂದರೆ ಕಾಂಗ್ರೆಸ್' ಎಂಬ ಸಂವಿಧಾನ ವಿರೋಧಿ ಘೋಷಣೆ ಮಾಡುತ್ತಾರೆ. ಕಾಂಗ್ರೆಸ್‌ನ ಅಂದಿನ ಪ್ರಧಾನ ಮಂತ್ರಿಗಳು 'ದೇಶದ ಸಂಪನ್ಮೂಲಗಳ ಮೇಲೆ ಮೊದಲ ಹಕ್ಕು ಮುಸ್ಲಿಮರದ್ದು'ಎಂದು ಹೇಳಿಕೆ ನೀಡುತ್ತಾರೆ. ಸುಪ್ರೀಂ ಕೋರ್ಟ್ ಹಲವು ಬಾರಿ ನಿರಾಕರಿಸಿದ್ದರೂ ಧರ್ಮದ ಆಧಾರದ ಮೇಲೆ ಮುಸ್ಲಿಂ ಸಮುದಾಯಕ್ಕೆ ಮೀಸಲಾತಿ ಘೋಷಿಸುತ್ತಾರೆ. ಕೇರಳದಲ್ಲಿ ಕಾಂಗ್ರೆಸ್ ನಾಯಕರು ಬೀಫ್ ಬ್ಯಾನ್ (ಗೋಮಾಂಸ ನಿಷೇಧ) ವಿರೋಧಿಸಲು ರಸ್ತೆಯಲ್ಲಿ ಗೋಹತ್ಯೆ ಮಾಡುತ್ತಾರೆ; ಇವೆಲ್ಲವೂ ಸಂವಿಧಾನ ವಿರೋಧಿಯಲ್ಲವೇ ಆದ್ದರಿಂದ ಕಾಂಗ್ರೆಸ್ ಮೊದಲು ತನ್ನ ಪಾಪಗಳನ್ನು ನೋಡಿಕೊಳ್ಳಲಿ ಎಂದು ಶ್ರೀ ವರ್ತಕ್ ಕಿಡಿಕಾರಿದರು.**

# ಸಕ್ಕರೆ ಬೇಡ, ಬೆಲ್ಲವೂ ಬೇಡ! ಹೆಲ್ದೀ ಶುಗರ್ ಫ್ರೀ ಗುಲಾಬ್ ಜಾಮೂನ್



**ಸಕ್ಕರೆ ಬೇಡ, ಬೆಲ್ಲವೂ ಬೇಡ! ಅತೀ ಆರೋಗ್ಯಕರ ಸಾಫ್ಟ್ ಗುಲಾಬ್ ಜಾಮೂನ್ ಮಾಡುವ ರಹಸ್ಯ ಇಲ್ಲಿದೆ. ಹೌದು, ನಮ್ಮಲ್ಲಿ ಅತಿ ಜನಪ್ರಿಯ ಸಿಹಿ ತಿಂಡಿಗಳಲ್ಲಿ ಗುಲಾಬ್ ಜಾಮೂನ್‌ಗೆ ಮೊದಲ ಸ್ಥಾನ. ಮದುವೆ, ಹಬ್ಬ ಅಥವಾ ಯಾವುದೇ ವಿಶೇಷ ಸಂದರ್ಭವಿರಲಿ, ಇದರ ರುಚಿ ಹಬ್ಬದ ಸಂಭ್ರಮವನ್ನು ಇಮ್ಮಡಿಗೊಳಿಸುತ್ತದೆ. ಆದರೆ, ತಮ್ಮ ಆರೋಗ್ಯದ ಬಗ್ಗೆ ಕಾಳಜಿ ಹೊಂದಿರುವವರು ಮತ್ತು ಡಯಟ್ ಮಾಡುವವರು, ಇದರಲ್ಲಿರುವ ಸಕ್ಕರೆಯ ಪಾಕದ ಕಾರಣದಿಂದ ಇದನ್ನು ತಿನ್ನಲು ಹಿಂಜರಿಯುತ್ತಾರೆ. ಅಂತಹವರಿಗಾಗಿಯೇ, ಸಾಂಪ್ರದಾಯಿಕ ರುಚಿಯನ್ನು ಉಳಿಸಿಕೊಂಡು, ಸಕ್ಕರೆ ಬಳಸದೆಯೇ ತಯಾರಿಸುವ ಹೆಲ್ದೀ ಗುಲಾಬ್ ಜಾಮೂನ್ ರೆಸಿಪಿ ಇಲ್ಲಿದೆ.**

ಭಾರತೀಯ ಹಬ್ಬಗಳ ಆಚರಣೆ ಸಿಹಿ ತಿಂಡಿಗಳಿಲ್ಲದೆ ಅಪೂರ್ಣ. ಅದರಲ್ಲೂ ಬಿಸಿಬಿಸಿಯಾದ, ಮೃದುವಾದ ಗುಲಾಬ್ ಜಾಮೂನ್ ಎಂದರೆ ಯಾರಿಗೆ ತಾನೇ ಇಷ್ಟವಿಲ್ಲ ಆದರೆ, ಸಕ್ಕರೆ ಅಂಶ ಹೆಚ್ಚಿರುತ್ತದೆ ಎಂಬ ಆತಂಕ ಮಧುಮೇಹಿಗಳಿಗೆ ಅಥವಾ ತೂಕ ಇಳಿಸುವವರಿಗೆ ಇಷ್ಟವಿದ್ದರೂ ಇದರಿಂದ ದೂರ ಉಳಿಯುವಂತೆ ಮಾಡುತ್ತದೆ. ಆರೋಗ್ಯದ ದೃಷ್ಟಿಯಿಂದ ಮತ್ತು ಹಬ್ಬದ ರುಚಿಯನ್ನು ಉಳಿಸಿಕೊಳ್ಳಲು ಸಕ್ಕರೆ ರಹಿತ ಅಥವಾ ಶುಗರ್ ಫ್ರೀ ಗುಲಾಬ್ ಜಾಮೂನ್ ನಿಜಕ್ಕೂ ಅದ್ಭುತ ಆಯ್ಕೆ. ಗುಲಾಬ್ ಜಾಮೂನ್ ತಯಾರಿಸಲು ಬೇಕಾಗುವ ಪದಾರ್ಥಗಳು ಮತ್ತು ಸರಳ ವಿಧಾನ ಇಲ್ಲಿದೆ.

**ಗುಲಾಬ್ ಜಾಮೂನ್‌ಗೆ ಬೇಕಾಗುವ ಪದಾರ್ಥಗಳು**

**● ಜಾಮೂನ್ ಉಂಡೆಗೆ ● ಖೋವಾ (ಸಕ್ಕರೆ ರಹಿತ ಮಾವಾ) ● ತುರಿದ ಪನೀರ್ ● ಮೈದಾ ● ಬೇಕಿಂಗ್ ಸೋಡಾ ● ತುಪ್ಪ ಅಥವಾ ಎಣ್ಣೆ ಶುಗರ್ ಫ್ರೀ ಪಾಕ ● ನೀರು ● ಶುಗರ್ ಫ್ರೀ ಪೌಡರ್ (ಸ್ಟೀಡಿಯಾ ಅಥವಾ ಇತರ ನೈಸರ್ಗಿಕ ಸಿಹಿಕಾರಕ ಬಳಸಬಹುದು) ● ಏಲಕ್ಕಿ (ಪುಡಿ ಮಾಡಿ) ● ಕೇಸರಿ ದಳಗಳು**

**ಜಾಮೂನ್ ತಯಾರಿಸುವ ವಿಧಾನ** - ಒಂದು ದೊಡ್ಡ ಪಾತ್ರೆಯಲ್ಲಿ ಖೋವಾ, ತುರಿದ ಪನೀರ್, ಮೈದಾ ಮತ್ತು ಬೇಕಿಂಗ್ ಸೋಡಾವನ್ನು ಸೇರಿಸಿ. ಈ ಮಿಶ್ರಣವನ್ನು ಚೆನ್ನಾಗಿ ಬೆರೆಸಿ, ಹದವಾದ ಮತ್ತು ಮೃದುವಾದ ಹಿಟ್ಟನ್ನು ತಯಾರಿಸಿ. ಹಿಟ್ಟು ಹೆಚ್ಚು ಗಟ್ಟಿಯೆನಿಸಿದರೆ, ನೀವು ಸ್ವಲ್ಪ ಹಾಲನ್ನು ಬಳಸಬಹುದು. ಆದರೆ ಹಿಟ್ಟು ಅತಿಯಾಗಿ ಮೆತ್ತಗಾಗದಂತೆ.

**ಎಚ್ಚರ ವಹಿಸಿ**

ಸಿದ್ಧಪಡಿಸಿದ ಹಿಟ್ಟಿನಿಂದ ಸಣ್ಣ ಸಣ್ಣ ಉಂಡೆಗಳನ್ನು ತಯಾರಿಸಿಕೊಳ್ಳಿ. ಉಂಡೆಗಳ ಮೇಲೆ ಯಾವುದೇ ಬಿರುಕುಗಳು ಇಲ್ಲದಂತೆ ನಯವಾಗಿರಲಿ. ಬಿರುಕುಗಳಿದ್ದರೆ, ಎಣ್ಣೆಯಲ್ಲಿ ಕರಿಯುವಾಗ ಜಾಮೂನ್ ಒಡೆಯುವ ಸಾಧ್ಯತೆ ಇರುತ್ತದೆ.

- ಈಗ, ಕಡಾಯಿಯಲ್ಲಿ ತುಪ್ಪ ಅಥವಾ ಎಣ್ಣೆಯನ್ನು ಕಡಿಮೆ ಉರಿಯಲ್ಲಿ ಬಿಸಿ ಮಾಡಿ.




ಎಣ್ಣೆ ಹದವಾಗಿ ಬಿಸಿಯಾದ ನಂತರ ತಯಾರಿಸಿದ ಉಂಡೆಗಳನ್ನು ನಿಧಾನವಾಗಿ ಎಣ್ಣೆಗೆ ಬಿಡಿ. ಉರಿಯನ್ನು ಮಂದವಾಗಿಯೇ ಇರಿಸಿ, ಜಾಮೂನ್‌ಗಳು ಹೊಂಬಣ್ಣಕ್ಕೆ ತಿರುಗುವವರೆಗೆ ನಿಧಾನವಾಗಿ ಕರಿಯಿರಿ. ಜಾಮೂನ್‌ಗಳು ಒಳಗಿನವರೆಗೂ ಚೆನ್ನಾಗಿ ಬೆಂದಿರುವುದು ಮುಖ್ಯ.

- ಒಂದು ಪಾತ್ರೆಯಲ್ಲಿ 2 ಕಪ್ ನೀರನ್ನು ಹಾಕಿ ಕುದಿಯಲು ಬಿಡಿ. ಇದಕ್ಕೆ ಏಲಕ್ಕಿ ಪುಡಿ ಮತ್ತು ಕೇಸರಿ ದಳಗಳನ್ನು ಸೇರಿಸಿ. ನೀರು ಚೆನ್ನಾಗಿ ಕುದ್ದ ನಂತರ ಗ್ಯಾಸ್ ಆಫ್ ಮಾಡಿ.
- ಈಗ ನಿಮ್ಮ ರುಚಿಗೆ ತಕ್ಕಷ್ಟು ಶುಗರ್ ಫ್ರೀ ಪೌಡರ್ ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿ. (ಗಮನಿಸಿ.. ಶುಗರ್ ಫ್ರೀ ಸಿಹಿಕಾರಕಗಳನ್ನು ನೀರು ಕುದಿಯುವಾಗ ಹಾಕುವ ಬದಲು, ಗ್ಯಾಸ್ ಆಫ್ ಮಾಡಿದ ಮೇಲೆ ಸೇರಿಸುವುದು ಉತ್ತಮ). - ಕರಿದು ತೆಗೆದ ಬಿಸಿಬಿಸಿಯಾದ ಜಾಮೂನ್‌ಗಳನ್ನು ಉಗುರು ಬೆಚ್ಚಗಿನ ಶುಗರ್ ಫ್ರೀ ಪಾಕಕ್ಕೆ ಹಾಕಿ. ಪಾತ್ರೆಯನ್ನು ಮುಚ್ಚಿ 1 ರಿಂದ 2 ಗಂಟೆಗಳ ಕಾಲ ಹಾಗೆಯೇ ಬಿಡಿ. ಜಾಮೂನ್ ಸಂಪೂರ್ಣವಾಗಿ ಪಾಕವನ್ನು ಹೀರಿಕೊಂಡು ಮೃದುವಾಗಿ, ರುಚಿಕರವಾಗುತ್ತವೆ.

ಈ ಶುಗರ್ ಫ್ರೀ ಗುಲಾಬ್ ಜಾಮೂನ್ ಮಧುಮೇಹಿಗಳಿಗೆ ಅತ್ಯುತ್ತಮ ಆಯ್ಕೆ. ಏಕೆಂದರೆ, ಸಕ್ಕರೆ ಬದಲಿಗೆ ನೈಸರ್ಗಿಕ ಸಿಹಿಕಾರಕಗಳನ್ನು ಬಳಸುವುದರಿಂದ ರಕ್ತದಲ್ಲಿನ ಸಕ್ಕರೆ ಮಟ್ಟ ಏರುವುದಿಲ್ಲ. ಇದರಲ್ಲಿ ಖೋವಾ ಮತ್ತು ಪನೀರ್ ಇರುವುದರಿಂದ ಪ್ರೋಟೀನ್ ಹಾಗೂ ಕ್ಯಾಲ್ಸಿಯಂ ಹೇರಳವಾಗಿ ದೊರೆಯುತ್ತದೆ. ಅಲ್ಲದೆ, ಸಕ್ಕರೆ ಪಾಕ ಇಲ್ಲದ ಕಾರಣ ಕ್ಯಾಲೋರಿಗಳ ಪ್ರಮಾಣವೂ ಗಣನೀಯವಾಗಿ ಕಡಿಮೆಯಾಗಿರುತ್ತದೆ.


ಜಾಮೂನ್ ಸವಿಯುವ ಮೊದಲು ಸ್ವಲ್ಪ ಬಿಸಿ ಮಾಡಿ ಕೊಟ್ಟರೆ ಅದರ ರುಚಿ ಮತ್ತಷ್ಟು ಹೆಚ್ಚುತ್ತದೆ. ಈ ಬಾರಿ ಹಬ್ಬವನ್ನು ಆರೋಗ್ಯದ ಚಿಂತೆ ಇಲ್ಲದೆ, ಸಂಪೂರ್ಣವಾಗಿ ಎಂಜಾಯ್ ಮಾಡಿ.

## ದಿನಕ್ಕೊಂದು ಮುಕ್ತಕ: 98



ಸಾಮಾಜಿಕ ಕಳಕಳಿ


ಹೆಚ್.ಎಸ್. ಪ್ರತಿಮಾ
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ ಶಿಕ್ಷಕಿ, ಹಾಸನ



*ಮಗುವಾಗಿ ಜನನಿಸಿರಲು ಸಂತಸವು ಬಾಳಿನಲಿ*
*ನಗುತಿಹೆವು ಮನೆಯಲ್ಲಿ ಜೊತೆಯಲ್ಲಿಯೆ*
*ಮುಗಿಲಲ್ಲಿ ಸಾಗುವುದು ನೆನೆಯುತಿರೆ ಸುಂದರವು*
*ನಗಿಸುತಲಿ ಪ್ರೀತಿಯಲಿ ಲಕ್ಷ್ಮಿ ದೇವಿ.....*

**ಭಾವಾರ್ಥ:** ಪ್ರತಿಯೊಂದು ಕುಟುಂಬದಲ್ಲೂ ಮಕ್ಕಳೆಂದರೆ ಇಷ್ಟವೇ. ಅಂತಹ ಮಕ್ಕಳುಗಳು ಮನೆಯಲ್ಲಿದ್ದಾಗ ಸಂತೋಷವನ್ನು ಬಾಳಿನಲ್ಲಿ ಪ್ರತಿಯೊಬ್ಬರು ಕಾಣುತ್ತಾರೆ. ಆ ಮಗುವಿನ ತೊದಲ ಮಾತುಗಳನ್ನು ಕೇಳುತ್ತಾ ನಗುತಲಿ ಜೀವನವನ್ನು ಸಾಗಿಸುತ್ತಾರೆ. ಮುಗಿಲಿನಲ್ಲಿ ಸಾಗಿರುವ ರೀತಿಯಲ್ಲಿ ನೆನೆಸಿಕೊಂಡು ಸುಂದರವಾದ ವಾತಾವರಣ ಕಾಣುತ್ತಾ ನಗು ನಗುತ್ತಾ ಕಾಲವನ್ನು ಕಳೆಯುತ್ತಾರೆ. ಪ್ರತಿಯೊಬ್ಬರೂ ಅಷ್ಟೇ ಮುಗ್ಧವಾದ ಮಕ್ಕಳಿಗೆ ಮೋಸ ಮಾಡಲು ಪ್ರಯತ್ನಿಸುವುದಿಲ್ಲ. ಮಕ್ಕಳಿಗೆ ಇಷ್ಟಪಡುತ್ತಾ ಅದಕ್ಕೆ ಬೇಕಾದ, ಬೇಡವಾದ, ಎಲ್ಲವನ್ನು ಕೇಳುತ್ತಾ ಸಾಗುತ್ತಾರೆ.

# ರಾಮಾಯಣ



ಶರತ್ಕಾಲದ ವರ್ಣನೆ; ಶ್ರೀರಾಮನು ಸುಗ್ರೀವನ ಮೇಲೆ ಕೋಪಿಸಿದ್ದು

• ಹಿಂದಿನ ಸಂಚಿಕೆಯಿಂದ

## 120 ನೆಯ ಅಧ್ಯಾಯ

ಚಕ್ರವಾಕಪಕ್ಷಿಯು ವನಮಧ್ಯವಲ್ಲಿ ತನ್ನ ಪತಿಯೊಡನೆ ವಿನೋದದಿಂದ ಸಂಚರಿಸುವಂತೆ ನನ್ನ ಪ್ರಾಣಕಾಂಶೆಯಾದ ಸೀತಾದೇವಿಯು ಈ ವಿಷಮವಾದ ದಂಡಕಾರಣ್ಯದಲ್ಲಿ ನನ್ನನ್ನು ಎಡೆಬಿಡದೆ ಹಿಂಬಾಲಿಸುತ್ತಿದ್ದಳು. ರಾಜ್ಯಭ್ರಷ್ಟನಾಗಿ ದಿಕ್ಕಿಲ್ಲದೆ ಅಲೆಯುತ್ತಿರುವುದನ್ನೂ ರಾವಣನಿಂದ ಭಂಗಹೊಂದಿರುವುದನ್ನೂ, ಮನೆಮಠಗಳನ್ನೂ ಹೆಂಡತಿ ಯನ್ನೂ ಕಳೆದುಕೊಂಡು ಇಷ್ಟು ದೂರದೇಶಕ್ಕೆ ಹೊರಟುಬಂದಿರುವುದನ್ನೂ ನೋಡಿ ದುರಾತ್ಮನಾದ ಸುಗ್ರೀವನು ನನ್ನನ್ನು ತುಚ್ಛಭಾವದಿಂದ ಕಾಣುತ್ತಿರುವಂತಿದೆ.


ನಾನು ದೈನ್ಯದಿಂದ ಆತನಲ್ಲಿಗೆ ಹೋಗಿ ನೀನೇ ಗತಿ' ಎಂದು ಮರೆಹೊಕ್ಕುದನ್ನು ಕಂಡು ಅವನು ನನ್ನಲ್ಲಿ ಅಲಕ್ಷ್ಯ ತೋರಿದನು. ಲಕ್ಷ್ಮಣ, ಕಿಷ್ಕಿಂಧಾಪಟ್ಟಣಕ್ಕೆ ಹೋಗು. ಸುಗ್ರೀವನು ತನ್ನ ಮೂರ್ಹತನದಿಂದ ಸ್ತ್ರೀಲೋಲ ನಾಗಿರುವನು. ಉಪಕಾರವನ್ನು ಮಾಡಿದವರಿಗೆ ಯಾವನು ಪ್ರತ್ಯುಪಕಾರವನ್ನು ಮಾಡುವುದಾಗಿ ಮಾತು ಕೊಟ್ಟು ಆ ಮಾತಿಗೆ ಶಪ್ಪುವನೋ ಆತನು ಪುರುಷಾಧಮನು. ಲೋಕಸಮ್ಮತವಾದ ಕಾರ್ಯವನ್ನಾದರೂ ಲೋಕವಿರುದ್ಧವಾದ ಕಾರ್ಯವನ್ನಾದರೂ ಮಾಡಿಕೊಡುವುದಾಗಿ ಮಾತು ಕೊಟ್ಟ ಬಳಿಕ ಪರಾಕ್ರಮಿಯಾದವನು ಆ ಮಾತಿಗೆ ತಪ್ಪಬಾರದು... ಉಪಕಾರವನ್ನು ಮಾಡಿದವರಿಗೆ ಪ್ರತ್ಯುಪಕಾರ ಮಾಡದವನ ಶರೀರವನ್ನು ಮಾಂಸಾಹಾರಿಗಳಾದ ನರಿಗಳೇ ಮೊದಲಾದವೂ ಮುಟ್ಟವು. ಮಿಂಚಿನ ಹೊಳೆಯಂತೆ ಹೊಳೆಯುವ ಚಿನ್ನದ ಕಟ್ಟುಗಳುಳ್ಳ ನನ್ನ ಬಿಲ್ಲನ್ನು ನೋಡ ಬೇಕೆಂದು ಸುಗ್ರೀವನಿಗೆ ಇಚ್ಛೆಯುಂಟಾಗಿರಬೇಕು. ರಣರಂಗದಲ್ಲಿ ದೇವೇಂದ್ರನ ವಜ್ರಾಯುಧದಂತೆ ಆರ್ಭಟಿಸುವ ನನ್ನ ಧನುಸ್ಸಿನ ಧ್ವನಿಯನ್ನು ಸುಗ್ರೀವನು ಕೇಳಲಿಚ್ಛಿಸಿದ್ದಾನೋ ಏನೋ ತಿಳಿಯಲಿಲ್ಲ. ಪರಾಕ್ರಮಿಯಾದ ನಿನ್ನ ಸಹಾಯವಿರುವಾಗ ನನ್ನ ಕಾರ್ಯಕ್ಕೆ ಯೋಚನೆಯೇನು ಲಕ್ಷ್ಮಣ, ಯಾವ ಕಾರ್ಯನಿಮಿತ್ತವಾಗಿ ಸುಗ್ರೀವನಿಗೆ ಸಹಾಯವನ್ನು ಮಾಡಿದೆವೋ ಆ ಕಾರ್ಯದ ಮಹತ್ವವನ್ನು ಆತನು ಅರಿಯದೆ ಹೋದನು. ವರ್ಷಾಕಾಲದ ನಾಲ್ಕುತಿಂಗಳು ಕಳೆದಮೇಲೆ ನಮ್ಮ ಕಾರ್ಯವನ್ನು ಆಗುಮಾಡಿಕೊಡುವುದಾಗಿ ಮಾತುಕೊಟ್ಟು ನಾಲ್ಕುತಿಂಗಳು ಕಳೆದಮೇಲೂ ಸ್ತ್ರೀಲೋಲನಾಗಿ ಸುಗ್ರೀವನು ತನ್ನ ಪ್ರಧಾನರನ್ನೂ ಪರಿವಾರವನ್ನೂ ಕೂಡಿಕೊಂಡು ನನ್ನಲ್ಲಿ ದಯೆದೋರದೆ ಹೋದನು. ನೀನು ಸುಗ್ರೀವನೊಡನೆ ನನ್ನ ರೋಷದ ಪರಿಸ್ಥಿತಿಯನ್ನು ತಿಳಿಸಿಹೇಳು. ನನ್ನ ಬಾಣದಿಂದ ವಾಲಿಯೊಬ್ಬನೇ ಹತನಾದರೂ ಸರ್ಗಸ್ಥನಾದ ಆತನ ಮಾರ್ಗವು ಸಂಚಿತವಾಗಿಲ್ಲವೆಂದು ತಿಳಿಸು. ಕಾಲೋಚಿತವನ್ನರಿತು ವಾಲಿಯು ಹೋದ ಮಾರ್ಗಕ್ಕೆ ಹೋಗದೆ ತಾನು ಹೇಳಿದಂತೆ ನಡೆದುಕೊಳ್ಳಬೇಕೆಂದೂ ಹಾಗಿಲ್ಲದಿದ್ದರೆ ಆತನನ್ನೂ ಆತನ ಬಂಧುಗಳನ್ನೂ ಸಂಹರಿಸುವೆನೆಂದೂ ಹೇಳು. ಲಕ್ಷ್ಮಣ, ನೀನು ಕಾಲೋಚಿತವನ್ನರಿತು ಕಾರ್ಯಕ್ಕೆ ಹಿತವಾದ ಮಾತುಗಳೆಲ್ಲವನ್ನೂ ಹೇಳು. ನನಗೆ ಆತನು ಕೊಟ್ಟ ಮಾತನ್ನು ಜ್ಞಾಪಿಸಿಕೊಡು. ನನ್ನ ಬಾಣಗಳಿಂದ ಹತನಾಗಿ ಯಮಲೋಕದಲ್ಲಿರುವ ವಾಲಿಯನ್ನು ನೋಡುವುದಕ್ಕೆ ಹೋಗಲು ತಕ್ಕಯೋಚನೆಯನ್ನು ಮಾಡದಿರುವ ಹಾಗೂ ಹೇಳು ಎಂದನು.

ಮುಂದುವರಿಯುವುದು...

**ಭಾರತದ ಇತಿಹಾಸದಲ್ಲಿ ಧೈರ್ಯ, ಬುದ್ಧಿವಂತಿಕೆ ಮತ್ತು ತಂತ್ರಜ್ಞಾನದ ಪ್ರತಿರೂಪವೆಂದರೆ ಛತ್ರಪತಿ ಶಿವಾಜಿ ಮಹಾರಾಜರು. ಮರಾಠ ಸಾಮ್ರಾಜ್ಯದ ಸ್ಥಾಪಕರಾದ ಅವರು ಕೇವಲ ಕತ್ತಿಯ ಶಕ್ತಿಯಿಂದಲ್ಲ, ತಮ್ಮ ಚಾಣಾಕ್ಷ ಬುದ್ಧಿಯಿಂದಲೂ ಶತ್ರುಗಳನ್ನು ಸೋಲಿಸಿದರು. ಅವರ ಜೀವನದಲ್ಲಿ ಅನೇಕ ಸಾಹಸಮಯ ಘಟನೆಗಳಿದ್ದರೂ, ಆಗ್ರಾದಲ್ಲಿ ಬಂಧನಕ್ಕೊಳಗಾಗಿ ಅದ್ಭುತವಾಗಿ ಪಾರಾದ ಕಥೆ ಇತಿಹಾಸದ ಅತ್ಯಂತ ರೋಚಕ ಅಧ್ಯಾಯಗಳಲ್ಲಿ ಒಂದಾಗಿದೆ.**

# ಆಗ್ರಾದ ಬಂಧನದಿಂದ ಅದ್ಭುತ ಪಾರಾಗುವ ಮಹಾಸಾಹಸ

☛ ವಿಶ್ವಾಸ್.ಡಿ.ಗೌಡ



ಮುಗಲ್ ಸಾಮ್ರಾಜ್ಯದ ಬಲಿಷ್ಠ ಅರಸನಾದ ಔರಂಗಜೇಬ್ ಶಿವಾಜಿಯ ಶೌರ್ಯವನ್ನು ನೋಡಿ ಆತಂಕಗೊಂಡಿದ್ದ. ಹಲವು ಯುದ್ಧಗಳಲ್ಲಿ ಸೋಲು ಕಂಡ ನಂತರ, ಶಿವಾಜಿಯನ್ನು ನೇರವಾಗಿ ನಿಯಂತ್ರಣಕ್ಕೆ ತರಬೇಕೆಂದು ನಿರ್ಧರಿಸಿದನು. 1666ರಲ್ಲಿ ಶಿವಾಜಿಗೆ ಆಗ್ರಾಕ್ಕೆ ಬರುವಂತೆ ಆಹ್ವಾನ ಕಳುಹಿಸಲಾಯಿತು. ರಾಜಕೀಯ ಒಪ್ಪಂದದ ನೆಪದಲ್ಲಿ ಕಳುಹಿಸಿದ ಈ ಆಹ್ವಾನವನ್ನು ಶಿವಾಜಿ ತಂತ್ರವಾಗಿ ಸ್ವೀಕರಿಸಿದರು. ತಮ್ಮ ಪುತ್ರ ಸಂಭಾಜಿಯವರೊಂದಿಗೆ ಆಗ್ರಾಕ್ಕೆ ತೆರಳಿದರು.

ಆದರೆ ಆಗ್ರಾದ ಅರಮನೆಗೆ ತಲುಪಿದಾಗ, ಅವರಿಗೆ ಸಲ್ಲಬೇಕಾದ ಗೌರವ ನೀಡಲಿಲ್ಲ. ದರ್ಬಾರಿನಲ್ಲಿ ಕೀಳ್ದರ್ಜೆಯ ಸ್ಥಾನ ನೀಡಲಾಗಿತ್ತು.

ಇದು ಶಿವಾಜಿಗೆ ಅವಮಾನಕರವಾಗಿತ್ತು. ತಮ್ಮ ಸ್ವಾಭಿಮಾನಕ್ಕೆ ಧಕ್ಕೆ ಉಂಟಾಗಿದೆ ಎಂದು ಅವರು ಸ್ಪಷ್ಟವಾಗಿ ತಿಳಿಸಿದರು. ಇದರಿಂದ ಕೋಪಗೊಂಡ ಔರಂಗಜೇಬ್, ಶಿವಾಜಿಯನ್ನು ಗೃಹಬಂಧನದಲ್ಲಿಟ್ಟನು.

**ಬಂಧನದ ಸಂಕಟ**

ಆಗ್ರಾದಲ್ಲಿ ಶಿವಾಜಿ ಮತ್ತು ಸಂಭಾಜಿ ಕಟ್ಟುನಿಟ್ಟಿನ ಕಾವಲುಗಾರರ ಮಧ್ಯೆ ಬಂಧಿತರಾದರು. ಹೊರಗೆ ಹೋಗಲು ಅವಕಾಶವಿಲ್ಲ. ಪ್ರತಿಯೊಂದು ಹೆಜ್ಜೆಯೂ ನಿಗಾದಲ್ಲಿತ್ತು. ಸಾಮಾನ್ಯ ವ್ಯಕ್ತಿಯಾಗಿದ್ದರೆ ಆತಂಕದಿಂದ ಕುಗ್ಗಿಬಿಡುತ್ತಿದ್ದ. ಆದರೆ ಶಿವಾಜಿ ವಿಭಿನ್ನರು. ಸಂಕಷ್ಟದಲ್ಲೂ ಸಮಾಧಾನದಿಂದ ಯೋಚಿಸಿದರು.

ಅವರು ನೇರವಾಗಿ ಪಾರಾಗುವುದು ಅಸಾಧ್ಯವೆಂದು ಅರಿತು, ತಂತ್ರ ರೂಪಿಸಿದರು. ಕೆಲವು ದಿನಗಳು ಅನಾರೋಗ್ಯದ ನಾಟಕ ಆಡಿದರು.

ದೈನಂದಿನವಾಗಿ ಸಂತರಿಗೆ, ಬಡವರಿಗೆ ಹಣ್ಣುಗಳನ್ನು ಮತ್ತು ಸಿಹಿತಿಂಡಿಗಳನ್ನು ಕಳುಹಿಸುವ ಪದ್ಧತಿಯನ್ನು ಪ್ರಾರಂಭಿಸಿದರು. ದೊಡ್ಡ ದೊಡ್ಡ ಬಾಕ್ಸ್‌ಗಳಲ್ಲಿ ಸಿಹಿತಿಂಡಿಗಳು ಹೊರಗೆ ಸಾಗುತ್ತಿದ್ದವು. ಮೊದಲಿಗೆ ಕಾವಲುಗಾರರು ಕಟ್ಟುನಿಟ್ಟಾಗಿ ಪರಿಶೀಲಿಸಿದರು. ಆದರೆ ದಿನಗಳು ಕಳೆಯುತ್ತಿದ್ದಂತೆ ಅದು ಸಾಮಾನ್ಯ ಸಂಗತಿಯಾಗಿಬಿಟ್ಟಿತು.

**ಅದ್ಭುತ ಪಾರಾಗುವ ಕ್ಷಣ**

ಒಂದು ದಿನ, ಯೋಜನೆಯಂತೆ ಶಿವಾಜಿ ಮತ್ತು ಸಂಭಾಜಿ ಇಬ್ಬರೂ ಆ ಸಿಹಿತಿಂಡಿಗಳ ದೊಡ್ಡ ಪೆಟ್ಟಿಗೆಯೊಳಗೆ ಅಡಗಿಕೊಂಡರು. ಸೇವಕರು ಅವುಗಳನ್ನು ಹೊರಗೆ ತೆಗೆದುಕೊಂಡು ಹೋದರು. ಕಾವಲುಗಾರರು ಸಾಮಾನ್ಯವಾಗಿ ಪರಿಶೀಲನೆ ಮಾಡದೆ ಬಿಡಿಸಿದರು. ಹೀಗೆ ಇತಿಹಾಸದ ಅತ್ಯಂತ ಸಾಹಸಮಯ ಪಾರಾಗುವ ಘಟನೆ ಸಂಭವಿಸಿತು. ಆಗ್ರಾದ ಗೃಹಬಂಧನದಿಂದ ಪಾರಾದ ಶಿವಾಜಿ ನಂತರ ವಿಭಿನ್ನ ವೇಷಗಳಲ್ಲಿ ಪ್ರಯಾಣಿಸಿ ಸುರಕ್ಷಿತವಾಗಿ ಮಹಾರಾಷ್ಟ್ರ ತಲುಪಿದರು. ಈ ಸುದ್ದಿ ಔರಂಗಜೇಬ್‌ಗೆ ತಿಳಿದಾಗ ಅವನು ಆಘಾತಕ್ಕೊಳಗಾದನು. ಕಠಿಣ ಕಾವಲು ಮಧ್ಯೆಯೂ ಶಿವಾಜಿ ಪಾರಾಗಿರುವುದು ಅವನಿಗೆ ನಂಬಲಾರದ ಸಂಗತಿಯಾಯಿತು.

**ಧೈರ್ಯ ಮತ್ತು ಬುದ್ಧಿವಂತಿಕೆಯ ಪ್ರತೀಕ**

ಈ ಘಟನೆಯು ಕೇವಲ ಸಾಹಸ ಕಥೆಯಲ್ಲ; ಇದು ಧೈರ್ಯ, ತಾಳ್ಮೆ ಮತ್ತು ತಂತ್ರಜ್ಞಾನದ ಪಾಠ. ಸಂಕಷ್ಟ ಎದುರಾದಾಗ ಆತಂಕಗೊಳ್ಳದೇ, ಸಮಾಧಾನದಿಂದ ಯೋಚಿಸಿ ಪರಿಹಾರ ಕಂಡುಕೊಳ್ಳುವ ಸಾಮರ್ಥ್ಯ ಶಿವಾಜಿಯವರ ಮಹತ್ವವನ್ನು ತೋರಿಸುತ್ತದೆ. ಅವರ ಜೀವನ ನಮಗೆ ಒಂದು ಸಂದೇಶ ನೀಡುತ್ತದೆ ''ಸ್ವಾಭಿಮಾನ ಮತ್ತು ಸ್ವಾತಂತ್ರ್ಯಕ್ಕಾಗಿ ಹೋರಾಡುವವನು ಯಾವ ಸಂಕಷ್ಟವನ್ನೂ ಜಯಿಸಬಲ್ಲನು.'' ಆಗ್ರಾದಿಂದ ಪಾರಾದ ಘಟನೆ ಮರಾಠ ಸಾಮ್ರಾಜ್ಯದ ಆತ್ಮವಿಶ್ವಾಸವನ್ನು ಮತ್ತಷ್ಟು ಬಲಪಡಿಸಿತು. ನಂತರ ಶಿವಾಜಿ ಮಹಾರಾಜರು ಮತ್ತಷ್ಟು ಶಕ್ತಿಶಾಲಿಯಾಗಿ ಮರಳಿ, ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿದರು. ಛತ್ರಪತಿ ಶಿವಾಜಿಯ ಈ ಸಾಹಸಮಯ ಕಥೆ ಇಂದಿಗೂ ಯುವಜನತೆಗೆ ಪ್ರೇರಣೆಯಾಗಿದೆ. ಸಂಕಷ್ಟಗಳಲ್ಲಿ ಕುಗ್ಗದೇ, ಧೈರ್ಯದಿಂದ ಮತ್ತು ಬುದ್ಧಿವಂತಿಕೆಯಿಂದ ಎದುರಿಸಬೇಕು ಎಂಬ ಪಾಠವನ್ನು ಇದು ಕಲಿಸುತ್ತದೆ. ಶಿವಾಜಿ ಮಹಾರಾಜರ ಜೀವನವೇ ಒಂದು ಜ್ವಲಂತ ಜ್ಯೋತಿ. ಅವರ ಧೈರ್ಯ, ತ್ಯಾಗ ಮತ್ತು ತಂತ್ರಜ್ಞಾನ ಇಂದಿಗೂ ಭಾರತದ ಇತಿಹಾಸದಲ್ಲಿ ಚಿನ್ನದ ಅಕ್ಷರಗಳಲ್ಲಿ ಲಿಖಿತವಾಗಿದೆ.

ಪ್ರಮುಖ ವಿಷಯಗಳಿಗೆ ಸಂಬಂಧಿಸಿದ ಅಂಶಗಳು ಸೇರಿದಂತೆ ಎಲ್ಲಾ ಇತರ ಮಾಹಿತಿಯನ್ನು ಫೈಲ್‌ಗಳು ಒಳಗೊಂಡಿರಬೇಕು

# ಏಲಿಯನ್ಸ್ ಕುರಿತ ಫೈಲ್ಸ್ ರಿಲೀಸ್‌ಗೆ ಟ್ರಂಪ್ ಆದೇಶ

**ವಾಷಿಂಗ್ಟನ್:** ನಮ್ಮ ಸೌರ ಮಂಡಲ ಎಷ್ಟು ವಿಶಾಲವೆಂದರೆ, ಇದರಲ್ಲಿನ ಹಲವು ನಿಗೂಢ ವಿಚಾರಗಳನ್ನು ತಿಳಿದುಕೊಳ್ಳಲು ವಿಜ್ಞಾನಿಗಳು ನೂರಾರು ವರ್ಷಗಳಿಂದ ಹಗಲಿರುಳು ಸಂಶೋಧನೆಗಳನ್ನು ನಡೆಸುತ್ತಿದ್ದಾರೆ. ಅದರಲ್ಲೂ ಪ್ರಮುಖವಾಗಿ ಇಡೀ ಭೂಮಂಡಲದಲ್ಲಿ ಜೀವಿಸಲು ಸಾಧ್ಯವಾಗಿರುವುದು ಭೂಮಿಯಲ್ಲಿ ಮಾತ್ರ, ಅದು ಕೂಡ ಮಾನವ ಸಂತಾನ ಎಂಬುವುದು ಇರುವುದು ಇಲ್ಲಿ ಮಾತ್ರ ಎಂದು ಕೆಲವರು ವಾದಿಸಿದರೆ, ಇನ್ನೂ ಕೆಲವರು ಈ ವಿಶಾಲ ಸೃಷ್ಟಿಯಲ್ಲಿ ನಮಗೆ ತಿಳಿಯದೇ ಇರುವ ಜೀವಿಗಳು ಇರಬಹುದು ಎಂದು ಅಥವಾ ಇದೆ ಎಂದು ಹೇಳುತ್ತಾರೆ. ಅದಕ್ಕೆ ಅವರು ನೀಡುವ ಹೆಸರು ಏಲಿಯನ್‌ಗಳು.

ಹಾಗಾದ್ರೆ, ಈ ಏಲಿಯನ್‌ಗಳು ನಿಜವೇ. ಇವು ನಿಜವಾಗಿಯೂ ಇದ್ದಾವಾ? ಅದರಲ್ಲೂ ಭೂಮಿಯ ಮೇಲೆ ಇವುಗಳ ಚಲನವಲನ ಕಂಡುಬಂದಿದೆಯೇ ಎಂಬುದರ ಕುರಿತು ಹಲವಾರು ಕುತೂಹಲಗಳು

- ಏಲಿಯನ್ ಗಳ ಕುರಿತು ವರದಿಯನ್ನು ರಿಲೀಸ್ ಮಾಡಿ ಎಂದು ರಕ್ಷಣಾ ಇಲಾಖೆಗೆ ಆದೇಶ ನೀಡಿದ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್
- ಅಮೆರಿಕಾದಲ್ಲಿ ಸಾಕಷ್ಟು ಸಂಚಲನ ಮೂಡಿಸಿದ ಯುಎಸ್ ಮಾಜಿ ಅಧ್ಯಕ್ಷ ಏಲಿಯನ್ ನಿಜ ಎಂಬ ಹೇಳಿಕೆ
- ಅಮೆರಿಕಾದ ಏರಿಯಾ 51 ಪ್ರದೇಶದಲ್ಲಿ ಇಷ್ಟೊಂದು ನಿಗೂಢವಾಗಿರೊದೇಕೆ? ಇಲ್ಲಿ ನಿಜವಾಗಿಯೂ ಭೂಮ್ಯಾತೀತ ಜೀವಿಗಳನ್ನು ಬಂಧಿಸಿಡಲಾಗಿದ್ಯಾ?

ಹರಿದಾಡುತ್ತಲೇ ಇವೆ. ಅದರಲ್ಲೂ ಅಮೆರಿಕಾದ ರಾಜಕೀಯದಲ್ಲಿ ಇದೊಂದು ಜಟಾಪಟಿಯ ಪ್ರಮುಖ ಅಂಶವಾಗಿ ಮಾರ್ಪಟ್ಟಿದ್ದು, ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ಏಲಿಯನ್ಸ್ ಗಳ ಕುರಿತಾಗಿ ಇರುವ ಡೇಟಾ ಫೈಲ್ಸ್ ಗಳನ್ನು ಬಿಡುಗಡೆ ಮಾಡಬೇಕು ಎಂದು ಅಮೆರಿಕಾದ ರಕ್ಷಣಾ ಇಲಾಖೆಗೆ ಆದೇಶಿಸಿದ್ದಾರೆ.



ಈ ಕುರಿತು ತಮ್ಮ ಟ್ರೂತ್ ಸೋಶಿಯಲ್ ನಲ್ಲಿ ಹಂಚಿಕೊಂಡು ಮಾಹಿತಿ ನೀಡಿರುವ ಟ್ರಂಪ್ ಏಲಿಯನ್‌ಗಳ ಕುರಿತು ತೋರಿರುವ ಅಪಾರ ಆಸಕ್ತಿಯ ಆಧಾರದ ಮೇಲೆ, ಅನ್ಯಲೋಕ ಮತ್ತು ಭೂಮ್ಯಾತೀತ ಜೀವಿ ಅಂದರೆ ಏಲಿಯನ್ಸ್, ಗುರುತಿಸಲಾಗದ ವೈಮಾನಿಕ ವಿದ್ಯಮಾನಗಳು ಮತ್ತು ಗುರುತಿಸಲಾಗದ ಹಾರುವ ವಸ್ತುಗಳು ಗಳಿಗೆ ಸಂಬಂಧಿಸಿದ ಸರ್ಕಾರಿ ಫೈಲ್‌ಗಳನ್ನು ಗುರುತಿಸುವ ಮತ್ತು ಬಿಡುಗಡೆ ಮಾಡುವ ಪ್ರಕ್ರಿಯೆಯನ್ನು ಪ್ರಾರಂಭಿಸಲು ನಾನು ರಕ್ಷಣಾ ಕಾರ್ಯದರ್ಶಿ ಮತ್ತು ಇತರ ಸಂಬಂಧಿತ ಇಲಾಖೆ ಹಾಗೂ ಏಜೆನ್ಸಿಗಳಿಗೆ ಆದೇಶವನ್ನು ನೀಡುತ್ತಿದ್ದೇನೆ ಎಂದು ಘೋಷಿಸಿದ್ದಾರೆ.

ಅಲ್ಲದೆ, ಇದರಲ್ಲಿ ಅತ್ಯಂತ ಸಂಕೀರ್ಣವಾದ, ಆದರೆ ಅತ್ಯಂತ ಆಸಕ್ತಿದಾಯಕ ಮತ್ತು ಪ್ರಮುಖ ವಿಷಯಗಳಿಗೆ ಸಂಬಂಧಿಸಿದ ಅಂಶಗಳು ಸೇರಿದಂತೆ ಎಲ್ಲಾ ಇತರ ಮಾಹಿತಿಯನ್ನು ಫೈಲ್‌ಗಳು ಒಳಗೊಂಡಿರಬೇಕು ಎಂದು ಆದೇಶಿಸಿದ್ದಾರೆ.

ಇನ್ನು, ಈ ಆದೇಶ ಅಮೆರಿಕಾದ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಅವರು ನೀಡಿದ ಸಂದರ್ಶನದಲ್ಲಿ ಅವರು ಹೇಳಿಗಳು ನಿಜ. ಆದರೆ, ಅಮೆರಿಕಾದ ಏರಿಯಾ 51 ನಲ್ಲಿ ಇರಿಸಲಾಗಿಲ್ಲ ಎಂದು ಹೇಳಿದ ಮೇಲೆ ಸಾರ್ವಜನಿಕ ವಲಯದಲ್ಲಿ ಸೃಷ್ಟಿಯಾದ ಚರ್ಚೆಗಳ ಬೆನ್ನಲ್ಲೇ, ಈ ಆದೇಶ ನೀಡಿದ್ದಾರೆ.

ಈ ಏಲಿಯನ್ ಕಥೆ ಸೃಷ್ಟಿಯಾಗಿದ್ದು ಹೇಗೆ ಎಂದು ನೋಡುವುದಾದರೆ, 1947 ರಲ್ಲಿ ಯುಎಸ್‌ನ ನ್ಯೂ ಮೆಕ್ಸಿಕೋದ ರೋಸ್‌ವೆಲ್‌ನಲ್ಲಿ ಅಪಘಾತಕ್ಕೀಡಾದ ನಂತರ, ಈ ಭೂಮ್ಯಾತೀತ ಜೀವಿಗಳು ಬಾಹ್ಯಾಕಾಶ ನೌಕೆ ಮತ್ತು ಅದರ ಪೈಲಟ್‌ಗಳ ದೇಹಗಳು ಈ ಸ್ಥಳದಲ್ಲಿ ಸಿಕ್ಕಿದೆ ಎಂದು ಹಲವರು ನಂಬುತ್ತಾರೆ, ಆದರೆ, ಈ ಕುರಿತಂತೆ ಇದೊಂದು ಹವಾಮಾನ ಬಲೂನ್ ಎಂದು ಯುಎಸ್ ಸರ್ಕಾರ ತಿಳಿಸಿತ್ತು.

ಇದಾದ ಬಳಿಕ ಮತ್ತೆ 1989 ರಲ್ಲಿ, ರಾಬರ್ಟ್ ಲಾಜರ್ ಎಂಬ ವ್ಯಕ್ತಿ ತಾನು ಏರಿಯಾ 51ದ ಒಳಗೆ ಅನ್ಯಲೋಕದ ತಂತ್ರಜ್ಞಾನದ ಮೇಲೆ ಕೆಲಸ ಮಾಡಿದ್ದೇನೆ. ಆ ಸಮಯದಲ್ಲಿ ಈ ಏಲಿಯನ್‌ಗಳ ವೈದ್ಯಕೀಯ ಛಾಯಾಚಿತ್ರಗಳನ್ನು ನೋಡಿದ್ದೇನೆ ಮತ್ತು ಸರ್ಕಾರವು UFO ಗಳನ್ನು ಪರೀಕ್ಷಿಸಲು ಈ ಸೌಲಭ್ಯವನ್ನು ಬಳಸಿಕೊಂಡಿದೆ ಎಂದು ಹೇಳಿದ ಮೇಲೆ ಈ ಚರ್ಚೆ ಮತ್ತಷ್ಟು ಹೆಚ್ಚಾಗಿತ್ತು.


ಇನ್ನು, ಈ ಏರಿಯಾ51 ಇತಿಹಾಸ ಕುರಿತು ಬರೆದಿರುವ ಆನಿ ಜಾಕೋಬ್ಸೆನ್ ಅವರ ಪ್ರಕಾರ, ಈ ಏರಿಯಾ 51 ಪ್ರದೇಶದಲ್ಲಿ ವಿಶ್ವದ ಕೆಲ ಅತ್ಯಾಧುನಿಕ ಬೇಹುಗಾರಿಕೆ ಕಾರ್ಯಕ್ರಮಗಳು ಆ ಸ್ಥಳದಲ್ಲಿವೆ.

ಈ ಏರಿಯಾ 51 ಒಂದು ಪರೀಕ್ಷಾ ಮತ್ತು ತರಬೇತಿ ಸೌಲಭ್ಯವಾಗಿದ್ದು, ಇಲ್ಲಿಯ ಸಂಶೋಧನೆಯು 1950 ರ ದಶಕದಲ್ಲಿ ಬೇಹುಗಾರಿಕೆ ವಿಮಾನದಿಂದ ಪ್ರಾರಂಭವಾಗಿದ್ದು, ಮತ್ತು ಈಗ ಡ್ರೋನ್‌ಗಳತ್ತ ಸಾಗಿದೆ. ಆದರೆ, ಇಲ್ಲಿ ನಡೆಯುವ ಕಾರ್ಯಚರಣೆಗಳನ್ನು ನಿಗೂಢವಾಗಿಡಲು ಏಲಿಯನ್ ಎಂಬ ಥಿಯರಿಗಳನ್ನು ಬಳಸಿ ಜನರಿಗೆ ತಪ್ಪು ಮಾಹಿತಿಗಳು ತಲುಪಿಸುವ ಮೂಲಕ ತನ್ನ ಲಾಭಕ್ಕಾಗಿ ಬಳಸಿಕೊಂಡಿದ ಎಂದು ಬಿಬಿಸಿಗೆ ಹೇಳಿರುವುದಾಗಿ ವರದಿಯಾಗಿದೆ.

### ಏರಿಯಾ 51 ಅನ್ನು ಏಲಿಯನ್ ಬೇಸ್ ಎಂದು ಹೇಳಲುವುದೇಕೆ? ಅಲ್ಲೇನಿದೆ?

**ಇನ್ನು, ಈ ಪ್ರದೇಶವೂ ಸಹ ಆ ಕಾಲದಲ್ಲಿ ಅತ್ಯಂತ ನಿಗೂಢತೆಯನ್ನು ಸೃಷ್ಟಿಮಾಡಿತ್ತು. ಇದಕ್ಕೆ ಕಾರಣ ಈ ಏರಿಯಾ 51ಬೇಸ್ ಅನ್ನು 1955ರಲ್ಲಿ ಕಾರ್ಯಾಚರಣೆ ಆರಂಭಿಸಿದ್ದರೂ ಸಹ ಇದರ ಅಸ್ತಿತ್ವವನ್ನು CIA ಆಗಸ್ಟ್ 2013 ರಲ್ಲಿ ತನಕ ಅಧಿಕೃತವಾಗಿ ಒಪ್ಪಿಕೊಂಡಿರಲಿಲ್ಲ. ಈ ಕುರಿತಂತೆ ಅಧಿಕೃತ ಮಾಹಿತಿ ತುಂಬಾ ಕಡಿಮೆಯಾಗಿದ್ದರೂ, ಈ ಪ್ರದೇಶದಲ್ಲಿ ಅಮೆರಿಕಾದ ಯುದ್ಧ ವಿಮಾನಗಳನ್ನು ಅಭಿವೃದ್ಧಿ ಪಡಿಸಲು ಬಳಸಲಾಗುತ್ತಿದೆ ಎಂಬ ಮಾಹಿತಿಯಿದೆ. ಅಲ್ಲದೆ, ಈ ಪ್ರದೇಶವನ್ನು ಅತ್ಯಂತ ಸೂಕ್ಷ್ಮವಾಗಿಡಲಾಗಿದ್ದು, ಒಳಗೆ ಏನು ನಡೆಯುತ್ತದೆ ಎಂಬುದು ಅತ್ಯಂತ ರಹಸ್ಯವಾಗಿದೆ. ಇದರ ಸುತ್ತಲೂ ಎಚ್ಚರಿಕೆ ಫಲಕಗಳು, ಎಲೆಕ್ಟ್ರಾನಿಕ್ ಕಣ್ಗಾವಲು ಮತ್ತು ಸಶಸ್ತ್ರ ಕಾವಲುಗಾರರ ಮೂಲಕ ಸಾರ್ವಜನಿಕರನ್ನು ದೂರವಿಡಲಾಗುತ್ತದೆ.ಈ ಚಿತ್ರಣಗಳು ಸ್ಯಾಟಲೈಟ್ ಚಿತ್ರಗಳ ಮೂಲಕ ಕಾಣಿಸಿದಾಗ್ಯೂ, ಈ ಏರಿಯಾ 51 ನ ವಾಯು ಪ್ರದೇಶದಲ್ಲಿ ಹಾರಾಟ ನಡೆಸುವುದನ್ನು ಸಹ ನಿರ್ಬಂಧಿಸಿದ್ದಾರೆ.**

ಸಂಚಲನ ಮೂಡಿಸಿದ ಒಬಾಮ ಹೇಳಿಕೆ



### ಒಬಾಮ ಹೇಳಿದ್ದೇನು?

**ಅಷ್ಟಕ್ಕೂ ಅಮೆರಿಕಾದಲ್ಲಿ ಸಂಚಲನ ಮೂಡಿಸುವಂತೆ ಒಬಾಮ ಹೇಳಿದ್ದೇನು ಎಂದು ನೋಡುವುದಾರೆ, ಅಮೆರಿಕಾದ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಇತ್ತೀಚೆಗೆ ಯೂಟ್ಯೂಬರ್ ಬ್ರಿಯಾನ್ ಟೈಲರ್ ಕೋವೆನ್ ಅವರ ಪಾಡ್ ಕಾಸ್ಟ್ ನಲ್ಲಿ ಭಾಗವಹಿಸಿದ್ದರು, ಈ ವೇಳೆ, ಏಲಿಯನ್ ಗಳು ಹಾಗೂ ಅಮೆರಿಕಾದ ಅತ್ಯಂತ ಸೂಕ್ಷ್ಮ ಪ್ರದೇಶವಾಗಿರುವ ಏರಿಯಾ 51 ನಲ್ಲಿ ಏಲಿಯನ್ ಗಳು ಇವೆ ಎಂಬ ಕುರಿತು ಬಹಳ ಹಿಂದಿನ ಕಾಲದಿಂದಲೂ ಇರುವ ಥಿಯರ್ ಗಳ ಕುರಿತು ಮಾತನಾಡಿದ್ದಾರೆ. ಈ ಪಾಡ್ ಕಾಸ್ಟ್‌ನಲ್ಲಿ ನಿರೂಪಕ ಏಲಿಯನ್ ಗಳು ನಿಜವಾ ಎಂದು ಕೇಳಿದ್ದಕ್ಕೆ ಒಬಾಮ ಏಲಿಯನ್ ಗಳು ನಿಜ. ಆದರೆ, ನಾನು ಅವುಗಳನ್ನು ನೋಡಿಲ್ಲ. ಹಾಗೇಯೇ ಹೇಳಲಾಗುವ ಕಥೆಗಳಂತೆ ಏರಿಯಾ 51ನಲ್ಲಿ ಅವುಗಳನ್ನು ಬಂಧಿಸಿ ಇರಿಸಲಾಗಿಲ್ಲ ಎಂದು ಹೇಳಿದ್ದಾರೆ. ಅದೇ ವೇಳೆ, ನೆವಾಡದಲ್ಲಿನ ಗ್ರೂಮ್ ಲೇಕ್‌ನಲ್ಲಿರುವ ಏರಿಯಾ 51ನಲ್ಲಿ ವಾಯುಪಡೆಯ ನೆಲೆ ಕಾರ್ಯಚರಣೆಗಳು ನಡೆಯುತ್ತವೆ ಎಂದು ಹೇಳಿದ್ದರು.**

## ಇಂಡಿಯಾ ಎಐ ಇಂಪ್ಯಾಕ್ಟ್ ಶೃಂಗಸಭೆಯ ವೇದಿಕೆಗೆ ನುಗ್ಗಿ ಯೂಥ್ ಕಾಂಗ್ರೆಸ್ ಅರೆಬೆತ್ತಲೆ ಪ್ರತಿಭಟನೆ



**ನವದೆಹಲಿ:** ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿರುವ ಇಂಡಿಯಾ ಎಐ ಇಂಪ್ಯಾಕ್ಟ್ ಸಮಿಟ್ 2026 ಸಮಾವೇಶದ ಎರಡನೇ ಕೊನೆಯ ದಿನ ರಾಷ್ಟ್ರ ರಾಜಧಾನಿಯ ಭಾರತ ಮಂಟಪದಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ಟಾಪ್‌ಲೆಸ್ ಪ್ರತಿಭಟನೆ ನಡೆಸಿದ ಘಟನೆ ನಡೆದಿದೆ. ಪ್ರಧಾನಮಂತ್ರಿ ವಿರುದ್ಧ ಘೋಷಣೆ ಕೂಗಿ, ಇತ್ತೀಚಿನ ಭಾರತ-ಅಮೆರಿಕಾ ವಾಣಿಜ್ಯ ಒಪ್ಪಂದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ ಎಂದು ತಿಳಿದುಬಂದಿದೆ.

ಭಾರತೀಯ ಯುವ ಕಾಂಗ್ರೆಸ್ ಕಾರ್ಯಕರ್ತರು ಸಮಾವೇಶ ನಡೆಯುತ್ತಿದ್ದ ಸ್ಥಳಕ್ಕೆ ಪ್ರವೇಶಿಸಿ ಆಕ್ರೋಶ ವ್ಯಕ್ತಪಡಿಸಿದರು. ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಭಾರತದ ಸಾಧನೆಗಳನ್ನು ಪ್ರತಿಬಿಂಬಿಸುವ ಮಹತ್ವದ ವೇದಿಕೆಯಾಗಿ ಈ ಸಮಾವೇಶ ಪರಿಗಣಿಸಲಾಗಿದೆ.

ಘಟನೆಗೆ ಸಂಬಂಧಿಸಿದಂತೆ ದೆಹಲಿ ಪೊಲೀಸ್ ಪ್ರತಿಕ್ರಿಯಿಸಿ, ಪ್ರತಿಭಟನೆ ಕುರಿತು ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದ್ದಾರೆ. ನಾಲ್ಕುರಿಂದ ಐದು ಮಂದಿಯನ್ನು ವಶಕ್ಕೆ ಪಡೆದುಕೊಂಡಿದ್ದು, ಅವರು ಪ್ರವೇಶ ಪಾಸ್ ಅಥವಾ ಕ್ಯೂಆರ್ ಸಂಕೇತದ ಮೂಲಕ ಒಳಬಂದಿದೆಯೇ ಎಂಬುದರ ಪರಿಶೀಲನೆ ನಡೆಯುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

ಇದಕ್ಕೆ ತೀವ್ರ ಪ್ರತಿಕ್ರಿಯೆ ನೀಡಿದ ಭಾರತೀಯ ಜನತಾ ಪಕ್ಷ ರಾಷ್ಟ್ರೀಯ ವಕ್ತಾರ ಶೆಹ್ಜಾದ್ ಪೂನವಾಲಾ, ''ಕಾಂಗ್ರೆಸ್ ಪಕ್ಷಕ್ಕೆ ಎಐ ಎಂದರೆ ಆಕಾಂಕ್ಷಿ ಭಾರತ ಅಥವಾ ಕೃತಕ ಬುದ್ಧಿಮತ್ತೆ ಅಲ್ಲ, ಭಾರತ ವಿರೋಧಿ. ಇದು ಐಎನ್‌ಸಿ ಅಲ್ಲ, ಎಎನ್‌ಸಿ ದೇಶವಿರೋಧಿ ಕಾಂಗ್ರೆಸ್ ಎಂದು ಟೀಕಿಸಿದ್ದಾರೆ. ಈ ಪ್ರತಿಭಟನೆ ಭಾರತ ಸಾಧನೆಗಳ ವಿರುದ್ಧವಾಗಿದೆಯೇ ಹೊರತು ಬಿಜೆಪಿ ಅಥವಾ ಪ್ರಧಾನಮಂತ್ರಿ ವಿರುದ್ಧವಲ್ಲ ಎಂದು ಹೇಳಿದ್ದಾರೆ. ಮತ್ತೊಂದೆಡೆ, ಉದಯ ಭಾನು ಚಿಬ್ ಅವರು, ಕೃತಕ ಬುದ್ಧಿಮತ್ತೆ ಸಮಾವೇಶದ ಹೊಳಪಿನ ವೇದಿಕೆಯ ಹಿಂದೆ ಸತ್ಯವನ್ನು ಮರೆಮಾಚಲು ಸಾಧ್ಯವಿಲ್ಲ. ಕಾರ್ಪೊರೇಟ್ ಹಿತಾಸಕ್ತಿಗಳು ರಾಷ್ಟ್ರ ಹಿತಾಸಕ್ತಿಗಳಿಗಿಂತ ಮೇಲುಗೈ ಸಾಧಿಸುತ್ತಿದ್ದರೆ ಮತ್ತು ವಿದೇಶಾಂಗ ನೀತಿಯಲ್ಲಿ ಮೃದುಭಾವ ಗೋಚರಿಸುತ್ತಿದ್ದರೆ, ಪ್ರತಿಭಟನೆ ನಮ್ಮ ಕರ್ತವ್ಯ. 'ಸಮ್ಮತಿ ಪ್ರಧಾನಮಂತ್ರಿ ವಿರುದ್ಧ ಧ್ವನಿ ಎತ್ತುವುದು ನಮ್ಮ ಹಕ್ಕು, ಎಂದು ಹೇಳಿದ್ದಾರೆ.ಇದಕ್ಕೂ ಮೊದಲು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾರತ-ಅಮೆರಿಕಾ ವಾಣಿಜ್ಯ ಒಪ್ಪಂದವನ್ನು ಟೀಕಿಸಿ, ಈ ಒಪ್ಪಂದದಿಂದ ಭಾರತೀಯ ರೈತರಿಗೆ ದ್ರೋಹವಾಗುತ್ತಿದೆ ಎಂದು ಆರೋಪಿಸಿದ್ದರು. ದೇಶದ ಕೃಷಿಯ ಭವಿಷ್ಯಕ್ಕೂ ಇದು ಸಂಬಂಧಿಸಿದೆ ಎಂದು ಅವರು ಹೇಳಿದ್ದಾರೆ.

ಭಾರತ-ಅಮೆರಿಕಾ ವಾಣಿಜ್ಯ ಒಪ್ಪಂದಕ್ಕೆ ವಿರೋಧ

## ಬಲೂಚ್ ಕೆಂಡದ ಮೇಲೆ ಪಾಕ್‌ನ 8 ಸೈನಿಕರು: 2 ದಿನದ ಒಳಗಡೆ ನಮ್ಮವರನ್ನು ಒಪ್ಪಿಸದಿದ್ದರೆ ಮರಣದಂಡನೆ

**ಇಸ್ಲಾಮಾಬಾದ್:** ಬಲೂಚ್ ಆರ್ಮಿ ವಶದಲ್ಲಿರುವ ಪಾಕಿಸ್ತಾನದ ಸೈನಿಕರು ಜೀವ ಭಯದಲ್ಲಿ ಕಣ್ಣೀರಿಡುತ್ತಿದ್ದಾರೆ. ತಮ್ಮವರನ್ನು ಒಪ್ಪಿಸಿ 8 ಮಂದಿ ಸೈನಿಕರನ್ನು ಬಿಡಿಸಿಕೊಳ್ಳುವಂತೆ ಪಾಕ್‌ಗೆ ಬಲೂಚ್ ಆರ್ಮಿ ಒಂದು ವಾರ ಗಡವು ನೀಡಿತ್ತು. ಅದರಲ್ಲಿ ಈಗ ಕೇವಲ ಎರಡು ದಿನ ಮಾತ್ರ ಬಾಕಿ ಉಳಿದಿದೆ. 7 ದಿನಗಳ ಒಳಗೇ ತಮ್ಮವರನ್ನು ಒಪ್ಪಿಸದೇ ಇದ್ದರೆ ವಶದಲ್ಲಿರುವವರಿಗೆ ಮರಣದಂಡನೆ ವಿಧಿಸುವ ಎಚ್ಚರಿಕೆಯನ್ನೂ ಬಲೂಚ್ ನೀಡಿತ್ತು. ಗಡವು ಮುಗಿಯಲು ಇದೀಗ ಎರಡು ದಿನಗಳು ಮಾತ್ರ ಬಾಕಿ ಇದ್ದು, ಪ್ರಾಣ ಭಯದಿಂದ ಪಾಕ್ ಸೈನಿಕರು ಕಣ್ಣೀರಿಟ್ಟಿದ್ದಾರೆ. ತಮ್ಮ ಐಡಿ ಕಾರ್ಡನ್ನು ಪ್ರದರ್ಶಿಸಿ ಪಾಕ್ ಸರ್ಕಾರಕ್ಕೆ ತಮ್ಮನ್ನು ಬಚಾವ್ ಮಾಡುವಂತೆ ಬೇಡಿಕೊಂಡಿರುವ ವಿಡಿಯೋವನ್ನು ಬಲೂಚ್ ಸೇನೆ ಹಂಚಿಕೊಂಡಿದೆ.


ಪಾಕಿಸ್ತಾನ, ಬಲೂಚ್ ಆರ್ಮಿ ವಶದಲ್ಲಿರುವವರು ತಮ್ಮವರಲ್ಲ ಎಂದು ಹೇಳಿತ್ತು. ಇದರ ಬೆನ್ನಲ್ಲೇ ಬಲೂಚ್ ಆರ್ಮಿಯ ಮಾಧ್ಯಮ ವಿಭಾಗ ಹಕ್ಕಲ್ ಪಾಕ್ ಸೈನಿಕರ ದೃಶ್ಯಾವಳಿಗಳನ್ನು ಬಿಡುಗಡೆ ಮಾಡಿದೆ. ಬಂಧಿತ ಸೈನಿಕರು ತಮ್ಮ ಅಧಿಕೃತ ಸೇವಾ ಗುರುತಿನ ಚೀಟಿಗಳು ಮತ್ತು ರಾಷ್ಟ್ರೀಯ ಗುರುತಿನ ದಾಖಲೆಗಳನ್ನು ವಿಡಿಯೋದಲ್ಲಿ ಪ್ರದರ್ಶಿಸಿದ್ದಾರೆ. ಅವರು ಪಾಕ್ ಅಧಿಕಾರಿಗಳಿಗೆ ಸಹಾಯ ಮಾಡುವಂತೆ ಮನವಿ ಮಾಡಿದ್ದಾರೆ.

ವಿಡಿಯೋದಲ್ಲಿ, ಸೇನೆಯು ನಾವು ಅವರ ಸಿಬ್ಬಂದಿಯಲ್ಲ ಎಂದು ಹೇಗೆ ಹೇಳಲು ಸಾಧ್ಯ? ಇದು ಯಾರ ಕಾರ್ಡ್? ಎಂದು ಓರ್ವ ಪಾಕ್ ಸೈನಿಕ ಹೇಳಿದ್ದಾನೆ.



ಅಲ್ಲದೇ ಪಾಕಿಸ್ತಾನ ನನಗೆ ಇದನ್ನು ನೀಡಿದೆ. ನಾನು ವಿನಂತಿಸುತ್ತೇನೆ, ನನ್ನ ತಂದೆ ಅಂಗವಿಕಲರು, ಮತ್ತು ನಾನು ಮನೆಯಲ್ಲಿ ಹಿರಿಯ. ನಾವು ನಿಮ್ಮ ಸೈನಿಕರಲ್ಲ ಎಂದು ಹೇಳುವ ಮೂಲಕ ಅನ್ಯಾಯ ಮಾಡಬೇಡಿ. ನಾವು ನಿಮ್ಮ ಸೈನಿಕರಲ್ಲ ಎಂದು ಹೇಳುವುದಾದರೆ ನೀವು ನನ್ನನ್ನು ಏಕೆ ನೇಮಿಸಿಕೊಂಡಿದ್ದೀರಿ ಎಂದು ದುಃಖ ತೋಡಿಕೊಂಡಿದ್ದಾನೆ.

## ಗಾಜಾ ಶಾಂತಿ ಮಂಡಳಿ: ವೀಕ್ಷಕ ರಾಷ್ಟ್ರವಾಗಿ ಭಾರತ ಭಾಗಿ



**ವಾಷಿಂಗ್ಟನ್:** ಗಾಜಾ ಶಾಂತಿ ಮಂಡಳಿಗೆ ಸಂಬಂಧಿಸಿದಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆಹ್ವಾನವನ್ನು ಪರಿಶೀಲಿಸುತ್ತಿರುವುದಾಗಿ ಹೇಳಿದ್ದ ಭಾರತವು. ನಿನ್ನೆ ನಡೆದ ಮಂಡಳಿಯ ಮೊದಲ ಸಭೆಯಲ್ಲಿ ವೀಕ್ಷಕ ರಾಷ್ಟ್ರವಾಗಿ ಭಾಗವಹಿಸಿದೆ. ಅಮೆರಿಕದಲ್ಲಿರುವ ಭಾರತ ರಾಯಭಾರ ಕಚೇರಿಯ ಅಧಿಕಾರಿ ನಮ್ಗ್ಯ ಸಿ. ಖಂಪಾ ಅವರು ಸಭೆಯಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ. ವಾಷಿಂಗ್ಟನ್‌ನಲ್ಲಿರುವ ಯುಎಸ್ ಇನ್‌ಸ್ಟಿಟ್ಯೂಟ್ ಆಫ್ ಪೀಸ್‌ನಲ್ಲಿ ನಡೆದ ಸಭೆಯಲ್ಲಿ ಸುಮಾರು 50 ದೇಶಗಳ ಅಧಿಕಾರಿಗಳು ಭಾಗವಹಿಸಿದ್ದರು.

ಇವುಗಳಲ್ಲಿ ಅಜರ್‌ಬೈಜಾನ್, ಬೆಲಾರಸ್, ಈಜಿಪ್ಟ್, ಹಂಗೇರಿ, ಇಂಡೋನೇಷ್ಯಾ, ಇಸ್ರೇಲ್, ಜೋರ್ಡಾನ್, ಮೊರಾಕೊ, ಪಾಕಿಸ್ತಾನ, ಕತಾರ್, ಸೌದಿ ಅರೇಬಿಯಾ, ಟರ್ಕಿ, ಯುಎಇ, ಉಜೇಕಿಸ್ತಾನ್, ವಿಯೆಟ್ನಾಂ ಸೇರಿದಂತೆ 27 ದೇಶಗಳು ಮಂಡಳಿಯ ಭಾಗವಾಗಿದ್ದರೆ, ಭಾರತ, ಐರೋಪ್ಯ ಒಕ್ಕೂಟ ಸೇರಿದಂತೆ ಉಳಿದ ದೇಶಗಳು ವೀಕ್ಷಕ ರಾಷ್ಟ್ರಗಳಾಗಿ ಪ್ರತಿನಿಧಿಸಿದ್ದವು. ಗಾಜಾದಲ್ಲಿ ಶಾಶ್ವತ ಶಾಂತಿ ನೆಲಸುವಂತೆ ಮಾಡುವ ಉದ್ದೇಶದಿಂದ ರಚಿಸಲಾಗಿರುವ ಗಾಜಾ ಶಾಂತಿ ಮಂಡಳಿ'ಗೆ ಸೇರುವಂತೆ ಭಾರತ ಸೇರಿದಂತೆ ವಿವಿಧ ದೇಶಗಳ ನಾಯಕರಿಗೆ ಟ್ರಂಪ್ ಆಹ್ವಾನ ನೀಡಿದ್ದರು. ಆದರೆ, ಈ ಬಗ್ಗೆ ಭಾರತವು ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ದಾವೋಸ್‌ನಲ್ಲಿ ನಡೆದ ಸಭೆಯಿಂದಲೂ ಭಾರತ ದೂರ ಉಳಿದಿತ್ತು.

ಶಾಂತಿ ಮಂಡಳಿಗೆ ಸಂಬಂಧಿಸಿದಂತೆ ಅಮೆರಿಕದ ಆಹ್ವಾನವನ್ನು ಪರಿಶೀಲಿಸುತ್ತಿದ್ದೇವೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದರು. ಇದಾದ ಒಂದು ವಾರದ ನಂತರ ಶಾಂತಿ ಮಂಡಳಿಯ ಸಭೆಗೆ ವೀಕ್ಷಕ ರಾಷ್ಟ್ರವಾಗಿ ಭಾರತ ಭಾಗವಹಿಸಿದೆ.

## ಎಐ ಉಪಯೋಗದಲ್ಲಿ ಅಮೆರಿಕ-ಭಾರತದ ಪಾಲುದಾರಿಕೆ ನಿರ್ಣಾಯಕ


**ನವದೆಹಲಿ:** ಕೃತಕ ಬುದ್ಧಿಮತ್ತೆಯ ಪ್ರಯೋಜನಗಳನ್ನು ಎಲ್ಲರಿಗೂ ಮತ್ತು ಎಲ್ಲೆಡೆ ಲಭ್ಯವಾಗುವಂತೆ ಮಾಡುವಲ್ಲಿ ಅಮೆರಿಕ-ಭಾರತ ಪಾಲುದಾರಿಕೆಯು ನಿರ್ಣಾಯಕ ಪಾತ್ರ ವಹಿಸುತ್ತದೆ ಎಂದು ಗೂಗಲ್ ಮತ್ತು ಅದರ ಮಾತೃ ಕಂಪನಿ ಆಲ್ಫಾಬೆಟ್ ಇಂಕ್‌ನ ಸಿಇಒ ಸುಂದರ್ ಪಿಚೈ ಹೇಳಿದರು.

ಭಾರತ ಮತ್ತು ಅಮೆರಿಕ ಪ್ಯಾಕ್ಸ್ ಸಿಲಿಕಾ ಘೋಷಣೆಗೆ ಸಹಿ ಹಾಕುವ ಮುನ್ನ ನಡೆದ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಮಾತನಾಡಿದ ಅವರು, ಸಾಂಕೇತಿಕವಾಗಿ ಮತ್ತು ಅಕ್ಷರಶಃ ಎರಡೂ ದೇಶಗಳ ನಡುವೆ ಸಂಪರ್ಕ ಬಿಂದುವಾಗಿ ಕಾರ್ಯನಿರ್ವಹಿಸಲು ಹೆಮ್ಮೆಪಡುತ್ತದೆ ಎಂದು ಹೇಳಿದರು. ನಿನ್ನೆ, ಆರಂಭಿಕ ಅಧಿವೇಶನದಲ್ಲಿ, ಎಐನ ಈ ಆಳವಾದ ಕ್ಷಣದ ಕುರಿತು ನಾನು ಕೆಲವು ಆಲೋಚನೆಗಳನ್ನು ಹಂಚಿಕೊಂಡೆ. ನಾವು ಅತಿ ಪ್ರಗತಿ ಮತ್ತು ಹೊಸ ಆವಿಷ್ಕಾರಗಳ ಯುಗದ ತುದಿಯಲ್ಲಿದ್ದೇವೆ ಎಂದು ನಾನು ಹೇಳಿದೆ, ಆದರೆ ಉತ್ತಮ ಫಲಿತಾಂಶಗಳನ್ನು ಖಾತರಿಪಡಿಸಲಾಗಿಲ್ಲ ಎಂದು ಪಿಚೈ ಹೇಳಿದರು.

ಎಐನ ಪ್ರಯೋಜನಗಳು ಎಲ್ಲರಿಗೂ ಮತ್ತು ಎಲ್ಲೆಡೆ ಲಭ್ಯವಾಗುವಂತೆ ಖಚಿತಪಡಿಸಿಕೊಳ್ಳಲು ನಾವು ಒಟ್ಟಾಗಿ ಕೆಲಸ ಮಾಡಬೇಕು. ಯುಎಸ್ ಇಂಡಿಯಾ ಪಾಲುದಾರಿಕೆಯು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ ಎಂದು ಅವರು ಹೇಳಿದರು.ಸಾಂಕೇತಿಕವಾಗಿ ಮತ್ತು ಅಕ್ಷರಶಃ ಅವುಗಳ ನಡುವೆ ಸಂಪರ್ಕ ಬಿಂದುವಾಗಿ ಕಾರ್ಯನಿರ್ವಹಿಸಲು ಗೂಗಲ್ ಹೆಮ್ಮೆಪಡುತ್ತದೆ ಎಂದು ಅವರು ಹೇಳಿದರು. ನಮ್ಮ ಕೆಲವು ಪ್ರಮುಖ ಉಪಕ್ರಮಗಳಲ್ಲಿ ಎರಡೂ ದೇಶಗಳಾದ್ಯಂತ ತಂಡಗಳು ಸರಾಗವಾಗಿ ಒಟ್ಟಾಗಿ ಕೆಲಸ ಮಾಡುತ್ತಿವೆ, ಗೂಗಲ್ ಪೇ ನಂತಹ ಭಾರತದಲ್ಲಿ ಪ್ರಾರಂಭವಾಗುವ ನಾವೀನ್ಯತೆಗಳು ಪ್ರಪಂಚದಾದ್ಯಂತ ಜನರಿಗೆ ಉತ್ಪನ್ನಗಳನ್ನು ಉತ್ತಮಗೊಳಿಸುತ್ತಿವೆ ಎಂದು ವಿವರಿಸುತ್ತಾ ಅವರು ಹೇಳಿದರು.

ಭಾರತದ ಬಗ್ಗೆ ಉತ್ಸುಕರಾಗಿರುವ ಪಿಚೈ, ಭಾರತವು ಎಐಯೊಂದಿಗೆ ಅಸಾಧಾರಣ ಪಥವನ್ನು ಹೊಂದಲಿದೆ ಎಂದು ನಾನು ನಂಬುತ್ತೇನೆ ಮತ್ತು ಉತ್ಪನ್ನ ಸ್ಕೇಲಿಂಗ್ ಮತ್ತು ಮೂಲಸೌಕರ್ಯ ಸೇರಿದಂತೆ ಪೂರ್ಣ ಸ್ಟಾಕ್ ಬದ್ಧತೆಯೊಂದಿಗೆ ನಾವು ಅದನ್ನು ಬೆಂಬಲಿಸುತ್ತಿದ್ದೇವೆ ಎಂದು ಹೇಳಿದರು.

ಎಐನ ಪ್ರಯೋಜನಗಳು ಎಲ್ಲರಿಗೂ ಮತ್ತು ಎಲ್ಲೆಡೆ ಲಭ್ಯ




# ಕಾಮಾಕ್ಯ ಶಕ್ತಿಪೀಠಕ್ಕೆ ಪ್ರಿಯಾಂಕಾ ಗಾಂಧಿ ವಾದ್ರಾ ಭೇಟಿ

ಮುಂದಿನ ಅಸ್ಸಾಂ ವಿಧಾನಸಭೆಗೆ ಅಭ್ಯರ್ಥಿಗಳ ಆಯ್ಕೆಯ ಸಂಬಂಧ, ಪ್ರಿಯಾಂಕ ಗಾಂಧಿ, ಗುವಹಾಟಿಗೆ ಬಂದಿಳಿದಿದ್ದರು

**ಗುವಹಾಟಿ:** ಚುನಾವಣೆಯ ಹೊಸ್ತಿಲಲ್ಲಿರುವ ಅಸ್ಸಾಂಗೆ ಕಾಂಗ್ರೆಸ್ ಸಂಸದೆ ಮತ್ತು ಸ್ಕ್ರೀನಿಂಗ್ ಕಮಿಟಿ ಅಧ್ಯಕ್ಷೆಯೂ ಆಗಿರುವ ಪ್ರಿಯಾಂಕ ಗಾಂಧಿ ವಾದ್ರಾ ಭೇಟಿ ನೀಡಿದ್ದಾರೆ. ಎರಡು ದಿನಗಳ ಪ್ರವಾಸ ಆರಂಭಿಸುವ ಮುನ್ನ, ದೇಶದ ಶಕ್ತಿಪೀಠಗಳಲ್ಲಿ ಒಂದಾದ, ಕಾಮಾಕ್ಯ ದೇವಾಲಯಕ್ಕೆ ಭೇಟಿ ನೀಡಿದ್ದಾರೆ. ಅಲ್ಲಿ ಅವರಿಗೆ ನಾಗಸಾಧುಗಳ ಭರ್ಜರಿ ಆಶೀರ್ವಾದ ದಕ್ಕಿದೆ. ಇದೇ ಬರುವ ಏಪ್ರಿಲ್/ಮೇ ತಿಂಗಳಲ್ಲಿ ಅಸ್ಸಾಂ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಈ ಹಿನ್ನಲೆಯಲ್ಲಿ, ಪ್ರಿಯಾಂಕ ಗಾಂಧಿ ಮತ್ತು ಕರ್ನಾಟಕ ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷರಾದ ಡಿಕೆ ಶಿವಕುಮಾರ್ ಗುವಹಾಟಿಗೆ ತೆರಳಿದ್ದರು. ಲೋಕಪ್ರಿಯ ಗೋಪಿನಾಥ್ ಬೋರ್ಡೊಲೊಯ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಪ್ರಿಯಾಂಕ, ಪಕ್ಷದ ಕೆಲಸಕ್ಕೆ ಮುನ್ನ ಕಾಮಾಕ್ಯ ದೇವಾಲಯಕ್ಕೆ ತೆರಳಿದರು.ದೇವರ ಪೂಜೆಯ ನಂತರ ಹೊರಬಂದ ಪ್ರಿಯಾಂಕ ಗಾಂಧಿ ಜೊತೆ, ಸಾಧುವೊಬ್ಬರ ಫೋಟೋ ಕ್ಲಿಕ್ಕಿಸಿಕೊಳ್ಳಲು ಬಯಸಿದರು. ಅವರ ಜೊತೆ ಫೋಟೋ ತೆಗೆದುಕೊಂಡ ನಂತರ, ಪ್ರಿಯಾಂಕಗೆ ಅಚ್ಚರಿಯೊಂದು ಕಾದಿತ್ತು. ಆದು, ನಾಗಸಾಧು ಮಾಡಿದ ಆಶೀರ್ವಾದದ ತುಣುಕು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದೆ.

ನಮ್ಮ ಬೇಟಿ ಪ್ರಧಾನಿಯಾಗಲಿ ಎಂದ ನಾಗಸಾಧು



**ಹಮಾರ ಭೇಟಿ ಪ್ರಧಾನಮಂತ್ರಿ ಬನೇಗ ಎಂದು ಪ್ರಿಯಾಂಕಗೆ ಆಶೀರ್ವಾದ:** ಮುಂದಿನ ಅಸ್ಸಾಂ ವಿಧಾನಸಭೆಗೆ ಅಭ್ಯರ್ಥಿಗಳ ಆಯ್ಕೆಯ ಸಂಬಂಧ, ಪ್ರಿಯಾಂಕ ಗಾಂಧಿ, ಗುವಹಾಟಿಗೆ ಬಂದಿಳಿದಿದ್ದರು. ಅಸ್ಸಾಂ ಚುನಾವಣೆಗೆ ವೀಕ್ಷಕರಲ್ಲಿ ಒಬ್ಬರಾದ ಡಿಕೆ ಶಿವಕುಮಾರ್ ಜೊತೆಗೆ, ಪ್ರಿಯಾಂಕ ಗಾಂಧಿ, ಕಾಮಾಕ್ಯ ದೇವಾಲಯಕ್ಕೆ ಹೋಗಿದ್ದರು. ಆ ವೇಳೆ, ನಾಗಸಾಧುವೊಬ್ಬರು ಪ್ರಿಯಾಂಕ ಅವರ ತಲೆಮೇಲೆ ಕೈಯಿಟ್ಟು, ಹಮಾರಾ ಬೇಟಿ ಪ್ರಧಾನಮಂತ್ರಿ ಬನೇಗಾ' (ನಮ್ಮ ಮಗಳು ಪ್ರಧಾನಮಂತ್ರಿ ಆಗುತ್ತಾಳೆ) ಎಂದು ಆಶೀರ್ವಾದ ಮಾಡಿದರು.

- ಪ್ರಿಯಾಂಕಾ ಗಾಂಧಿ ಅಸ್ಸಾಂ ಭೇಟಿ: ವೈರಲ್ ಆದ ನಾಗಸಾಧು ಅಘೋರಿ ಮಾಡಿದ ಆಶೀರ್ವಾದ
- ಕಾಮಾಕ್ಯ ಶಕ್ತಿಪೀಠದಲ್ಲಿ ತಲೆಮೇಲೆ ಕೈಯಿಟ್ಟು ಪ್ರಿಯಾಂಕಗೆ ಪ್ರಧಾನಿಯಾಗುತ್ತಾಳೆ ಎನ್ನುವ ಭವಿಷ್ಯ
- ಪ್ರಿಯಾಂಕ ಗಾಂಧಿ ವಾದ್ರಾ, ಅಸ್ಸಾಂ ಪ್ರವಾಸದ ವೇಳೆ, ಕಾಮ್ಯಾಕ ಶಕ್ತಿಪೀಠದಲ್ಲಿ ಪೂಜೆ ಹವನ

**ಮುಂಬರುವ ಅಸ್ಸಾಂ ವಿಧಾನಸಭಾ ಚುನಾವಣೆ 2026:** 2026ರ ಅಸ್ಸಾಂ ಅಸೆಂಬ್ಲಿ ಚುನಾವಣೆಯ ಸಂಬಂಧ, ಕಾಂಗ್ರೆಸ್ ಪದಾಧಿಕಾರಿಗಳು ಹಾಗೂ ಬ್ಲಾಕ್ ಅಧ್ಯಕ್ಷರ ಸಮಾವೇಶದಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ, ಕೆಪಿಸಿಸಿ ಅಧ್ಯಕ್ಷ ಮತ್ತು ಕರ್ನಾಟಕ ಡಿಸಿಎಂ ಡಿ ಕೆ ಶಿವಕುಮಾರ್, ಅಸ್ಸಾಂ ಪಿಸಿಸಿ ಅಧ್ಯಕ್ಷ ಗೌರವ್ ಗೋಗಯ್, ಛತ್ತೀಸಗಡ ಮಾಜಿ ಸಿಎಂ ಭೂಪೇಶ್ ಬಘೇಲ್ ಮುಂತಾದವರು ಭಾಗವಹಿಸಿದ್ದರು. ಸತತವಾಗಿ, ಎರಡು ಬಾರಿ ಅಧಿಕಾರದಲ್ಲಿರುವ ಬಿಜೆಪಿಯನ್ನು, ಈ ಬಾರಿ ಸೋಲಿಸಲೇಬೇಕು ಎಂದು ಪ್ರಿಯಾಂಕ ಗಾಂಧಿ, ರಣತಂತ್ರವನ್ನು ರೂಪಿಸುತ್ತಿದ್ದಾರೆ ಎಂದು ಹೇಳಲಾಗುತ್ತಿದೆ. ತಾಯಿ ಕಾಮಾಕ್ಯಳ ಸನ್ನಿಧಿಯಲ್ಲಿ ಪ್ರಾರ್ಥನೆಯನ್ನು ಸಲ್ಲಿಸಿದ್ದು ನನಗೆ ನೆಮ್ಮದಿಯನ್ನು ನೀಡಿದೆ. ಅಸ್ಸಾಂ ಜನರ ಪ್ರೀತಿ ಮತ್ತು ಹಾರೈಕೆ ನಮ್ಮ ಮೇಲಿದೆ ಎಂದು ಪ್ರಿಯಾಂಕ ಗಾಂಧಿ ಹೇಳಿದ್ದಾರೆ.

### ಕಾಂಗ್ರೆಸ್ ಕಾಯಕರ್ತರಿಗೆ ಖುಷಿ ತಂದ ನಾಗಸಾಧು ಆಶೀರ್ವಾದ

**ನಾಗಸಾಧು ಮಾಡಿದ ಆಶೀರ್ವಾದ, ಖುದ್ದು ಪ್ರಿಯಾಂಕ ಗಾಂಧಿಗೆ ಆಶ್ಚರ್ಯವನ್ನು ತಂದಿತು. ಯಾಕೆಂದರೆ, ಸಾಧು ಭವಿಷ್ಯವನ್ನು ನಂಬಲು ಅಸಾಧ್ಯ ಎನ್ನುವ ರೀತಿಯಲ್ಲಿ ಪ್ರಿಯಾಂಕ, ಕಿರುನಗೆಯನ್ನು ಬೀರಿದರು. ಸಾಧು ಪ್ರಧಾನಮಂತ್ರಿ ಆಗುತ್ತಾಳೆ ಎಂದು ಭವಿಷ್ಯವನ್ನು ನುಡಿದಾಗ, ಅಲ್ಲಿದ್ದ ಕಾಂಗ್ರೆಸ್ ಕಾರ್ಯಕರ್ತರು ಖುಷಿಯಿಂದ ಚಪ್ಪಾಳೆಯನ್ನು ಹೊಡೆದರು. ಅಲ್ಲಿಂದ, ಪ್ರಿಯಾಂಕ, ಗುವಹಾಟಿಯ ಕಾಂಗ್ರೆಸ್ ಕಚೇರಿ ರಾಜೀವ್ ಭವನಕ್ಕೆ ತೆರಳಿದರು. ನಾಗಸಾಧು ಮಾಡಿದ ಈ ಆಶೀರ್ವಾದ, ಕಾಂಗ್ರೆಸ್ ಕಾರ್ಯಕರ್ತರಿಗೆ ಹುರುಪನ್ನು ನೀಡಿತು.**

## ಮಿನಿ ನ್ಯೂಸ್

### 3 ವರ್ಷದ ಬಾಲಕಿ ಮೇಲೆ ಅತ್ಯಾಚಾರ ನಡೆಸಿ ಕೊಂದ ಪಾಪಿ

**ಗುರುಗ್ರಾಮ:** ನೆರೆಮನೆಯ ಕಾಮುಕನೊಬ್ಬ ಪಕ್ಕದ ಮನೆಯ ಮೂರು ವರ್ಷದ ಮಗುವಿನ ಮೇಲೆ ಅತ್ಯಾಚಾರ ನಡೆಸಿ, ನಂತರ ಕೊಲೆ ಮಾಡಿ ಶವವನ್ನು ಹೂತು ಹಾಕಿರುವ ಘಟನೆ ಗುರುಗ್ರಾಮದಲ್ಲಿ ನಡೆದಿದೆ.

ಸೆಕ್ಟರ್ 37 ರ ಕೈಗಾರಿಕಾ ಪ್ರದೇಶದ ಬಳಿಯ ಖಾಲಿ ಜಾಗದಲ್ಲಿರುವ ಆಳವಿಲ್ಲದ ಗುಂಡಿಯಲ್ಲಿ ಮೂರು ,ವರ್ಷದ ಬಾಲಕಿಯ ಮೇಲೆ ಅತ್ಯಾಚಾರ, ಕೊಂದು ಹೂತುಹಾಕಿದ ಆರೋಪದ ಮೇಲೆ 24 ವರ್ಷದ ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬಿಹಾರದ ಸುಪೌಲ್ ಜಿಲ್ಲೆಯವನಾದ ಶಂಕಿತನು ಉತ್ಪಾದನಾ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದನು ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಬೆಳಗಿನ ಜಾವ 2 ಗಂಟೆ ಸುಮಾರಿಗೆ ಬಾಲಕಿಯ ಶವ ಪತ್ತೆಯಾಗಿದೆ. ನಿನ್ನೆ ಸಂಜೆ 7 ರಿಂದ 7.15 ರ ನಡುವೆ ಆರೋಪಿ ಬಾಲಕಿಯನ್ನು ಕರೆದುಕೊಂಡು ಹೋಗಿದ್ದಾನೆ. ಬಾಲಕಿ ತನ್ನ ಹೆತ್ತವರೊಂದಿಗೆ ವಾಸಿಸುತ್ತಿದ್ದ ಕಟ್ಟಡದಲ್ಲಿ ಅವನು ವಾಸಿಸುತ್ತಿದ್ದನು ಮತ್ತು ಆಗಾಗ್ಗೆ ಅವಳೊಂದಿಗೆ ಆಟವಾಡುತ್ತಿದ್ದನು ಎಂದು ಅವರು ಹೇಳಿದರು.

### ಪಟಾಕಿ ಸ್ಫೋಟಕ್ಕೆ ತಾಯಿ, ಮಗು ಬಲಿ

**ಭುವನೇಶ್ವರ:** ಒಡಿಶಾದ ಕಟಕ್ ಬಳಿ ನಿನ್ನೆ ಸಂಜೆ ಸಂಭವಿಸಿದ ಪಟಾಕಿ ಸ್ಫೋಟದಲ್ಲಿ ಒಬ್ಬ ಮಹಿಳೆ ಮತ್ತು ಅವರ ಮೂರು ವರ್ಷದ ಮಗಳು ಸಾವನ್ನಪ್ಪಿದ್ದು, ಕುಟುಂಬದ ಮತ್ತೊಬ್ಬ ಸದಸ್ಯ ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಗತ್ಪುರ ಪೊಲೀಸ್ ಠಾಣಾ ವ್ಯಾಪ್ತಿಯ ಮಹಾಜನ್ಪುರ ಗ್ರಾಮದಲ್ಲಿ ಈ ಘಟನೆ ನಡೆದಿದೆ.ಮೃತರನ್ನು ಸುಧನ್ಸುಬಾಲಾ ನಾಯಕ್ ಮತ್ತು ಅವರ ಮಗಳು ಸ್ತಿತಪ್ರಂಗ್ಯಾ ನಾಯಕ್ ಎಂದು ಗುರುತಿಸಲಾಗಿದೆ. ಸ್ಫೋಟದಲ್ಲಿ ಭಾರತಿ ನಾಯಕ್ ಗಂಭೀರ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮೂವರು ಗಾಯಾಳುಗಳನ್ನು ಎಸ್‌ಸಿಬಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗೆ ಸಾಗಿಸಲಾಯಿತು, ಅಲ್ಲಿ ಮಹಿಳೆ ಮತ್ತು ಅವರ ಮಗು ಚಿಕಿತ್ಸೆಯ ಸಮಯದಲ್ಲಿ ಸಾವನ್ನಪ್ಪಿದರು. ಗಾಯಗೊಂಡ ಮತ್ತೊಬ್ಬ ಮಹಿಳೆಯನ್ನು ವೆಂಟಿಲೇಟರ್‌ನಲ್ಲಿ ಇರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

### ಫರಿದಾಬಾದ್ ಕಾರ್ಖಾನೆ ಬೆಂಕಿ ಅವಘಡಕ್ಕೆ ಬಲಿಯಾದವರ ಸಂಖ್ಯೆ 39ಕ್ಕೆ ಏರಿಕೆ

**ಫರಿದಾಬಾದ್:** ಇಲ್ಲಿನ ಮುಜೇಸರ್ ಪ್ರದೇಶದಲ್ಲಿ ಸಂಭವಿಸಿದ ಕಾರ್ಖಾನೆಯ ಬೆಂಕಿ ಅವಘಡದಲ್ಲಿ ಸಾವನ್ನಪ್ಪಿದವರ ಸಂಖ್ಯೆ 39 ಕ್ಕೆ ಏರಿದ್ದು, ಕಾರ್ಖಾನೆಯ ಮಾಲೀಕರ ಮಗ ಸೇರಿದಂತೆ ಇಬ್ಬರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಕಾರ್ಖಾನೆ ಮಾಲೀಕ ವಿಜಯ್ ಮೋಂಗಾ ಅವರ ಪುತ್ರ ಅಭಿಷೇಕ್ ಮೋಂಗಾ (37) ಮತ್ತು ಇಲ್ಲಿನ ಸಂಜಯ್ ಕಾಲೋನಿಯ ನಿವಾಸಿ ಹಾಗೂ ಕಾರ್ಖಾನೆಯ ಕಾರ್ಮಿಕ ಪ್ರದೀಪ್ ಕುಮಾರ್ (21) ತಡರಾತ್ರಿ ದೆಹಲಿಯ ಸಫ್ದರ್ಜಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆಯ ಸಮಯದಲ್ಲಿ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.


ಕಲ್ಕಾಜಿ ಲೂಬ್ರಿಕಂಟ್ಸ್ ಮತ್ತು ಶಿವ್ ಸ್ಟೀಲ್ ಕಂಪನಿ ಕಾರ್ಯಾಗಾರದಲ್ಲಿ ರಾಸಾಯನಿಕಗಳಿಂದ ತುಂಬಿದ ಡ್ರಮ್‌ನಲ್ಲಿ ಕಿಡಿ ಬಿದ್ದು ಸರಣಿ ಸ್ಫೋಟ ಸಂಭವಿಸಿದ ಬೆಂಕಿಯಲ್ಲಿ ಇಬ್ಬರೂ ಸುಮಾರು ಶೇ. 50 ರಷ್ಟು ಸುಟ್ಟ ಗಾಯಗಳಿಗೆ ಒಳಗಾಗಿದ್ದರು. ತಂದೆಯನ್ನು ಉಳಿಸಲು ಕಾರ್ಖಾನೆಯೊಳಗೆ ಹೋದಾಗ ಅಭಿಷೇಕ್ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.ಘಟನೆಗೆ ಸಂಬಂಧಿಸಿದಂತೆ ಪ್ರಕರಣ ದಾಖಲಾಗಿರುವ ವಿಜಯ್ ಮೋಂಗಾ ಕೂಡ ಬೆಂಕಿಯಲ್ಲಿ ಗಾಯಗೊಂಡಿದ್ದು, ದೆಹಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

### ಪೊಲೀಸ್ ಸಿಬ್ಬಂದಿಯ ಚಿನ್ನದ ಸರ ಎಗರಿಸಿದ್ದ ಸರಗಳ್ಳ ಫಿರೋಜ್ ಖಾನ್ ಅರೆಸ್ಟ್

**ಥಾಣೆ:** ಪೊಲೀಸ್ ಸಿಬ್ಬಂದಿ ಕೊರಳಲಿದ್ದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದ ಕಳ್ಳನನ್ನು ಮಹಾರಾಷ್ಟ್ರದ ಥಾಣೆ ಪೊಲೀಸರು ಬಂಧಿಸಿದ್ದಾರೆ. ಥಾಣೆಯ ಮುಂಬ್ರಾ ಪ್ರದೇಶದ ನಿವಾಸಿ ಸೈಫ್ ಫಿರೋಜ್ ಖಾನ್ (23) ಬಂಧಿತ ಚೋರನಾಗಿದ್ದಾನೆ. ಕಳೆದ ಜ.31ರ ರಾತ್ರಿ ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ಕಲ್ವಾ ಪ್ರದೇಶದಲ್ಲಿ ನಡೆದುಕೊಂಡು ಹೋಗುತ್ತಿದ್ದ ಪೊಲೀಸ್ ಸಿಬ್ಬಂದಿಯ ಕುತ್ತಿಗೆಯಿಂದ ಚಿನ್ನದ ಸರವನ್ನು ಕಸಿಯಲಾಗಿತ್ತು. ಘಟನೆ ನಡೆದು ಆರು ದಿನಗಳ ನಂತರ, ಈ ಪ್ರದೇಶದಲ್ಲಿ ವೃದ್ಧರೊಬ್ಬರನ್ನು ಇದೇ ರೀತಿ ಗುರಿಯಾಗಿಸಿ ಚಿನ್ನದ ಸರ ಸುಲಿಗೆ ಮಾಡಲಾಗಿತ್ತು ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ. ಪ್ರಕರಣ ದಾಖಲಿಸಿ ತನಿಖೆ ವೇಳೆ ಸಿಸಿಟಿವಿ ದೃಶ್ಯಾವಳಿಗಳು ಮತ್ತು ತಾಂತ್ರಿಕ ಕಣ್ಗಾವಲಿನ ಆಧಾರದ ಮೇಲೆ, ಆರೋಪಿ ಸೈಫ್ ಫಿರೋಜ್ ಖಾನ್‌ನನ್ನು ಬಂಧಿಸಲಾಗಿದೆ. ಸುಲಿಗೆ ಮಾಡಿದ್ದ ಚಿನ್ನದ ಸರವನ್ನು ವಶಪಡಿಸಿಕೊಳ್ಳಲಾಗಿದ್ದು, ಆತನ ಸಹಚರನನ್ನು ನೌಶಾದ್ ಖಾನ್ ತಲೆಮರೆಸಿಕೊಂಡಿದ್ದು ಆತನ ಪತ್ತೆ ಕಾರ್ಯ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.

### ಮೋಹನ್ ಭಾಗವತ್ ಪ್ರಯಾಣಿಸುತ್ತಿದ್ದ ವಂದೇ ಭಾರತ್ ರೈಲಿಗೆ ಕಲ್ಲು ತೂರಾಟ

**ಲಕ್ನೋ :** ಉತ್ತರ ಪ್ರದೇಶದ ಕೌಡಾ ಗ್ರಾಮದ ಬಳಿ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಪ್ರಯಾಣಿಸುತ್ತಿದ್ದ ವಂದೇ ಭಾರತ್ ರೈಲಿಗೆ ಕಲ್ಲು ತೂರಾಟ ನಡೆಸಿರುವ ಘಟನೆ ನಡೆದಿದೆ.



ರೈಲು ದೆಹಲಿ ಕಡೆಗೆ ಹೋಗುತ್ತಿದ್ದಾಗ ಮಧ್ಯಾಹ್ನ 3:20 ರ ಸುಮಾರಿಗೆ ಈ ಘಟನೆ ನಡೆದಿದೆ. ರೈಲ್ವೆ ಮೂಲಗಳ ಪ್ರಕಾರ, ಯಾರಿಗೂ ಗಾಯಗಳಾಗಿಲ್ಲ, ಕಲ್ಲು ತೂರಾಟದ ನಂತರ ರೈಲಿನ ಕಿಟಕಿಯೊಂದು ಬಿರುಕು ಬಿಟ್ಟಿದೆ. ಯಾವುದೇ ಗಾಯಗಳಾಗಿಲ್ಲ ಎಂದು ಹೇಳಿದೆ. 8 ರಿಂದ 13 ವರ್ಷದೊಳಗಿನ ಮಕ್ಕಳು ರೈಲ್ವೆ ಹಳಿಗಳ ಬಳಿ ಕ್ರಿಕೆಟ್ ಆಡುತ್ತಿದ್ದರು ಮತ್ತು ಹಾದುಹೋಗುವ ರೈಲಿನ ಮೇಲೆ ಕಲ್ಲು ಎಸೆದಿರಬಹುದು ಎಂದು ಪ್ರಾಥಮಿಕ ಮಾಹಿತಿ ತಿಳಿಸಿದೆ. ಇದು ಕಿಡಿಗೇಡಿಗಳ ಕೃತ್ಯವಾ ಅಥವಾ ಕ್ರಿಕೆಟ್ ಆಡುತ್ತಿದ್ದ ಮಕ್ಕಳು ಎಸೆದಿರುವ ಕಲ್ಲಾ ಎಂದು ತನಿಖೆಯಲ್ಲಿ ಗೊತ್ತಾಗಲಿದೆ.

**ಮೀರತ್ ರೈಲು ನಿಲ್ದಾಣದಲ್ಲಿ ಭದ್ರತೆ:** ಪೊಲೀಸರು ಈ ಬಗ್ಗೆ ತನಿಖೆ ಆರಂಭಿಸಿದ್ದಾರೆ. ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ ಎಂದಿದ್ದಾರೆ. ಘಟನೆಯ ಹಿಂದಿನ ನಿಖರವಾದ ಸಂದರ್ಭಗಳನ್ನು ಕಂಡುಹಿಡಿಯಲು ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಹೇಳಿದರು.

ಘಟನೆಯ ನಂತರ, ಮೀರತ್ ರೈಲು ನಿಲ್ದಾಣದಲ್ಲಿ ಭದ್ರತೆಯನ್ನು ಗಮನಾರ್ಹವಾಗಿ ಹೆಚ್ಚಿಸಲಾಯಿತು. ಮೋಹನ್ ಭಾಗವತ್ ತಡರಾತ್ರಿ ಸುರಕ್ಷಿತವಾಗಿ ಮೀರತ್ ತಲುಪಿದರು. ಭಾರೀ ರಕ್ಷಣೆಯಲ್ಲಿ ಶತಾಬ್ದಿ ನಗರದ ಮಾಧವ್ ಕುಂಜ್‌ಗೆ ಕರೆದೊಯ್ಯಲಾಯಿತು. ಅವರು ಎರಡು ದಿನಗಳ ಸಂವಾದ ಕಾರ್ಯಕ್ರಮಕ್ಕಾಗಿ ನಗರದಲ್ಲಿದ್ದಾರೆ. ಅಲ್ಲಿ ಅವರು ಕ್ರೀಡಾಪಟುಗಳು ಮತ್ತು ಪ್ರಮುಖ ನಾಗರಿಕರೊಂದಿಗೆ ಸಂವಹನ ನಡೆಸಲಿದ್ದಾರೆ.

# ಹೆಸರು ಬದಲಾವಣೆಗೆ ಒಪ್ಪಿದ ನಿರ್ಮಾಪಕ

**ಹೊಸ ಟೈಟಲ್ ಬಗ್ಗೆ ನೀರಜ್ ಮಾತು**

ನೀರಜ್ ಪಾಂಡೆ ನಿರ್ದೇಶನದ 'ಘುಷ್ಖೋರ್ ಪಂಡತ್' ಚಿತ್ರದ ಶೀರ್ಷಿಕೆ ವಿವಾದಕ್ಕೆ ಸುಪ್ರೀಂ ಕೋರ್ಟ್‌ನಲ್ಲಿ ತೆರೆ ಬಿದ್ದಿದೆ. ಬ್ರಾಹ್ಮಣ ಸಮುದಾಯದ ಆಕ್ಷೇಪಣೆಯಿಂದಾಗಿ, ನಿರ್ಮಾಪಕ ಪಾಂಡೆ ಚಿತ್ರದ ಶೀರ್ಷಿಕೆ ಮತ್ತು ಎಲ್ಲಾ ಜಾಹೀರಾತುಗಳನ್ನು ಹಿಂಪಡೆಯಲು ಒಪ್ಪಿಕೊಂಡಿದ್ದಾರೆ. ಚಿತ್ರಕ್ಕೆ ಹೊಸ ಹೆಸರಿಡಲಾಗುವುದು ಎಂದು ನ್ಯಾಯಾಲಯಕ್ಕೆ ತಿಳಿಸಿದ್ದಾರೆ. ಬಾಲಿವುಡ್ ನಿರ್ಮಾಪಕ ನೀರಜ್ ಪಾಂಡೆ ಅವರ 'ಘುಷ್ಖೋರ್ ಪಂಡತ್' ಚಿತ್ರದ ಸುತ್ತಲಿನ ವಿವಾದವು ಅಂತ್ಯಗೊಳ್ಳುವ ಹಂತಕ್ಕೆ ಬಂದಿದೆ. ಮನೋಜ್ ಬಾಜಪೇಯಿ ಅವರ ಮುಂಬರುವ ಚಿತ್ರದ ಕುರಿತು ವಿವಿಧ ವರದಿಗಳು ನಿರಂತರವಾಗಿ ಹೊರಬರುತ್ತಿವೆ. ಕಳೆದ ಕೆಲವು ದಿನಗಳಿಂದ, ಬ್ರಾಹ್ಮಣ ಸಮುದಾಯವು ಚಿತ್ರದ ಶೀರ್ಷಿಕೆಯ ವಿರುದ್ಧ ಪ್ರತಿಭಟನೆ ನಡೆಸುತ್ತಿದೆ. ಎಫ್‌ಐಆರ್ ಕೂಡ ದಾಖಲಾಗಿದೆ. ಭಾರತದ ಬ್ರಾಹ್ಮಣ ಸಮಾಜದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಅತುಲ್ ಮಿಶ್ರಾ ಅವರು ಚಿತ್ರದ ಬಿಡುಗಡೆಯನ್ನು ನಿಷೇಧಿಸುವಂತೆ ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದರು.

ಈಗ, ನೀರಜ್ ನ್ಯಾಯಾಲಯದಲ್ಲಿ ಈ ಚಿತ್ರಕ್ಕೆ ಮರುನಾಮಕರಣ ಮಾಡುವುದಾಗಿ ಹೇಳಿದ್ದು, ಇದು ಹಿಂದಿನ ಚಿತ್ರಕ್ಕಿಂತ ಸಂಪೂರ್ಣವಾಗಿ ಭಿನ್ನವಾಗಿರುತ್ತದೆ. 'ಘುಷ್ಖೋರ್ ಪಂಡತ್' ಶೀರ್ಷಿಕೆ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲಾ ಜಾಹೀರಾತುಗಳನ್ನು ಹಿಂತೆಗೆದುಕೊಳ್ಳುವುದಾಗಿ ಚಲನಚಿತ್ರ ನಿರ್ಮಾಪಕ ನೀರಜ್ ಪಾಂಡೆ ಘೋಷಿಸಿದರು. ಇದರ ನಂತರ, ನ್ಯಾಯಾಲಯವು ಗುರುವಾರ ಚಿತ್ರದ ವಿರುದ್ಧ ಸಲ್ಲಿಸಲಾದ ಅರ್ಜಿಯನ್ನು ವಜಾಗೊಳಿಸಿತು.





# ಪತಿ ಗೋವಿಂದ ಕ್ಷಮಿಸಲು ಮುಂದಾದ ಪತ್ನಿ




40 ವರ್ಷಗಳ ಸಂಬಂಧ ರಾತ್ರೋರಾತ್ರಿ ಮುರಿಯುವುದಿಲ್ಲ, ಗೋವಿಂದ ಬದಲಾದರೆ ಕ್ಷಮಿಸುವುದಾಗಿ ಹೇಳಿದ್ದಾರೆ. ನನ್ನ ಹಕ್ಕುಗಳಿಗಾಗಿ ಹೋರಾಡುತ್ತೇನೆ, ಇನ್ನು ಮುಂದೆ ಒತ್ತಡ ಸಹಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಕಳೆದ ಕೆಲವು ತಿಂಗಳುಗಳಿಂದ ಅವರ ಕೌಟುಂಬಿಕ ವಿವಾದಗಳು ಮುನ್ನೆಲೆಗೆ ಬಂದಿವೆ. ಗೋವಿಂದ ವಿವಾಹೇತರ ಸಂಬಂಧ ಹೊಂದಿದ್ದಾರೆಂದು ಸುನೀತಾ ಆರೋಪಿಸಿದ್ದರು. ಗೋವಿಂದ ತಮ್ಮ ಎಲ್ಲಾ ಆರೋಪಗಳನ್ನು ನಿರಾಕರಿಸಿದ್ದರು. ಅದಾದ ನಂತರ, ಸುನೀತಾ ಮತ್ತೊಮ್ಮೆ ಗೋವಿಂದನ ಬಗ್ಗೆ ತಮ್ಮ ಭಾವನೆಗಳನ್ನು ಬಹಿರಂಗವಾಗಿ ವ್ಯಕ್ತಪಡಿಸಿರುವ ವ್ಲಾಗ್ ಅನ್ನು ಪೋಸ್ಟ್ ಮಾಡಿದ್ದಾರೆ. ಈ ವೇಳೆ ಕ್ಷಮಿಸೋದಾಗಿ ಹೇಳಿದ್ದಾರೆ. 'ನನ್ನ ಮುಗ್ಧತೆಯ ಲಾಭವನ್ನು ಅನೇಕರು ಪಡೆದುಕೊಂಡಿದ್ದಾರೆ. ನಾನು ಬಹಳಷ್ಟು ಸಹಿಸಿಕೊಂಡಿದ್ದೇನೆ. ಆದರೆ ನಾನು ಇನ್ನು ಮುಂದೆ ಅದನ್ನು ಸಹಿಸುವುದಿಲ್ಲ.

ನಾನು ಈಗ ನನ್ನದೇ ಆದ ಐಡೆಂಟಿಟಿ ಮಾಡಿಕೊಂಡಿದ್ದೇನೆ. 40 ವರ್ಷಗಳ ಸಂಬಂಧವು ರಾತ್ರೋರಾತ್ರಿ ಮುರಿಯುವುದಿಲ್ಲ. ಆದ್ದರಿಂದ ನಾನು ಸ್ವಲ್ಪ ಭಾವನಾತ್ಮಕವಾಗಿರುವುದು ಹೌದು. ಆದರೆ ಈಗ ನನ್ನ ಮನಸ್ಸು ಬಲವಾಗಿದೆ' ಎಂದು ಸುನೀತಾ ಹೇಳಿದರು. 'ನಾನು ಯಾವಾಗಲೂ ಸತ್ಯವನ್ನೇ ಹೇಳುತ್ತೇನೆ. ನಾನು ಪ್ರತಿ ಮಹಿಳೆಗೂ ತನ್ನ ಹಕ್ಕುಗಳಿಗಾಗಿ ಹೋರಾಡಬೇಕೆಂದು ಹೇಳುತ್ತೇನೆ. ನನ್ನ ಅತ್ತೆ-ಮಾವಂದಿರು ಇದ್ದಾಗ, ನಾನು ಸುಮ್ಮನಿರುತ್ತಿದ್ದೆ. ಏಕೆಂದರೆ ನಾನು ಅವರನ್ನು ತುಂಬಾ ಗೌರವಿಸುತ್ತಿದ್ದೆ. ಆದರೆ ಈಗ ಗೋವಿಂದ ಮತ್ತು ನಾನು ಸ್ನೇಹಿತ ಆಗಿರುವುದರಿಂದ, ನಾನು ಯಾಕೆ ಸುಮ್ಮನಿರಬೇಕು ಮತ್ತು ಅವರ ಮಾತುಗಳನ್ನು ಕೇಳಬೇಕು ಅಥವಾ ಭಯಪಡಬೇಕು' ಎಂದು ಪ್ರಶ್ನಿಸಿದ್ದಾರೆ. 'ಗೋವಿಂದ ಬದಲಾದರೆ ಮತ್ತು ನನ್ನ ನಿಯಮಗಳ ಪ್ರಕಾರ ಬದುಕಲು ಪ್ರಾರಂಭಿಸಿದರೆ, ನಾನು ಅವನನ್ನು ಕ್ಷಮಿಸುತ್ತೇನೆ. ಪ್ರತಿದಿನ ನನ್ನ ಬಗ್ಗೆ ಸುದ್ದಿಗಳಲ್ಲಿ ಏನಿದೆ ಎಂಬುದರ ಬಗ್ಗೆ ನಾನು ಗಮನ ಹರಿಸುವುದಿಲ್ಲ. ನಾನು ಇಷ್ಟೊಂದು ಒತ್ತಡವನ್ನು ಸಹಿಸಿಕೊಳ್ಳುವ ವಯಸ್ಸಿನಲ್ಲಿಲ್ಲ. ಈಗ ನಿಮಗೆ ನಿಮ್ಮ ಗಂಡ ಮತ್ತು ಮಕ್ಕಳ ಬೆಂಬಲ ಬೇಕು, ಒತ್ತಡವಲ್ಲ' ಎಂದಿದ್ದಾರೆ. ಈ ವಿಷಯದ ಬಗ್ಗೆ ಗೋವಿಂದ ಅವರಿಂದ ಸ್ಪಷ್ಟ ಉತ್ತರ ಬಂದಿಲ್ಲ ಎಂದು ಸುನೀತಾ ದೂರಿದ್ದಾರೆ. 'ಅವನು ನಗುವ ಮೂಲಕ ಈ ವಿಷಯವನ್ನು ತಪ್ಪಿಸುತ್ತಾನೆ. ಅವನ ಉತ್ತರಗಳು ನಮಗೆ ಅರ್ಥವಾಗುವುದಿಲ್ಲ.

ಗೋವಿಂದನಿಗೆ ತನ್ನ ತಾಯಿಯ ಬಗ್ಗೆ ಭಯವಿತ್ತು. ಆಕೆಯ ಮರಣದ ನಂತರ, ಅವನು ನಿರಾತಂಕನಾಗಿದ್ದಾನೆ. ಈಗ ಅವನು ಯಾರಿಗೂ ಹೆದರುವುದಿಲ್ಲ ಮತ್ತು ಅವನ ಮನಸ್ಸಿಗೆ ಬಂದಂತೆ ವರ್ತಿಸುತ್ತಾನೆ. ಅವರ ಸಹವಾಸ ಒಳ್ಳೆಯದಲ್ಲ. ಅವನು ಯಾರೊಂದಿಗಾದರೂ ಸಂಬಂಧ ಹೊಂದಿದ್ದರೆ ಏನಾಗುತ್ತದೆ ಎಂದು ನಾನು ಮೊದಲೇ ಹೇಳಿದ್ದೆ ಆದರೆ ಪ್ರತಿಯೊಂದಕ್ಕೂ ಅದರ ವಯಸ್ಸು ಇದೆ.

# ಊಟ ಸರಿ ಇಲ್ದಿದ್ರೆ ಏಕೆ ಬರ್ತೀರಿ

ಸತೀಶ್ ನೀನಾಸಂ ನಟನೆಯ 'ದಿ ರೈಸ್ ಆಫ್ ಅಶೋಕ' ಸಿನಿಮಾದ ಟ್ರೇಲರ್ ಲಾಂಚ್ ಈವೆಂಟ್ ಇತ್ತೀಚೆಗೆ ನಡೆದಿದೆ. ಇದರಲ್ಲಿ ಮಾತನಾಡಿದ ರವಿಚಂದ್ರನ್ ಅವರು, 'ಜನರು ಹೆಚ್ಚೆಚ್ಚು ಥಿಯೇಟರ್‌ಗೆ ಹೋಗಬೇಕು. 100 ರೂಪಾಯಿ ಕೊಟ್ಟು ಸಿನಿಮಾ ನೋಡಲ್ವಾ ಸಿನಿಮಾ ಚೆನ್ನಾಗಿಲ್ಲ ಎಂದರೂ 100 ರೂಪಾಯಿ ಕಳೆಯಿರಿ ತೊಂದರೆ ಇಲ್ಲ. ಒಂದಷ್ಟು ಸಿನಿಮಾ ಗೆಲ್ಲಿಸಿ, ಗಂಟೇನು ಹೋಗಲ್ಲ' ಎಂದು ಅವರು ಹೇಳಿದ್ದರು.ರವಿಚಂದ್ರನ್ ಹೇಳಿಕೆ ಬಗ್ಗೆ ಚರ್ಚೆ ಶುರುವಾಗಿದೆ. ಯಾವುದೇ ಥಿಯೇಟರ್‌ನಲ್ಲಿ ಈಗ 100 ರೂಪಾಯಿಗೆ ಸಿನಿಮಾ ಟಿಕೆಟ್ ಸಿಗೋದಿಲ್ಲ. 150-200 ರೂಪಾಯಿ ಟಿಕೆಟ್ ದರ ನಿಗದಿ ಮಾಡಲಾಗುತ್ತಿದೆ. ಕುಟುಂಬ ಇದ್ದಾಗ ಒಬ್ಬನೇ ಸಿನಿಮಾಗೆ ತೆರಳೋಕೆ ಸಾಧ್ಯವಿಲ್ಲ. ಇಡೀ ಕುಟುಂಬ ತೆರಳಿತು ಎಂದರೆ ಏನಿಲ್ಲ ಎಂದರೂ ಸಾವಿರ ರೂಪಾಯಿ ಖರ್ಚಾಗುತ್ತದೆ. ಜೊತೆಗೆ ಒಂದಷ್ಟು ಸಮಯ ವ್ಯರ್ಥವಾಗುತ್ತದೆ. ಇಷ್ಟೆಲ್ಲ ಮಾಡಿ ಮನರಂಜನೆ ಸಿಕ್ಕರೆ ಓಕೆ. ಸಿನಿಮಾ ಚೆನ್ನಾಗಿಲ್ಲದೆ, ಮತ್ತಷ್ಟು ಫ್ರಸ್ಟ್ರೇಟ್ ಆದರೆ ಕೊಟ್ಟ ಹಣ ವ್ಯರ್ಥ. ಇನ್ನು, ಕನ್ನಡದಲ್ಲಿ ವರ್ಷಕ್ಕೆ 200 ಸಿನಿಮಾಗಳು ಬರುತ್ತವೆ. 200 ಚಿತ್ರಗಳ ಪೈಕಿ 100 ಸಿನಿಮಾ ಗೆಲ್ಲಿಸ್ತೀನಿ ಎಂದು ಹೋದರು, 1 ಲಕ್ಷ ರೂಪಾಯಿ ಅದಕ್ಕೆ ಖರ್ಚಾಗುತ್ತದೆ. ಮಧ್ಯಮ ವರ್ಗದವರ ದುಡಿಮೆಯೇ ಒಂದು ಒಳ್ಳೆಯ ಸಿನಿಮಾ ಬಂದಾಗ ಜನರು ಅದನ್ನು ಗೆಲ್ಲಿಸಿದ್ದಾರೆ. 'ಸು ಫ್ರಮ್ ಸೋ' ಇದಕ್ಕೆ ಉತ್ತಮ ಉದಾಹರಣೆ. 'ಹೋಟೆಲಿನಲ್ಲಿ ಊಟ ಚೆನ್ನಾಗಿಲ್ಲ, ಹೋಟೆಲ್ ಮಾಲೀಕರ ಧೋರಣೆ ಸರಿಯಿಲ್ಲ ಎಂದರೆ ಎಷ್ಟೇ ಹೊಟ್ಟೆ ಹಸಿಸಿದಿದ್ದರೂ ಜನ ಅಲ್ಲಿಗೆ ಹೋಗುವುದಿಲ್ಲ. ನಮ್ಮ ಅಡುಗೆ ಇರುವುದೇ ಹೀಗೆ ಸುಮ್ಮನೆ ಬಂದು ತಿಂದು ನಮ್ಮನ್ನು ಬೆಂಬಲಿಸಿ ಅಂದರೆ ಯಾರು ತಾನೇ ಬೆಂಬಲಿಸಲು ಸಾಧ್ಯ' ಎಂದು ಅಮರನಾಥ್ ಶಿವಶಂಕರ್ ಎಂಬುವವರು ಪ್ರಶ್ನೆ ಮಾಡಿದ್ದಾರೆ.



# ವಿಜಯ್ ಟಾರ್ಚರ್‌ಗೆ ಸುಸ್ತಾದ ಅನುಶ್ರೀ

ವಿಜಯ್ ರಾಘವೇಂದ್ರ, ಮತ್ತು ನಿರೂಪಕಿ ಅನುಶ್ರೀ ಅವರ ಗೆಳೆತನ ಹಲವು ವರ್ಷಗಳದ್ದು. 'ಸೆಕೆಂಡ್ ಕೇಸ್ ಆಫ್ ಕೊಂಡಾಣ ' ಸಿನೆಮಾ ಪ್ರಚಾರಕ್ಕಾಗಿ ಇವರು ಮಾಡಿದ ಫನ್ ವಿಡಿಯೋ ವೈರಲ್ ಆಗಿದೆ. ವಿಜಯ್‌ಗೆ ಮಾಸ್ ಡೈಲಾಗ್ ಇಲ್ಲ ಎಂಬ ನೆಪದಲ್ಲಿ ಆರಂಭವಾದ ಈ ಸಂಭಾಷಣೆ, ಅನುಶ್ರೀಗೆ ತಮಾಷೆಯ 'ಟಾರ್ಚರ್' ನೀಡುತ್ತದೆ. ಅಂತಿಮವಾಗಿ, 'ಸೆಕೆಂಡ್ ಕೇಸ್ ಆಫ್ ಕೊಂಡಾಣ' ಸಿನೆಮಾವನ್ನು ಪ್ರೇಕ್ಷಕರಿಗೆ ತಲುಪಿಸಲು ಇಬ್ಬರೂ ವಿನಂತಿಸುತ್ತಾರೆ. ವಿಜಯ್ ರಾಘವೇಂದ್ರ, ಹಾಗೂ ಆಯಂಕರ್ ಅನುಶ್ರೀ ಮಧ್ಯೆ ಒಳ್ಳೆಯ ಗೆಳೆತನ ಇದೆ. ವಿಜಯ್ ರಾಘವೇಂದ್ರ ಅವರು 'ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್' ಶೋಗೆ ಜಡ್ಜ್ ಆಗಿದ್ದು, ಅನುಶ್ರೀ ಆ್ಯಂಕರಿಂಗ್ ಮಾಡುತ್ತಿದ್ದಾರೆ. ಸೆಟ್‌ನಲ್ಲಿ ನಡೆದ ಒಂದು ಫನ್ ವಿಡಿಯೋನ ಅನುಶ್ರೀ ಹಂಚಿಕೊಂಡಿದ್ದಾರೆ. ಈ ವಾರ ರಿಲೀಸ್ ಆದ 'ಸೆಕೆಂಡ್ ಕೇಸ್ ಆಫ್ ಕೊಂಡಾಣ ಸಿನಿಮಾದ ಪ್ರಚಾರ ಮಾಡಲು ಈ ವಿಡಿಯೋ ಮಾಡಲಾಗಿದೆ. ವಿಜಯ್ ರಾಘವೇಂದ್ರ ಅವರು 60ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿದ್ದಾರೆ. ಈ ಪೈಕಿ ಕೆಲವು ಹಿಟ್ ಆಗಿವೆ. ಆದರೆ, ಯಾವುದೇ ಸಿನಿಮಾದಲ್ಲಿ ಅವರಿಗೆ ಮಾಸ್ ಡೈಲಾಗ್ ಇಲ್ಲ. ಈ ಮಾಸ್ ಡೈಲಾಗ್ ಅಥವಾ ನೆನಪಿಕೊಳ್ಳುವ ಡೈಲಾಗ್ ಇಲ್ಲ ಎಂಬ ವಿಷಯದೊಂದಿಗೆ ವಿಡಿಯೋ ಆರಂಭ ಆಗುತ್ತದೆ. 'ವಿಜಯ್ ನಿನ್ನ ಸಿನಿಮಾದ ಒಂದೊಳ್ಳೆಯ ಡೈಲಾಗ್ ಹೇಳು' ಎಂದು ಅನುಶ್ರೀ ಕೇಳುತ್ತಾರೆ. ಆದರೆ, ಏನೇ ಮಾಡಿದರೂ ಯಾವ ಸಿನಿಮಾದಲ್ಲೂ ಡೈಲಾಗ್ ಸಿಗಲ್ಲ. ಹಲವು ಸಿನಿಮಾಗಳ ಹೆಸರನ್ನು ಅನುಶ್ರೀ ಹೇಳುತ್ತಾರೆ. ಆದರೆ, ವಿಜಯ್ ರಾಘವೇಂದ್ರ, ಅವರಿಂದ ನಕಾರಾತ್ಮಕ ಉತ್ತರವೇ ಬರುತ್ತದೆ. ಈ ವಿಷಯದಲ್ಲಿ ಅನುಶ್ರೀ ಫ್ರಸ್ಟ್ರೇಟ್ ಆಗುತ್ತಾರೆ. ಅವರಿಗೆ ಟಾರ್ಚರ್ ರೀತಿಯ ಫೀಲ್ ಆಗುತ್ತದೆ. ವಿಜಯ್ 'ಕಳ್ಳ ಮಳ್ಳ ಸುಳ್ಳ' ಸಿನಿಮಾ ಹೆಸರು ಹೇಳುತ್ತಿದ್ದಂತೆ, 'ಆ ಮೂರು ನೀನೇ' ಎನ್ನುತ್ತಾರೆ ಅನುಶ್ರೀ.

# ಯಶ್ ಮುಖ ಮುಚ್ಚಿಕೊಂಡು ಓಡಾಟ

'ಟಾಕ್ಸಿಕ್' ಸಿನಿಮಾ ಟೀಸರ್ ಬಿಡುಗಡೆಯಾಗಿ ಯಶ್ ಅಭಿಮಾನಿಗಳಲ್ಲಿ ಸಂಚಲನ ಮೂಡಿಸಿದೆ. ಟೀಸರ್‌ನಲ್ಲಿ ಯಶ್ ವಿವಿಧ ಗೆಟಪ್‌ಗಳಲ್ಲಿ ಕಾಣಿಸಿಕೊಂಡಿದ್ದು, ಯಂಗ್ ಲುಕ್ ವಿಶೇಷ ಗಮನ ಸೆಳೆದಿದೆ. ಕೆಲವು ವಾರಗಳ ಹಿಂದೆ ಯಶ್ ಮುಖ ಮುಚ್ಚಿಕೊಂಡು ಓಡಾಡಿದ್ದು ಏಕೆ ಎಂಬ ಪ್ರಶ್ನೆಗೆ ಟೀಸರ್ ಉತ್ತರ ನೀಡಿದೆ. ಮುಂದಿನ ಸಿನಿಮಾದ ಲುಕ್ ಗೌಪ್ಯವಾಗಿಡಲು ಸೆಲೆಬ್ರಿಟಿಗಳು ಬಳಸುವ ಇದೇ ತಂತ್ರವನ್ನು ಯಶ್ ಕೂಡ ಬಳಸಿದ್ದಾರೆ. 'ಟಾಕ್ಸಿಕ್' ಸಿನಿಮಾ ಟೀಸರ್ ರಿಲೀಸ್ ಆಗಿ ಸೆನ್ಸೇಷನ್ ಸೃಷ್ಟಿಸಿದೆ. ಯಶ್ ಅಭಿಮಾನಿಗಳು ಟೀಸರ್‌ನ ಬಹುವಾಗಿ ಇಷ್ಟಪಟ್ಟಿದ್ದಾರೆ. ಯಶ್ ಅವರು ವಿವಿಧ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಈ ಲುಕ್ ಗಮನ ಸೆಳೆದಿದೆ. ಇದರಲ್ಲಿ ಯಶ್ ಅವರು ಯಂಗ್ ಲುಕ್‌ನಲ್ಲಿ ಕಾಣಿಸಿಕೊಂಡ ಲುಕ್ ಕೂಡ ಗಮನ ಸೆಳೆದಿದೆ. ಯಶ್ ಅವರು ಈ ಮೊದಲು ಮುಖವನ್ನು ಮುಚ್ಚಿಕೊಂಡು ಓಡಾಡಿದ್ದರು. ಅದು ಏಕೆ ಎಂಬ ಪ್ರಶ್ನೆ ಮೂಡಿತ್ತು. ಟಾಕ್ಸಿಕ್ ಟೀಸರ್ ಮೂಲಕ ಅದಕ್ಕೆ ಉತ್ತರ ಸಿಕ್ಕಂತೆ ಆಗಿದೆ. ಕೆಲ ವಾರಗಳ ಹಿಂದೆ ಯಶ್ ಮುಂಬೈ ಬೀದಿಗಳಲ್ಲಿ ಕಾಣಿಸಿಕೊಂಡಿದ್ದರು. ಆಗ ಅವರು ಮುಖವನ್ನು ಬಟ್ಟೆಯಿಂದ ಮುಚ್ಚಿಕೊಂಡಿದ್ದರು. ಈ ವಿಡಿಯೋ ಗಮನ ಸೆಳೆಯಿತು. ಯಶ್ ಅವರು ಯಾವಾಗಲೂ ಹೀಗೆ ಕಾಣಿಸಿಕೊಂಡವರಲ್ಲ. ಅವರು ಈ ರೀತಿ ಮಾಡಿದ್ದೇಕೆ ಎಂಬ ಪ್ರಶ್ನೆ ಮೂಡಿತ್ತು. ಅವರು ಗಡ್ಡ ಹಾಗೂ ಕೂದಲಿಗೆ ಕತ್ತರಿ ಹಾಕಿರಬಹುದು ಎಂಬುದು ಅನೇಕರ ಊಹೆ ಆಗಿತ್ತು. ಆ ಊಹೆ ನಿಜವಾಗಿದೆ. ಯಶ್ ಅವರು ಯಂಗ್ ವರ್ಷನ್ ಅಲ್ಲಿ ಕಾಣಿಸಿಕೊಳ್ಳುವ ಉದ್ದೇಶದಿಂದ ಗಡ್ಡ ಹಾಗೂ ತಲೆಕೂದಲು ಕತ್ತರಿಸಿದ್ದರು ಎಂಬುದು ಟೀಸರ್ ನೋಡಿದ ಬಳಿಕ ಪಕ್ಕಾ ಆಗಿದೆ.




# ಶುರುವಾಗಲಿದೆ ಸ್ಪೆಷಲ್ ಕ್ರೀಡಾಕೂಟ

## ಇಲ್ಲಿ ಭಾಗಿಯಾಗಲು ಇದೆ ಒಂದು ವಿಶಿಷ್ಟ ಕಂಡೀಷನ್!

ಸಮಾಜದಲ್ಲಿ ತಲತಲಾಂತರಗಳಿಂದ ಅದರಲ್ಲೂ ಮುಖ್ಯವಾಗಿ ಬ್ರಿಟಿಷ್ ಕಾಲದಿಂದ ಅತೀ ಹಿಂದುಳಿದ ಜನ ನಮ್ಮ ಬುಡಕಟ್ಟು ಜನಾಂಗದವರು. ಅವರಿಗೆ ಸಮಾಜದ ಎಲ್ಲಾ ಸೌಲಭ್ಯಗಳನ್ನು ನೀಡುತ್ತಿದೆ. ಈ ಬಾರಿ ಕೂಡ ಬುಡಕಟ್ಟು ಜನಾಂಗದ ಜನರಿಗೆ ಕ್ರೀಡಾ ಕೂಟವನ್ನ ಏರ್ಪಡಿಸಲಾಗಿದೆ. ಹಾಗಾದ್ರೆ ಯಾವ ಯಾವ ಆಟೋಟ ಸ್ಪರ್ಧೆಗಳನ್ನು ಆಯೋಜನೆ ಮಾಡಿದ್ದಾರೆ.

**ಶುರುವಾಗಲಿದೆ ವಿಶೇಷ ಕ್ರೀಡಾಕೂಟ**

ಅತೀ ಹಿಂದುಳಿದ ಅರಣ್ಯಾಧಾರಿತ ಬುಡಕಟ್ಟು ವರ್ಗದವರಿಗೆ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಫೆಬ್ರವರಿ 21 ಹಾಗೂ 22 ರಂದು ನಗರದ ನೇತಾಜಿ ಸುಭಾಷ್ಚಂದ್ರ ಬೋಸ್ ಆಟದ ಮೈದಾನದಲ್ಲಿ ಆಯೋಜಿಸಲಾಗುವುದು ಎಂದು ಜಿಲ್ಲಾಧಿಕಾರಿ ಎನ್.ಎಂ.ನಾಗರಾಜು ತಿಳಿಸಿದರು. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಹಭಾಗಿತ್ವದಲ್ಲಿ ನಡೆಯುವ ಈ ಕ್ರೀಡಾಕೂಟವು ಫೆಬ್ರವರಿ 21 ರಂದು ಬೆಳಿಗ್ಗೆ 10 ಗಂಟೆಗೆ ಉದ್ಘಾಟನೆಗೊಳ್ಳಲಿದೆ ಎಂದರು.



# ಅಫ್ಘಾನಿಸ್ತಾನಕ್ಕೆ ಕೋಚ್ ವಿದಾಯ!

**ತಂಡ ತೊರೆವಾಗ ಕಣ್ಣೀರು ಹಾಕಿದ್ದೇಕೆ**



ಐಸಿಸಿ 2026 ರ ಟಿ20 ವಿಶ್ವಕಪ್‌ನಿಂದ ಹೊರಬಿದ್ದ ನಂತರ ಅಫ್ಘಾನಿಸ್ತಾನ ತಂಡದ ಹೆಡ್ ಕೋಚ್ ತಮ್ಮ ಹುದ್ದೆಯಿಂದ ಕೆಳಗಿಳಿದಿದ್ದಾರೆ. ಟಿ20 ವಿಶ್ವಕಪ್ 2026 ರಲ್ಲಿ ಅಫ್ಘಾನಿಸ್ತಾನ ತಂಡದ ಪ್ರಯಾಣ ಕೊನೆಗೊಂಡಿದೆ. ಇದರ ಜೊತೆಗೆ, ಅಫ್ಘಾನಿಸ್ತಾನ ತಂಡದೊಂದಿಗಿನ ಹೆಡ್ ಕೋಚ್ ಜೊನಾಥನ್ ಟ್ರಾಟ್ ಅವರ ಪ್ರಯಾಣವೂ ಕೊನೆಗೊಂಡಿದೆ. ಕೆನಡಾ ವಿರುದ್ಧದ ಕೊನೆಯ ಗುಂಪು ಪಂದ್ಯದಲ್ಲಿ 82 ರನ್‌ಗಳ ಗೆಲುವಿನ ನಂತರ ಅಫ್ಘಾನಿಸ್ತಾನ ತಂಡ ಟೂರ್ನಿಯಿಂದ ಹೊರಬಿತ್ತು. ಇತ್ತ ಜೊನಾಥನ್ ಟ್ರಾಟ್ ಕೂಡ ತಂಡಕ್ಕೆ ವಿದಾಯ ಹೇಳಿದರು . ಹೆಡ್ ಕೋಚ್ ಆಗಿ ತಮ್ಮ ಅಂತಿಮ ಪಂದ್ಯದ ನಂತರ ಟ್ರಾಟ್ ಭಾವುಕರಾಗಿದ್ದರು. ಪತ್ರಿಕಾಗೋಷ್ಠಿಯಲ್ಲಿ ಟ್ರಾಟ್ ಕಣ್ಣೀರು ಹಾಕಿದರು.

ಅಫ್ಘಾನ್ ತಂಡವನ್ನು ಪರಿವರ್ತಿಸುವಲ್ಲಿ ಟ್ರಾಟ್ ಮಹತ್ವದ ಪಾತ್ರ ವಹಿಸಿದ್ದಾರೆ. ಪ್ರಸ್ತುತ, ಅಫ್ಘಾನ್ ತಂಡವು ಯಾವುದೇ ಪ್ರಮುಖ ತಂಡವನ್ನು ಅಚ್ಚರಿಗೊಳಿಸುವ ಸಾಮರ್ಥ್ಯವನ್ನು ಹೊಂದಿದೆ. ಈ ಟೂರ್ನಿಯೇ, ಅಫ್ಘಾನಿಸ್ತಾನ ದಕ್ಷಿಣ ಆಫ್ರಿಕಾಕ್ಕೆ ಸಾಕಷ್ಟು ಕಾಟ ಕೊಟ್ಟಿತ್ತು. ಅಫ್ಘಾನಿಸ್ತಾನ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಪಂದ್ಯವು ಡಬಲ್ ಸೂಪರ್ ಓವರ್‌ಗೆ ಹೋಯಿತು. ಅಲ್ಲಿ ದಕ್ಷಿಣ ಆಫ್ರಿಕಾ ಗೆದ್ದಿತು.

**ಕಣ್ಣೀರು ಹಾಕಿದ್ದೇಕೆ:** ಕೆನಡಾ ವಿರುದ್ಧದ ಗೆಲುವಿನ ನಂತರ, ಅಫ್ಘಾನ್ ಕೋಚ್ ಟ್ರಾಟ್ ಪತ್ರಿಕಾಗೋಷ್ಠಿಯಲ್ಲಿ ಕಾಣಿಸಿಕೊಂಡರು. ಅಲ್ಲಿ ಅವರು ತಮ್ಮ ಪ್ರಯಾಣದ ಬಗ್ಗೆ ಮಾತನಾಡಿದರು. ಈ ವೇಳೆ ಅವರ ಧ್ವನಿಯು ಮೃದುವಾಗಿತ್ತು. ಅವರು ತಮ್ಮನ್ನು ತಾವು ಶಾಂತಗೊಳಿಸಿಕೊಳ್ಳುತ್ತಿದ್ದರು. ಐರ್ಲೆಂಡ್‌ಗೆ ತಮ್ಮ ಮೊದಲ ಪ್ರವಾಸವನ್ನು ನೆನಪಿಸಿಕೊಂಡು ಟ್ರಾಟ್ ಭಾವುಕರಾದರು. ಈ ಪ್ರವಾಸದಲ್ಲಿ ಅವರು ನೋಡಿದ ವಿಷಯಗಳನ್ನು ಮೆಲಕು ಹಾಕಿದರು. ಇಬ್ರಾಹಿಂ ಜದ್ರಾನ್, ಅಜ್ಮತುಲ್ಲಾ ಉಮರ್ಜೈ ಮತ್ತು ರಹಮಾನಲ್ಲಾ ಗುರ್ಬಾಜ್ ಅವರನ್ನು ಮೊದಲು ನೋಡಿದಾಗ, ಅವರು ಅದ್ಭುತ ಆಟಗಾರರೆಂದು ಭಾವಿಸಿ ಅವರ ಪ್ರತಿಭೆಯನ್ನು ಪೋಷಿಸಲು ನಿರ್ಧರಿಸಿದ್ದನ್ನು ಅವರು ನೆನಪಿಸಿಕೊಂಡರು.

# ಭಾರತ ವಿರುದ್ಧ ಪಂದ್ಯಕ್ಕೆ ಜಿಂಬಾಬ್ವೆ ವಿಶೇಷ ತಯಾರಿ!

**ಸ್ವಲ್ಪ ಯಾಮಾರಿದ್ರು ಮ್ಯಾಚ್ ಗೆಲ್ಲೋದು ಕಷ್ಟ!**

ಐಸಿಸಿ 2026 ರ ಟಿ20 ವಿಶ್ವಕಪ್‌ನಲ್ಲಿ ಜಿಂಬಾಬ್ವೆ ತನ್ನ ಆಟದ ಮೂಲಕ ಸಾಕಷ್ಟು ಪ್ರಭಾವ ಬೀರಿದೆ. ಈಗ ಜಿಂಬಾಬ್ವೆ ತಂಡವು ಸೂಪರ್ ಎಂಟರಲ್ಲಿ ಭಾರತದೊಂದಿಗೆ 'ಎ' ಗುಂಪಿನಲ್ಲಿದೆ.

ಟಿ20 ವಿಶ್ವಕಪ್ 2026 ರ ಗುಂಪು ಹಂತದಲ್ಲಿ ಆಸ್ಟ್ರೇಲಿಯಾ ಮತ್ತು ಶ್ರೀಲಂಕಾವನ್ನು ಸೋಲಿಸಿದ ಬಳಿಕ ಜಿಂಬಾಬ್ವೆ ಎಲ್ಲರ ಗಮನ ಸೆಳೆದಿದೆ. ಟೂರ್ನಿಯ ಆರಂಭದಲ್ಲಿ ಜಿಂಬಾಬ್ವೆ ತಂಡ ಈ ಮಟ್ಟಿಗೆ ಪ್ರದರ್ಶನ ನೀಡುತ್ತದೆ ಎಂದು ಯಾರೂ ಊಹಿಸಿರಲಿಲ್ಲ. ಗುಂಪು ಹಂತದಲ್ಲಿ ಬಲಿಷ್ಠ ತಂಡಗಳನ್ನು ಮಕಾಡೆ ಮಲಗುವಂತೆ ಮಾಡಿ ಜಿಂಬಾಬ್ವೆ ಸೂಪರ್ -8 ರ ಹಂತಕ್ಕೆ ಅರ್ಹತೆ ಪಡೆದುಕೊಂಡಿದೆ. ಈಗ ಭಾರತ ವಿರುದ್ಧದ ಸೂಪರ್- 8 ರ ಪಂದ್ಯಕ್ಕಾಗಿ ಜಿಂಬಾಬ್ವೆ ವಿಶೇಷ ಸಿದ್ಧತೆ ಗಳನ್ನು ಮಾಡಿಕೊಂಡಿದೆ.

ಭಾರತ ವಿರುದ್ಧದ ಪಂದ್ಯಕ್ಕೂ ಮುನ್ನ ತಮ್ಮನ್ನು ದುರ್ಬಲರೆಂದು ಕರೆದರೂ, ನಾವು ಆರಾಮದಾಯಕವಾಗಿದ್ದೇವೆ. ನಮ್ಮ ತಂಡವು ತಯಾರಿಯಲ್ಲಿ ಎಲ್ಲವನ್ನೂ ಸರಿಯಾಗಿ ಮಾಡಿದೆ ಎಂದು ಜಿಂಬಾಬ್ವೆ ಸಹಾಯಕ ಕೋಚ್ ಡೋಯೆನ್ ಇಬ್ರಾಹಿಂ ಹೇಳಿದ್ದಾರೆ. ಈ ಸಂದರ್ಭದಲ್ಲಿ ನಮ್ಮ ತಂಡವು ಭಯಭೀತರಾಗದಿರುವುದು ಮುಖ್ಯ ಎಂದು ಇಬ್ರಾಹಿಂ ತಿಳಿಸಿದ್ದಾರೆ.

**ವಿಶೇಷ ತಯಾರಿ:** ಸೂಪರ್-8 ರ ಹಂತದಲ್ಲಿ, ಜಿಂಬಾಬ್ವೆ ಹಾಲಿ ಚಾಂಪಿಯನ್ ಭಾರತ, ಎರಡು ಬಾರಿಯ ಚಾಂಪಿಯನ್ ವೆಸ್ಟ್ ಇಂಡೀಸ್ ಮತ್ತು 2024 ರ ರನ್ನರ್ ಅಪ್ ದಕ್ಷಿಣ ಆಫ್ರಿಕಾವನ್ನು ಎದುರಿಸಲಿದೆ. ಶ್ರೇಯಾಂಕಗಳು ಮತ್ತು ಇತರ ಪ್ರತಿಯೊಂದು ಮೆಟ್ರಿಕ್ ನಮ್ಮನ್ನು ದುರ್ಬಲರು ಎಂದು ಲೇಬಲ್ ಮಾಡುತ್ತದೆ. ಇದು ಸಂಪೂರ್ಣವಾಗಿ ಸರಿಯಾಗಿದೆ. ಈ ವರ್ಷದ ವಿಶ್ವಕಪ್‌ಗೆ ನಾವು ಬಂದಾಗ, ಖಂಡಿತವಾಗಿಯೂ ಗುಂಪಿನಲ್ಲಿ ದುರ್ಬಲರಾಗಿದ್ದರು ಎಂದು ಭಾವಿಸಿದ್ದರು. ಈಗ ನಾವು ಇದೇ ರೀತಿಯಲ್ಲಿ ಆಡಲು ಬಯಸುತ್ತೇವೆ ಎಂದು ಇಬ್ರಾಹಿಂ ಹೇಳಿದ್ದಾರೆ.



# ರಾಧಾ ಯಾದವ್ ಆಲ್‌ರೌಂಡ್ ಪ್ರದರ್ಶನ!

**ಫೈನಲ್ ತಲುಪಿದ ಟೀಮ್ ಇಂಡಿಯಾ**



ಭಾರತ ಮಹಿಳಾ ತಂಡವು ಶ್ರೀಲಂಕಾವನ್ನು 5 ವಿಕೆಟ್‌ಗಳಿಂದ ಸೋಲಿಸಿ 2026 ರ ಏಷ್ಯಾ ಕಪ್ ರೈಸಿಂಗ್ ಸ್ಟಾರ್ಸ್ ಫೈನಲ್ ತಲುಪಿತು. ನಾಯಕಿ ರಾಧಾ ಯಾದವ್ 4 ವಿಕೆಟ್‌ಗಳನ್ನು ಪಡೆದು ಶ್ರೀಲಂಕಾವನ್ನು 118 ರನ್‌ಗಳಿಗೆ ಆಲೌಟ್ ಮಾಡಿದರು.

ಥೈಲ್ಯಾಂಡ್‌ನ ಬ್ಯಾಂಕಾಕ್‌ನಲ್ಲಿ ನಡೆಯುತ್ತಿರುವ ಮಹಿಳಾ ಏಷ್ಯಾ ಕಪ್ ರೈಸಿಂಗ್ ಸ್ಟಾರ್ಸ್ 2026 ರಲ್ಲಿ ಭಾರತ ತಂಡವು ತನ್ನ ಅದ್ಭುತ ಪ್ರದರ್ಶನವನ್ನು ಮುಂದುವರೆಸಿದೆ. ಭಾರತ ತಂಡವು ಈಗ ಫೈನಲ್ ತಲುಪಿದೆ. ಸೆಮಿಫೈನಲ್‌ನಲ್ಲಿ ಟೀಮ್ ಇಂಡಿಯಾ ಶ್ರೀಲಂಕಾ ಮಹಿಳಾ ತಂಡವನ್ನು ಎದುರಿಸಿತು. ಈ ಪಂದ್ಯದಲ್ಲಿ ಭಾರತ ತಂಡವು ಸುಲಭವಾಗಿ ಗೆದ್ದಿತು. ಟೀಮ್ ಇಂಡಿಯಾದ ಗೆಲುವಿನಲ್ಲಿ ಬೌಲರ್ ನಿರ್ಣಾಯಕ ಪಾತ್ರ ವಹಿಸಿದರು. ಬೌಲಿಂಗ್ ಜೊತೆಗೆ, ಟೀಮ್ ಇಂಡಿಯಾ ಬ್ಯಾಟಿಂಗ್‌ನಲ್ಲಿ ಶಕ್ತಿ ಪ್ರದರ್ಶಿಸಿ ಶ್ರೀಲಂಕಾವನ್ನು 5 ವಿಕೆಟ್‌ಗಳಿಂದ ಸೋಲಿಸಿತು.

ಅನುಷ್ಕಾ ಸಂಜೀವನಿ ನೇತೃತ್ವದ ಶ್ರೀಲಂಕಾ ತಂಡವು 119 ರನ್‌ಗಳ ಗುರಿಯನ್ನು ನೀಡಿತ್ತು. ಇದನ್ನು ಭಾರತ ತಂಡ 13.3 ಓವರ್‌ಗಳಲ್ಲಿ ಐದು ವಿಕೆಟ್‌ಗಳ ನಷ್ಟಕ್ಕೆ ಸಾಧಿಸಿತು. ಸೆಮಿಫೈನಲ್‌ನಲ್ಲಿ ಭಾರತ ತಂಡದ ಗೆಲುವಿನ ತಾರೆ ನಾಯಕಿ ರಾಧಾ ಯಾದವ್. ಅವರು ಮೊದಲು 19 ರನ್‌ಗಳಿಗೆ ನಾಲ್ಕು ವಿಕೆಟ್‌ಗಳನ್ನು ಕಬಳಿಸಿದರೆ, ನಂತರ 18 ಎಸೆತಗಳಲ್ಲಿ ಅಜೇಯ 31 ರನ್‌ಗಳನ್ನು ಗಳಿಸಿದರು. ಈಗ, ಫೈನಲ್‌ನಲ್ಲಿ, ಬಾಂಗ್ಲಾದೇಶ ಮತ್ತು ಪಾಕಿಸ್ತಾನ ನಡುವಿನ ಎರಡನೇ ಸೆಮಿಫೈನಲ್‌ನ ವಿಜೇತರನ್ನು ಭಾರತ ಎದುರಿಸಲಿದೆ. ಫೈನಲ್ ಪಂದ್ಯ ಫೆಬ್ರವರಿ 22 ರಂದು ನಡೆಯಲಿದೆ.

ಮತ್ತೊಂದು ಹೈವೋಲ್ಟೇಜ್ ಪಂದ್ಯಕ್ಕಾಗಿ ಕ್ರಿಕೆಟ್ ಅಭಿಮಾನಿಗಳು ಕಾಯುತ್ತಿದ್ದಾರೆ.

# ಭಾರತ ಈ ತಪ್ಪು ಮಾಡಬಾರದು!

ಭಾರತ ತಂಡವು ಸೂಪರ್ 8 ರಲ್ಲಿ ಕಠಿಣ ಸವಾಲನ್ನು ಎದುರಿಸಲಿದೆ. ಆದರೆ ಆ ಕಠಿಣ ಸವಾಲನ್ನು ಎದುರಿಸುವ ಮೊದಲು ಟೀಮ್ ಇಂಡಿಯಾ ತನ್ನ ಕೆಲವು ನ್ಯೂನತೆಗಳನ್ನು ನಿವಾರಿಸಬೇಕಾಗಿದೆ. ಸೂರ್ಯಕುಮಾರ್ ಯಾದವ್ ನೇತೃತ್ವದಲ್ಲಿ ಭಾರತ 2026 ರ ಟಿ20 ವಿಶ್ವಕಪ್‌ನಲ್ಲಿ ಅದ್ಭುತ ಪ್ರದರ್ಶನ ನೀಡುತ್ತಿದೆ. ಟೀಮ್ ಇಂಡಿಯಾ ಸೂಪರ್ 8 ರ ಹಂತಕ್ಕೆ ಗ್ರೂಪ್ ಹಂತದಲ್ಲಿ ಒಂದೇ ಒಂದು ಪಂದ್ಯವನ್ನು ಸೋಲದೆ ಮುನ್ನಡೆದಿದೆ. ಈಗ ಸೂಪರ್ 8 ರ ಹಂತದಲ್ಲಿ ದಕ್ಷಿಣ ಆಫ್ರಿಕಾ, ವೆಸ್ಟ್ ಇಂಡೀಸ್ ಮತ್ತು ಜಿಂಬಾಬ್ವೆ ತಂಡಗಳನ್ನು ಎದುರಿಸಲಿದೆ . ದಕ್ಷಿಣ ಆಫ್ರಿಕಾ ಕಳೆದ ಟಿ20 ವಿಶ್ವಕಪ್‌ನ ರನ್ನರ್-ಅಪ್ ಆಗಿದ್ದರೆ, ವೆಸ್ಟ್ ಇಂಡೀಸ್ ಎರಡು ಬಾರಿ ಹಾಲಿ ಚಾಂಪಿಯನ್ ಆಗಿದೆ. ಮತ್ತೊಂದೆಡೆ ಜಿಂಬಾಬ್ವೆ ಗುಂಪು ಹಂತದಲ್ಲಿ ಆಸ್ಟ್ರೇಲಿಯಾ ಮತ್ತು ಶ್ರೀಲಂಕಾವನ್ನು ಸೋಲಿಸಿರುವುದರಿಂದ ಹಗುರವಾಗಿ ತೆಗೆದುಕೊಳ್ಳವಂತಿಲ್ಲ.

ಸೂಪರ್ 8 ರಲ್ಲಿ ಭಾರತ ತಂಡವು ಕಠಿಣ ಸವಾಲನ್ನು ಎದುರಿಸಲಿದೆ. ಆದರೆ ಆ ಸವಾಲನ್ನು ಎದುರಿಸುವ ಮೊದಲು ಭಾರತ ತಂಡವು ತನ್ನ ಕೆಲವು ನ್ಯೂನತೆಗಳನ್ನು ಸರಿಪಡಿಸಿಕೊಳ್ಳಬೇಕಾಗಿದೆ. ಈ ಬಗ್ಗೆ ಸಹಾಯಕ ಕೋಚ್ ರಯಾನ್ ಟೆನ್ ಡೋಸ್ಚೇಟ್ ಟೀಮ್ ಇಂಡಿಯಾದ ಕೆಲವು ವೀಕ್ನೆಸ್ ಅನ್ನು ಬಹಿರಂಗಪಡಿಸಿದ್ದಾರೆ.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966